# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಮಂಗಳವಾರ, ನವೆಂಬರ್ 05, 2024

ಸಂಪುಟ : 51 ಸಂಚಿಕೆ : 172 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಬದುಕಿನ ಸಾರ್ಥಕತೆ, ಆತ್ಮೋನ್ನತಿಗೆ ಹರನಂತೆ ಗುರುವನ್ನೂ ಸ್ಮರಿಸಬೇಕು

**ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಕರೆ**

ದಾವಣಗೆರೆ, ನ. 4- ಬದುಕಿನ ಸಾರ್ಥಕತೆಗೆ ಮತ್ತು ಆತ್ಮೋನ್ನತಿಗಾಗಿ ಹರನನ್ನು ಸ್ಮರಿಸುವಂತೆ ಗುರುವನ್ನೂ ಸಹ ಸ್ಮರಿಸಬೇಕೆಂದು ಶ್ರೀಶೈಲ ಜಗದ್ಗುರು ಶ್ರೀ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಕರೆ ನೀಡಿದರು.

ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ ಹಿರೇಮಠದ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಮೂರು ದಿನಗಳ ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 38 ನೇ ಸ್ಮರಣೋತ್ಸವ ಹಾಗೂ ಲಿ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 13 ನೇ ವರ್ಷದ ಪುಣ್ಯಾರಾಧನೆ, ಜನಜಾಗೃತಿ ಧರ್ಮ ಸಮ್ಮೇಳನದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ತಂದೆ-ತಾಯಂದಿರು ನಮ್ಮನ್ನು ದೇವಲೋಕದಿಂದ ಭೂಲೋಕಕ್ಕೆ ತಂದಿರುತ್ತಾರೆ. ಆದರೆ ಗುರು ಸುಜ್ಞಾನ ಮತ್ತು ಸಂಸ್ಕಾರಗಳನ್ನು ನೀಡುವ ಮುಖೇನ ಭೂಲೋಕದಿಂದ ನಮ್ಮನ್ನು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ. ಆದ್ದರಿಂದ ಜನ್ಮ ನೀಡಿದ ತಂದೆ-ತಾಯಂದಿರು ಶ್ರೇಷ್ಠರಾದರೆ, ಗುರುವು ಪರಮ ಶ್ರೇಷ್ಠನಾಗಿ ನಮಗೆ ನಿರಂತರ ಮಾರ್ಗದರ್ಶನ ನೀಡಿ, ಉದ್ಧರಿಸಿದ ಗುರುಗಳ ಉಪಕಾರದ ಋಣವನ್ನು ತೀರಿಸಲು ಸಾಧ್ಯವಿಲ್ಲ ಎಂದರು.

ಶಿವ ತನ್ನ ಕೈಯಲ್ಲಿ ಹಿಡಿದಿರುವ ಎಲ್ಲಾ ಶಸ್ತ್ರಾಸ್ತ್ರಗಳನ್ನು ಬಿಟ್ಟು ಶಾಸ್ತ್ರಗಳನ್ನು ಹಿಡಿದುಕೊಂಡು ಭುವಿಗೆ ಅವತರಿಸಿದ ದೇವರೇ ಸದ್ಗುರುವಾಗಿದ್ದಾನೆ ಎಂದು ಹೇಳಿದರು.

ಸಾಮಾನ್ಯವಾಗಿ ದುಷ್ಟರ ಸಂಹಾರ ಮತ್ತು ಶಿಷ್ಟರ ಪರಿಪಾಲನಾರ್ಥವಾಗಿ ದೇವರು ಅನೇಕ ಅವತಾರಗಳನ್ನು ತಾಳುತ್ತಾನೆ. ಆ ಕಾರಣಕ್ಕಾಗಿ ರಾಮ, ಕೃಷ್ಣ ಮೊದಲಾದ ದೇವರ ಅನೇಕ ಅವತಾರಗಳ ಕೈಯಲ್ಲಿ ವಿಭಿನ್ನ ಶಸ್ತ್ರಾಸ್ತ್ರಗಳಿರುವುದನ್ನು ಕಾಣುತ್ತೇವೆ. ಆದರೆ ಸದ್ಗುರುವು ದುಷ್ಟರನ್ನು ಸಂಹರಿಸುವುದಿಲ್ಲ. ಬದಲಾಗಿ ದುಷ್ಟರಲ್ಲಿರುವ ದುಷ್ಟ ಬುದ್ದಿಯನ್ನು ಸಂಹರಿಸುತ್ತಾನೆ. ಬುದ್ದಿಯ ಪರಿವರ್ತನೆಗೆ ಶಸ್ತ್ರಾಸ್ತ್ರಗಳಿಗಿಂತ ಶಾಸ್ತ್ರದ ಅವಶ್ಯಕತೆ ಅಧಿಕವಾಗಿರುತ್ತದೆ ಎಂದು ತಿಳಿಸಿದರು.

'ವೀರಶೈವ ಧರ್ಮವನ್ನು ಪೋಷಿಸಿದ ರಾಜ ಮನೆತನಗಳು' ಕುರಿತು ಉಪನ್ಯಾಸ ನೀಡಿದ ಹಿಪ್ಪರಗಿಯ ಸಿ.ಜಿ.ಮಠಪತಿ ಅವರು, ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಧರ್ಮವೇ ಹೊರತು ಪ್ರತ್ಯೇಕ ಅಲ್ಲ ಎಂದರು.

(2ನೇ ಪುಟಕ್ಕೆ)

# ವಕ್ಫ್ ನೋಟಿಸ್: ಬಿಜೆಪಿ ಪ್ರತಿಭಟನೆ

## ಸಚಿವ ಜಮೀರ್ ಮೂಲಕ ಕೃಷಿ ಭೂಮಿ ಕಸಿಯಲು ಸಿದ್ಧರಾಮಯ್ಯ ಯತ್ನ: ಆರೋಪ

ಬೆಂಗಳೂರು, ನ. 4 - ಸಚಿವ ಜಮೀರ್ ಅಹಮದ್ ಮೂಲಕ ರೈತರ ಕೃಷಿ ಭೂಮಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕಸಿಯಲು ಹೊರಟಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ರೈತರ ಆಸ್ತಿಗಳಿಗೆ ವಕ್ಫ್ ಮಂಡಳಿ ನೀಡಿರುವ ನೋಟಿಸ್ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಂಡಿದ್ದ ಬಿಜೆಪಿ, ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದು ರೈತರ ಭೂಮಿ ಉಳಿಸಬೇಕೆಂದು ಆಗ್ರಹಿಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕ ಆರ್. ಅಶೋಕ್, ಮಾಜಿ ಸಚಿವರಾದ ಡಾ. ಅಶ್ವತ್ಥನಾರಾಯಣ, ಭೈರತಿ ಬಸವರಾಜ್, ಕೆ. ಗೋಪಾಲಯ್ಯ ಸೇರಿದಂತೆ ಪಕ್ಷದ ಸಂಸದರು, ಶಾಸಕರು, ಮುಖಂಡರು, ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ರೈತರ ಪಹಣಿಗಳನ್ನು ತಿದ್ದುಪಡಿ ಮಾಡಬೇಕೆಂದು ಒತ್ತಾಯಿಸಿದರು.

ವಕ್ಫ್ ಮಂಡಳಿ ಭೂಮಿ ಕಬಳಿಸುತ್ತಿರುವುದು ರೈತರ ಪಾಲಿಗೆ ಮರಣ ಶಾಸನವಾಗಿದೆ. ಆದರೆ, ಭೂಕಬಳಿಕೆಯ ಈ ಆಟ ನಡೆಯದು, ಹಿಂದೂಗಳು ಬಿಡುವುದಿಲ್ಲ. ಕೂಡಲೇ ವಕ್ಫ್ ಕಾಯಿದೆಯಲ್ಲಿ ಬದಲಾವಣೆ ತನ್ನಿ ಎಂದು ನಾಯಕರು ಒತ್ತಾಯಿಸಿದರು.

ಜಮೀನು ಕಬಳಿಸುವ ಮೂಲಕ ಅನ್ನದಾತರ ಕಣ್ಣಲ್ಲಿ ನೀರು ತರಿಸಿದ ಸಿದ್ದರಾಮಯ್ಯ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಪಡಿಸಿದರು.

ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಲಾಯಿತು.

ಬಳ್ಳಾರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿ, ವಕ್ಫ್ ಜಮೀನಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಬಿಜೆಪಿ ತೀವ್ರ ಹೋರಾಟ ಕೈಗೊಂಡಿದೆ ಎಂದರು. ಪ್ರತಿಭಟ

(5ನೇ ಪುಟಕ್ಕೆ)




## ನಗರದಲ್ಲಿ ಬಿಜೆಪಿ ಮುಖಂಡರ ಬಂಧನ - ಬಿಡುಗಡೆ

ದಾವಣಗೆರೆ, ನ.4- ವಕ್ಫ್ ಹೆಸರಿನಲ್ಲಿ ರೈತರ ಜಮೀನು ಕಬಳಿಸುವ ಹುನ್ನಾರವನ್ನು ವಿರೋಧಿಸಿ ಹಾಗೂ ಸಚಿವ ಜಮೀರ್ ಅಹಮದ್ ಅವರನ್ನು ಕೂಡಲೇ ಸಚಿವ ಸಂಪುಟ ಸ್ಥಾನದಿಂದ ವಜಾಗೊಳಿಸುವಂತೆ ಒತ್ತಾಯಿಸಿ ಸೋಮವಾರ ಬಿಜೆಪಿ ಮುಖಂಡರು ಇಲ್ಲಿನ ಉಪವಿಭಾಗಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ನಗರದ ಜಿಲ್ಲಾ ಭಾಜಪ ಕಚೇರಿ ಬಳಿ ಜಮಾಯಿಸಿದ್ದ ಬಿಜೆಪಿಯ ಮುಖಂಡರು ಮತ್ತು ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರ ಹಾಗೂ ಸಚಿವ ಜಮೀರ್ ಅಹಮದ್ ವಿರುದ್ಧ ಘೋಷಣೆ ಹಾಕುತ್ತಾ ಎಸಿ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಈ ವೇಳೆ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಗಾಯತ್ರಿ ಸಿದ್ದೇಶ್ವರ, ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ, ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ಮತ್ತು ಬಿ.ಜಿ. ಅಜಯ್ ಕುಮಾರ್ ಸೇರಿದಂತೆ 50ಕ್ಕೂ ಅಧಿಕ ಪ್ರತಿಭಟನಾಕಾರರನ್ನು ಆರಕ್ಷಕರು ಬಂಧಿಸಿ, ನಂತರ ಪೊಲೀಸ್ ಕವಾಯತು ಮೈದಾನದಲ್ಲಿ ಬಿಡುಗಡೆಗೊಳಿಸಿದರು.

**ಒಂದಿಂಚು ಜಾಗವನ್ನೂ ಬಿಡುವುದಿಲ್ಲ..!**

**ಮುಡಾ ಹಾಗೂ ವಾಲ್ಮೀಕಿ ಹಗರಣದಲ್ಲಿ ಕಾಂಗ್ರೆಸ್ ಮುಳುಗಿದೆ. ಮುಡಾ ಹಗರಣವನ್ನು ಜನರಿಂದ ಮರೆಸಲು ವಕ್ಫ್ ಗೊಂದಲ ಸೃಷ್ಟಿಸುತ್ತಿದ್ದಾರೆ. ನಾವೆಲ್ಲಾ ಹಿಂದೂಗಳು, ಒಗ್ಗಟ್ಟಿನಿಂದ ಇದನ್ನು ಎದುರಿಸಿ ಒಂದಿಂಚು ಜಾಗವನ್ನು ಬಿಟ್ಟು ಕೊಡದಂತೆ ಈ ದುರಾಡಳಿತದ ವಿರುದ್ಧ ಹೋರಾಟ ನಡೆಸೋಣ ಎಂದು ಪರಾಜಿತ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದರು.**

ಇದಕ್ಕೂ ಮುನ್ನ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಮಠಗಳು, ದೇವಸ್ಥಾನಗಳು, ಹಿಂದೂಗಳ ಆಸ್ತಿ ಮತ್ತು ರೈತರ ಜಮೀನು ಸೇರಿದಂತೆ 1 ಲಕ್ಷಕ್ಕೂ ಅಧಿಕ ಹೆಕ್ಟೇರ್ ಜಮೀನುಗಳನ್ನು ವಕ್ಫ್ ಕಬಳಿಸುತ್ತಿದೆ. ಹಾಗಾಗಿ ದೇಶದಲ್ಲಿ ನಮ್ಮ ಹಕ್ಕು ಉಳಿಸಿಕೊಳ್ಳಲು ನಾವು ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತಿದ್ದೇವೆ ಎಂದರು.

ಸಿದ್ದರಾಮಯ್ಯನವರು ಕೇವಲ ಮೌಖಿಕವಾಗಿ ನೋಟಿಸ್ ಹಿಂಪಡೆದರೆ ಸಾಲದು 1974-75ರ ಗೆಜೆಟ್ ನೋಟಿಫಿ ಕೇಷನ್ ರದ್ದುಗೊಳಿಸುವ ಜತೆಗೆ ಕಾಲಂ ನಂಬರ್ 11ರಲ್ಲಿ ವಕ್ಫ್ ಆಸ್ತಿ ಎಂದು ನಮೂ ದಾಗುತ್ತಿರುವುನ್ನು ಕೈ ಬಿಡಬೇಕು ಅಲ್ಲಿಯ ವರೆಗೂ ಪಕ್ಷದ ಹೋರಾಟ ನಿಲ್ಲಲ್ಲ ಎಂದು ಗುಡುಗಿದರು. ವಕ್ಫ್ ಬೋರ್ಡಿನ ರದ್ದತಿಗೆ ಎಲ್ಲರೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಬೇಕು. 3ನೇ ಅವಧಿಯಲ್ಲಿ ಪ್ರಧಾನಿ

(3ನೇ ಪುಟಕ್ಕೆ)

## ವಕ್ಫ್ ಆಸ್ತಿ ತೆರವಿಗೆ ಬಿಜೆಪಿ ಸರ್ಕಾರದಲ್ಲಿ 216 ನೋಟಿಸ್

**ಬೊಮ್ಮಾಯಿ ಈಗ ಉಲ್ಟಾ ಹೊಡೆದಿದ್ದಾರೆ ಎಂದು ಸಿದ್ದರಾಮಯ್ಯ ತರಾಟೆ**

ಬೆಂಗಳೂರು, ನ. 4 - ವಕ್ಫ್ ಆಸ್ತಿ ತೆರವುಗೊಳಿಸಲು 216 ಪ್ರಕರಣಗಳಲ್ಲಿ ಬಿಜೆಪಿಯೇ ನೋಟೀಸ್ ಕೊಟ್ಟಿತ್ತು. ವಕ್ಫ್ ಆಸ್ತಿ ಕಾಪಾಡುತ್ತೇನೆಂದಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈಗ ಉಲ್ಟಾ ಹೊಡೆದು 'ಯು-ಟರ್ನ್' ತೆಗೆದುಕೊಂಡಿದ್ದೇಕೆ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ರಾಜಕೀಯಕ್ಕಾಗಿ ಡಬ್ಬಲ್ ಗೇಮ್ ಆಡಬಹುದಾ? ಉಲ್ಟಾ ಹೊಡೆಯಬಹುದಾ? ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಒತ್ತುವರಿಯಾಗಿರುವ ಇಂಚಿಂಚು ವಕ್ಫ್ ಆಸ್ತಿ ಕಾಪಾಡುವುದಾಗಿ ಹೇಳಿದ್ದರು. ಈಗ ರಾಜಕೀಯಕ್ಕಾಗಿ ವಿರುದ್ಧವಾಗಿ ಮಾತನಾಡುತ್ತಾರೆ. ಅವರೇ ಹೇಳಿದ್ದ ಮಾತುಗಳಿಂದ ಉಲ್ಟಾ ಹೊಡೆದಿದ್ದಾರೆ. ಬಿಜೆಪಿಯ ಡಬ್ಬಲ್ ಗೇಮ್ ವಿಚಾರವನ್ನು ಜನರಿಗೆ ತಲುಪಿಸುತ್ತಿದ್ದೇವೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಈ ವಿಚಾರ ಇಟ್ಟುಕೊಂಡು ರಾಜಕಾರಣ ಮಾಡಲು ಹೋರಾಡುತ್ತಿದೆ. ವಕ್ಫ್ ಆಸ್ತಿ ವಿಚಾರ ನಿನ್ನೆ ಮೊನ್ನೆಯದಲ್ಲ. ಬಿಜೆಪಿ ಸರ್ಕಾರದ ಕಾಲದಲ್ಲೂ ನೋಟಿಸ್ ಕೊಟ್ಟಿದ್ದಾರೆ, ಎಲ್ಲಾ ಕಾಲದಲ್ಲಿಯೂ ನೋಟಿಸ್ ನೀಡಲಾಗಿದೆ ಎಂಬುದು ಜನರಿಗೆ ಅರ್ಥವಾಗಿದೆ ಎಂದರು.

ಸಚಿವರಾದ ಹೆಚ್.ಕೆ ಪಾಟೀಲ್, ಕೃಷ್ಣಭೈರೇಗೌಡ ಅವರೊಂದಿಗೆ ಸಭೆ ನಡೆಸಿ, ವಕ್ಫ್ ನೋಟಿಸ್ ನೀಡಿದ್ದಲ್ಲಿ ವಾಪಸ್ ಪಡೆಯಬೇಕು. ವಿಚಾರಣೆ ಇಲ್ಲದೆ, ಯಾವುದೇ ಪಹಣಿಯಲ್ಲಿ ಬದಲಾವಣೆ ಮಾಡಿಗಿದ್ದರೆ ರದ್ದು ಮಾಡಬೇಕು ಹಾಗೂ ಯಾವುದೇ ಕಾರಣಕ್ಕೂ ರೈತರನ್ನು ಒಕ್ಕಲೆಬ್ಬಿಸಬಾರದು ಎಂದು ಸ್ಪಷ್ಟ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಮುಸ್ಲಿಂ, ಹಿಂದೂ,

(3ನೇ ಪುಟಕ್ಕೆ)

## ಸೌರ ವಲಯದ ಹೂಡಿಕೆ 500 ಶತಕೋಟಿ ಡಾಲರ್

ನವದೆಹಲಿ, ನ. 4 - ಈ ವರ್ಷ ಜಾಗತಿಕ ಸೌರ ವಲಯದ ಹೂಡಿಕೆ ಪ್ರಮಾಣ 500 ಶತಕೋಟಿ ಡಾಲರ್‌ಗಳಿಗೆ ತಲುಪಬಹುದು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹೇಳಿದ್ದಾರೆ. 2023ರಲ್ಲಿ ಸೌರ ಶಕ್ತಿ ವಲಯದಲ್ಲಿ 393 ಶತಕೋಟಿ ಡಾಲರ್ ಹೂಡಿಕೆ ಮಾಡಲಾಗಿತ್ತು.

ಈ ಹೂಡಿಕೆಗಳ ಕಾರಣದಿಂದಾಗಿ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ದೇಶಾದ್ಯಂತ ಹೆಚ್ಚಾಗುವ ಜೊತೆಗೆ, ಸೌರ ಶಕ್ತಿಯ ಉತ್ಪಾದನಾ ವೆಚ್ಚವೂ ಕಡಿಮೆಯಾಗುತ್ತಿದೆ ಎಂದು ಕೇಂದ್ರ ನವೀಕರಣ ಇಂಧನ ಸಚಿವರೂ ಆಗಿರುವ ಅಂತರ ರಾಷ್ಟ್ರೀಯ ಸೌರ ಒಕ್ಕೂಟದ ಅಧ್ಯಕ್ಷ ಪ್ರಹ್ಲಾದ್ ಜೋಷಿ ಹೇಳಿದ್ದಾರೆ.

**2023ರಲ್ಲಿ ಸೌರ ಶಕ್ತಿ ವಲಯದಲ್ಲಿ 393 ಶತಕೋಟಿ ಡಾಲರ್ ಹೂಡಿಕೆ ಮಾಡಲಾಗಿತ್ತು.**


ಸೌರ ವಿದ್ಯುತ್ ವಲಯದಲ್ಲಿ ದಾಖಲೆ ಹೂಡಿಕೆ ಹರಿದು ಬರುತ್ತಿದೆ. 2018ರಲ್ಲಿ ಈ ವಲಯದಲ್ಲಿ 144 ಶತಕೋಟಿ ಡಾಲರ್ ಹೂಡಿಕೆ ಮಾಡಲಾಗಿತ್ತು. ಇದು 2024ರ ಅಂತ್ಯದ ವೇಳೆಗೆ 500 ಶತಕೋಟಿ ಡಾಲರ್‌ಗಳಿಗೆ ತಲುಪಲಿದೆ ಎಂದವರು ಹೇಳಿದ್ದಾರೆ.

ಸೌರಶಕ್ತಿಯು ಈಗ ಹಲವಾರು ವಲಯಗಳಲ್ಲಿ ಕಲ್ಲಿದ್ದಲು ಹಾಗೂ ಅನಿಲಕ್ಕಿಂತಲೂ ಕಡಿಮೆ ವೆಚ್ಚದಾಯಕವಾಗಿದೆ. 2030ರ ವೇಳೆಗೆ ಸೌರಶಕ್ತಿ ವಲಯದ ಹೂಡಿಕೆ 1,000 ಶತಕೋಟಿ ಡಾಲರ್‌ಗಳಿಗೆ ತಲುಪುವ ಗುರಿ ಇದೆ ಎಂದವರು ಹೇಳಿದರು.

ಪ್ರತಿ ವರ್ಷ 1,000 ಜಿ.ಡಬ್ಲ್ಯೂ. ಸೌರ ವಿದ್ಯುತ್

(2ನೇ ಪುಟಕ್ಕೆ)

## ವಿಜಯಪುರ ಗೋಲ್‌ಗುಂಬಜ್ ಸೇರಿ 43 ಸ್ಮಾರಕಗಳು ತನ್ನದೆಂದ ವಕ್ಫ್



ಬೆಂಗಳೂರು, ನ. 4 – ವಿಜಯಪುರದ ರೈತರ ಜಮೀನು ಹಾಗೂ ಮಠಗಳ ಜಮೀನುಗಳು ತನಗೆ ಸೇರಿದ್ದು ಎಂದು ವಕ್ಫ್ ನೋಟಿಸ್ ಕಳಿಸಿದ್ದು ವಿವಾದವಾಗಿರುವ ಬೆನ್ನಲ್ಲೇ, ಜಿಲ್ಲೆಯ ಗೋಲ್‌ಗುಂಬಜ್ ಹಾಗೂ ಬಾರಾ ಕಮಾನ್ ಸೇರಿದಂತೆ 43 ಸ್ಮಾರಕಗಳು ತನಗೆ ಸೇರಿದ್ದು ಎಂದು ವಕ್ಫ್ ತಗಾದೆ ಮಾಡಿರುವುದು ಬೆಳಕಿಗೆ ಬಂದಿದೆ.

2009ರಲ್ಲಿ ಈ ಬಗ್ಗೆ ವಕ್ಫ್ ನೋಟಿಸ್ ಕಳಿಸಿದೆ ಹಾಗೂ ಈ ಬಗ್ಗೆ ಕುರಿತ ಭೂ ದಾಖಲೆಗಳು ಬೆಳಕಿಗೆ ಬಂದಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಹೆಸರಾಂತ ಸ್ಮಾರಕ ಹಾಗೂ ಪ್ರವಾಸಿ ತಾಣಗಳು ವಕ್ಫ್‌ಗೆ ಸೇರಿದ್ದು ಎಂದು ಭೂ ದಾಖಲೆಗಳಲ್ಲಿ ಹೇಳಲಾಗಿದೆ. ಆದರೆ, ಈ ರಕ್ಷಿತ ತಾಣಗಳ ಕುರಿತು ಭಾರತೀಯ ಪುರಾತತ್ವ ಇಲಾಖೆಯು ಇನ್ನೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ನಡುವೆ, ವಕ್ಫ್ ಕಾರಣದಿಂದ ಜಿಲ್ಲೆಯ ರೈತರು ಹಾಗೂ ಮಠಗಳಿಗೆ ತೊಂದರೆಯಾಗಿದೆ ಎಂದು ಹಲವು ಮಠಾಧೀಶರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ. ಮಠಗಳ ಪಹಣಿ ಪತ್ರದಲ್ಲೂ ವಕ್ಫ್ ಎಂದು ನಮೂದಿಸಿರುವುದು ಸ್ವಾಮೀಜಿಗಳ ಆಕ್ರೋಶಕ್ಕೆ ಕಾರಣವಾಗಿದೆ.

## ಅನ್ನದಾನೇಶ್ವರ ಮಠದ ಪ್ರಸಾದ ನಿಲಯವೂ ವಕ್ಫ್ ಆಸ್ತಿ ಎಂದು ದಾಖಲು

ಗದಗ, ನ. 4 - ಜಿಲ್ಲೆಯ ಗಜೇಂದ್ರಗಡ ತಾಲ್ಲೂಕಿನ ನರೇಗಲ್‌ನಲ್ಲಿರುವ ಹಾಲಕೇರಿ ಅನ್ನದಾನೇಶ್ವರ ಮಠ ಪ್ರಸಾದ ನಿಲಯ ವಕ್ಫ್ ಆಸ್ತಿ ಎಂದು ದಾಖಲಾಗಿರುವುದು ಬೆಳಕಿಗೆ ಬಂದಿದೆ. ಪ್ರಸಾದ ನಿಲಯದ 11.19 ಎಕರೆ 2019ರಲ್ಲಿ ವಕ್ಫ್ ಆಸ್ತಿ ಎಂದು ದಾಖಲಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭವಾದ ಶ್ರೀ ಅನ್ನದಾನೇಶ್ವರ ವಿದ್ಯಾವರ್ಧಕ ಪ್ರಸಾದ ನಿಲಯ ಸಮಿತಿಯ ಉಚಿತ ಪ್ರಸಾದ ನಿಲಯಕ್ಕೆ ಸೇರಿದ 15.06 ಎಕರೆಯಲ್ಲಿ 11.19 ಎಕರೆ ವಕ್ಫ್ ಆಸ್ತಿ ಎಂದು ನಮೂದು ಆಗಿದೆ. ಉಚಿತ ಪ್ರಸಾದ ನಿಲಯಕ್ಕೆ ಸ್ಥಳೀಯ ರೈತರು, ದಾನಿಗಳ ಸಹಕಾರದಿಂದ ಸಾಕಷ್ಟು ಭೂಮಿಯನ್ನು ಶ್ರೀಮಠಕ್ಕೆ ನೀಡಲಾಗಿತ್ತು.



**ಶ್ರೀಶೈಲ ಜಗದ್ಗುರುಗಳಿಂದ ಇಷ್ಟಲಿಂಗ ಮಹಾಪೂಜೆ**

ದಾವಣಗೆರೆಯ ಶ್ರೀಶೈಲ ಮಠದಲ್ಲಿ ಸೋಮವಾರ ಏರ್ಪಾಡಾಗಿದ್ದ ಇಷ್ಟಲಿಂಗ ಮಹಾಪೂಜೆಯನ್ನು ಶ್ರೀಶೈಲ ಪೀಠದ ಜಗದ್ಗುರು ಡಾ. ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನೆರವೇರಿಸಿದರು.

## ಸಿಎಂಗೆ ಲೋಕಾಯುಕ್ತ ಬುಲಾವ್

ಮೈಸೂರು, ನ. 4 - ಮುಡ ಸೈಟು ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಲು ಲೋಕಾಯುಕ್ತ ಪೊಲೀಸರು ಸಮನ್ಸ್ ಕಳಿಸಿದ್ದಾರೆ. ನವೆಂಬರ್ 6ರ ಬುಧವಾರದಂದು ಹಾಜರಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿಳಿಸಲಾಗಿದೆ ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದೇ ಪ್ರಕರಣದಲ್ಲಿ ಆರೋಪಿಯಾಗಿರುವ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರನ್ನು ಅಕ್ಟೋಬರ್ 25ರಂದು ಲೋಕಾಯುಕ್ತ ಪ್ರಶ್ನಿಸಿತ್ತು.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ವಿತರಿಸಲಾದ 14 ನಿವೇಶನಗಳಿಗೆ ಸಂಬಂಧಿಸಿದಂತೆ ಅವರ ವಿರುದ್ಧ ಆರೋಪ ಕೇಳಿ ಬಂದಿದೆ.

ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾನು ಲೋಕಾಯುಕ್ತ ಎದುರು ತೆರಳುತ್ತೇನೆ ಎಂದು ಹೇಳಿದ್ದಾರೆ.

## ಮುಂಬೈ ಷೇರುಪೇಟೆ ಶೇ.1.18ರಷ್ಟು ಕುಸಿತ

ನವದೆಹಲಿ, ನ. 4 - ಮುಂಬೈ ಷೇರುಪೇಟೆ ಸೂಚ್ಯಂಕದಲ್ಲಿ ಸೋಮವಾರ ಶೇಕಡಾ 1.18ರಷ್ಟು ಕುಸಿತ ಉಂಟಾಗಿದೆ. ಇದರಿಂದಾಗಿ ಹೂಡಿಕೆದಾರರ ಆಸ್ತಿ ಮೌಲ್ಯ 5.99 ಲಕ್ಷ ಕೋಟಿ ರೂ. ಕರಗಿದೆ.

ರಿಲಯನ್ಸ್ ಇಂಡಸ್ಟ್ರೀಸ್, ಬ್ಯಾಂಕಿಂಗ್ ಷೇರುಗಳ ಮೌಲ್ಯದಲ್ಲಿ ಕುಸಿತವಾಗಿರುವುದು ಹಾಗೂ ವಿದೇಶಿ ಹೂಡಿಕೆದಾರರು ತಮ್ಮ ಹೂಡಿಕೆ ವಾಪಸ್ ಪಡೆಯುತ್ತಿರುವುದು ಈ ಕುಸಿತಕ್ಕೆ ಕಾರಣವಾಗಿದೆ.

ಅಮೆರಿಕದ ಚುನಾವಣೆ ಹಾಗೂ ಈ ವಾರದಲ್ಲಿ ಅಮೆರಿಕದ ಕೇಂದ್ರ ಬ್ಯಾಂಕ್ ಬಡ್ಡಿ ನಿರ್ಧಾರ ತೆಗೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹೂಡಿಕೆದಾರರು ಎಚ್ಚರಿಕೆ ವಹಿಸಿದ್ದಾರೆ. ಮುಂಬೈ ಷೇರು ಸೂಚ್ಯಂಕ 941.88 ಅಂಕ ಕುಸಿದು, 78,782.24ಕ್ಕೆ ತಲುಪಿದೆ. ಆಗಸ್ಟ್ 6ರ ನಂತರ ಇದು ಅತಿ ಕಡಿಮೆ ಮಟ್ಟವಾಗಿದೆ.

# ಆರೋಪ ಬಿಡಿ, ಅಭಿವೃದ್ಧಿಗೆ ಕೈ ಜೋಡಿಸಿ

## ಹರಿಹರ ಶಾಸಕ ಬಿ.ಪಿ. ಹರೀಶ್‌ಗೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸಲಹೆ

ಹರಿಹರ, ಅ. 4 - ಬಿಜೆಪಿ ಶಾಸಕ ಬಿ.ಪಿ. ಹರೀಶ್ ಮತ್ತು ನಗರಸಭೆ ಆಡಳಿತ ಮಾಡುತ್ತಿರುವ ಜೆಡಿಎಸ್ ಪಕ್ಷದವರು ವಿರೋಧ ಮಾಡುವುದರ ಬದಲು, ಅಭಿವೃದ್ಧಿಗೆ ಸಹಮತ ನೀಡಿದರೆ ಮಾತ್ರ ಹರಿಹರ ನಗರವನ್ನು ಅಭಿವೃದ್ಧಿ ಪಡಿಸಲು ಸಾಧ್ಯ ಎಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.



ನಗರದ ಬೆಂಕಿನಗರ ಬಡಾವಣೆಯಲ್ಲಿ ಕೋಟಿ ರೂಪಾಯಿ ವೆಚ್ಚದಲ್ಲಿ ನಡೆಯುತ್ತಿರುವ ಚರಂಡಿ ಕಾಮಗಾರಿಯನ್ನು ವೀಕ್ಷಿಸಿ ನಂತರ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಶಾಸಕ ಹರೀಶ್ ಅವರು ಸಣ್ಣಪುಟ್ಟ ಕೆಲಸಕ್ಕೂ ಅಡ್ಡಿ ಪಡಿಸುತ್ತಾ ಹೋದರೆ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ. ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ಅವರು ತಮ್ಮ ಪಕ್ಷ ಆಡಳಿತಕ್ಕೆ ಬಂದಾಗ ಬೇಕಾದಂತೆ ಅಧಿಕಾರ ಮಾಡಿಕೊಳ್ಳಲಿ. ಆದರೆ ನಮ್ಮ ಪಕ್ಷವು ರಾಜ್ಯದಲ್ಲಿ ಅಧಿಕಾರದಲ್ಲಿ ಇರುವುದರಿಂದ, ವಿರೋಧ ಮಾಡುವುದನ್ನು ಕೈ ಬಿಟ್ಟು, ಅಭಿವೃದ್ಧಿ ಕಡೆಗೆ ಗಮನ ಹರಿಸಲಿ ಎಂದರು.

ನಗರದ ಜನತೆಯ ಬಹುದಿನದ ಬೇಡಿಕೆಯಾದ ದೂಡಾ ಶಾಖಾ ಕಚೇರಿ ಆರಂಭಿಸಲು ಈಗಾಗಲೇ ದೂಡಾ ಅಧ್ಯಕ್ಷರಿಗೆ ಸೂಚಿಸಿದ್ದು, ಒಂದು ವಾರದಲ್ಲಿ ಶಾಖಾ ಕಚೇರಿ ಆರಂಭಗೊಳ್ಳಲಿದೆ ಎಂದರು.

ಇಲ್ಲಿನ ಚರಂಡಿ ಕಾಮಗಾರಿಗೆ ಕಳೆದ ಒಂದೂವರೆ ವರ್ಷದ ಹಿಂದೆ ಬಿಡುಗಡೆ ಆಗಿರುವ ಹಣ ಇದುವರೆಗೂ ಬಳಕೆಯಾಗಿಲ್ಲ. ಇದಕ್ಕೆ ನಗರಸಭೆಯ ಅಧಿಕಾರಿ ವರ್ಗ ಕಾರಣ ಎಂದರು. ಯಾವುದೇ ಸಮಸ್ಯೆಗಳಿದ್ದರೆ ನಮ್ಮ ಗಮನಕ್ಕೆ ತನ್ನಿ ಎಂದರು.

ಹೈಸ್ಕೂಲ್ ಬಡಾವಣೆಯ ಅಂಬೇಡ್ಕರ್ ಪಾರ್ಕ್ ಅಭಿವೃದ್ಧಿ ಮತ್ತು ಮಕ್ಕಳಿಗೆ ಆಟಿಕೆ ವಸ್ತುಗಳು, ಕೆ.ಹೆಚ್. ಬಿ ಕಾಲೋನಿ ಪಾರ್ಕ್ ಅಭಿವೃದ್ಧಿ, ಬೆಂಕಿನಗರ ಕನ್ನಡ ಶಾಲಾ ಕೊಠಡಿ ನಿರ್ಮಾಣ, ಬೆಂಕಿನಗರ ಕಾಲುವೆ ತಡೆಗೋಡೆ ನಿರ್ಮಾಣ, ನೀರು ಶೇಖರಣಾ ಘಟಕ ಸ್ಥಾಪನೆ, ಮಳೆಯಿಂದಾಗಿ ನಗರದ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಹಳಷ್ಟು ಇದ್ದು ಅವುಗಳನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ನಗರಸಭೆ ಸದಸ್ಯರಾದ ಬಾಬುಲಾಲ್, ಶಾಹಿನಾ ದಾದಾಪೀರ್, ಅಬ್ದುಲ್ ಅಲಿಂ, ಮುಖಂಡರಾದ ಸಂತೋಷ ನೋಟದರ್, ಸಂತೋಷ ದೊಡ್ಡಮನೆ, ನಜೀರ್ ಹುಸೇನ್, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಗುತ್ತಿಗೆದಾರರಾದ ಮಂಜುನಾಥ್ ಕಾಳೇರ್, ಬಾಷಾ , ಹರೀಶ್ ಬಸಾಪುರ, ಮಂಜುನಾಥ್ ಹಾಗೂ ಇತರರು ಹಾಜರಿದ್ದರು.

## ಸಂಕ್ಷಿಪ್ತ ಸುದ್ದಿ

**ಇಂಡೋನೇಷ್ಯಾದಲ್ಲಿ ಜ್ವಾಲಾಮುಖಿ ಸಿಡಿದು 10 ಸಾವು**
ಮೊಮೆರೆ : ಇಂಡೋನೇಷಿಯಾದ ದುರ್ಗಮ ದ್ವೀಪವಾದ ಫ್ಲೋರೆಸ್ ಎಂಬಲ್ಲಿ ಜ್ವಾಲಾಮುಖಿ ಸಿಡಿದು ಹತ್ತು ಜನ ಸಾವನ್ನಪ್ಪಿದ್ದಾರೆ. ಸುಮಾರು 2000 ಮೀಟರ್ ಎತ್ತರಕ್ಕೆ ಜ್ವಾಲಾಮುಖಿಯ ಬೂದಿ ಸಿಡಿದಿತ್ತು. ಈ ಬಿಸಿ ಬೂದಿ ಹಲವು ಹಳ್ಳಿಗಳ ಮೇಲೆ ಬಿದ್ದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**13 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಮುಂದೂಡಿಕೆ**
ನವದೆಹಲಿ : ಉತ್ತರ ಪ್ರದೇಶ ಪಂಜಾಬ್ ಹಾಗೂ ಕೇರಳ ರಾಜ್ಯಗಳ 13 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯನ್ನು ಚುನಾವಣಾ ಆಯೋಗ ನವೆಂಬರ್ 13 ರಿಂದ 20ಕ್ಕೆ ಮುಂದೂಡಿದೆ. ಹಲವಾರು ಹಬ್ಬಗಳ ಹಿನ್ನೆಲೆಯಲ್ಲಿ ಚುನಾವಣೆ ಮುಂದೂಡಬೇಕು ಎಂದು ಕೆಲ ಪಕ್ಷಗಳು ಮನವಿ ಮಾಡಿಕೊಂಡಿದ್ದವು.

**ಕೇರಳ : ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಸ್ಫೋಟ, ಮೂವರು ದೋಷಿಗಳು**
ಕೊಲ್ಲಂ : ಕೇರಳದ ಕೊಲ್ಲಂ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ 2016ರಲ್ಲಿ ಲಘು ತೀವ್ರತೆಯ ಸುಧಾರಿತ ಸ್ಫೋಟಕ ಸಿಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ದೋಷಿಗಳು ಎಂದು ಕೇರಳದ ಪ್ರಧಾನ ಸೆಷನ್ಸ್ ನ್ಯಾಯಾಲಯ ತೀರ್ಪು ನೀಡಿದೆ. ಇನ್ನೋರ್ವ ಆರೋಪಿಯನ್ನು ದೋಷಮುಕ್ತಗೊಳಿಸಲಾಗಿದೆ. 2016ರ ಜೂನ್ 15ರಂದು ಸ್ಫೋಟ ನಡೆಸಲಾಗಿತ್ತು.

**ಕಲ್ಲಿನಿಂದ ಬಡಿದು ಹುಲಿ ಕೊಂದ ಗ್ರಾಮಸ್ಥರು**
ಜೈಪುರ : ಕುರಿಗಾಹಿಯೋರ್ವನನ್ನು ಹುಲಿಯೊಂದು ಹತ್ಯೆಗೈದ ನಂತರ, ರಾಜಸ್ಥಾನದ ಉಲಿಯಾನಾದ ಗ್ರಾಮಸ್ಥರು ಹುಲಿಯನ್ನು ಕಲ್ಲಿನಿಂದ ಬಡಿದು ಕೊಂದು ಹಾಕಿದ್ದಾರೆ. ಕುರಿಗಾಹಿಯ ಕೊಂದ ನಂತರ, ಹುಲಿ ಆತನ ಶವದ ಬಳಿಯೇ ಇತ್ತು. ಇದನ್ನು ಗಮನಿಸಿದ ಗ್ರಾಮಸ್ಥರು ಕಲ್ಲು ಹಾಗೂ ಹರಿತ ಆಯುಧಗಳಿಂದ ಹುಲಿಯನ್ನು ಕೊಂದು ಹಾಕಿದ್ದಾರೆ.

**ರಿಸರ್ವ್ ಬ್ಯಾಂಕ್ ಉಪ ಗವರ್ನರ್ ಹುದ್ದೆಗೆ ಅರ್ಜಿ ಆಹ್ವಾನ**
ನವದೆಹಲಿ : ರಿಸರ್ವ್ ಬ್ಯಾಂಕ್ ಉಪ ಗವರ್ನರ್ ಹುದ್ದೆಗಾಗಿ ಹಣಕಾಸು ಸಚಿವಾಲಯ ಅರ್ಜಿಗಳನ್ನು ಆಹ್ವಾನಿಸಿದೆ. ಹಾಲಿ ಉಪ ಗವರ್ನರ್ ಮೈಖೆಲ್ ದೇಬಬ್ರತ ಪಾತ್ರ ಅವರ ಅವಧಿ ಜನವರಿ 14, 2025ಕ್ಕೆ ಅಂತ್ಯವಾಗಲಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಮಹಾರಾಷ್ಟ್ರ ಡಿಜಿಪಿ ವರ್ಗಾಯಿಸಲು ಆಯೋಗದ ಕ್ರಮ**
ನವದೆಹಲಿ : ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಸನಿಹದಲ್ಲಿರುವಾಗಲೇ ಡಿ.ಜಿ.ಪಿ. ರಶ್ಮಿಶುಕ್ಲಾ ಅವರನ್ನು ವರ್ಗಾಯಿಸಲು ಚುನಾವಣಾ ಆಯೋಗ ಆದೇಶಿಸಿದೆ. ಶುಕ್ಲಾ ಅವರ ವಿರುದ್ಧ ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ದೂರು ನೀಡಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಕೆನಡಾದ ಹಿಂದೂ ದೇವಾಲಯದಲ್ಲಿ ಖಲಿಸ್ತಾನಿಗಳಿಂದ ಘರ್ಷಣೆ**
ಒಟ್ಟಾವಾ : ಕೆನಡಾದ ಬ್ರಾಂಪ್ಟನ್‌ನಲ್ಲಿರುವ ಹಿಂದೂ ದೇವಾಲಯದಲ್ಲಿ ಖಲಿಸ್ತಾನಿ ಧ್ವಜ ಹಿಡಿದಿದ್ದ ಪ್ರತಿಭಟನಾಕಾರರು ಘರ್ಷಣೆ ನಡೆಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ. ಈ ಘಟನೆಯನ್ನು ಖಂಡಿಸಿರುವ ಕೆನಡಾ ಪ್ರಧಾನ ಮಂತ್ರಿ ಜಸ್ಟಿನ್ ಟ್ರುಡ್ಯೂ, ಪ್ರತಿಯೊಬ್ಬ ಕೆನಡಾದ ನಾಗರಿಕ ಮುಕ್ತ ಹಾಗೂ ಸುರಕ್ಷಿತವಾಗಿ ತಮ್ಮ ಪದ್ಧತಿ ಪಾಲಿಸುವ ಹಕ್ಕು ಹೊಂದಿದ್ದಾರೆ ಎಂದು ತಿಳಿಸಿದ್ದಾರೆ.

**ಡಿಕೆಶಿ ವಿರುದ್ಧದ ತನಿಖಾ ಅನುಮತಿ ವಾಪಸ್ ವಿಚಾರಣೆ ಮುಂದೂಡಿಕೆ**
ನವದೆಹಲಿ : ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಬಿ.ಐ. ತನಿಖೆ ನಡೆಸಲು ನೀಡಲಾಗಿದ್ದ ಅನುಮತಿಯನ್ನು, ಕರ್ನಾಟಕ ಸರ್ಕಾರ ವಾಪಸ್ ಪಡೆದಿರುವುದನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಾಲ್ಕು ವಾರ ಮುಂದೂಡಿದೆ.

# ಸಾರ್ವಜನಿಕ ಆಸ್ತಿ ಕಬಳಿಕೆ ಹುನ್ನಾರ ಕೈಬಿಡದಿದ್ದರೆ ಉಗ್ರ ಹೋರಾಟ

ಹರಿಹರ, ನ .4- ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮುಡಾ ಮತ್ತು ವಾಲ್ಮೀಕಿ ಹಗರಣದಲ್ಲಿ ಸಿಲುಕಿರುವುದರಿಂದ ವಕ್ಫ್ ಮಂಡಳಿಯ ಮೂಲಕ ಜನರ ಮನಸ್ಸನ್ನು ಬೇರೆಡೆಗೆ ತಿರುಗಿಸಲು ಹಾಗೂ ಸಾರ್ವಜನಿಕರ ಆಸ್ತಿಯನ್ನು ಕಬಳಿಸುವ ಹುನ್ನಾರಕ್ಕೆ ಮುಂದಾಗಿದ್ದು, ಇದನ್ನು ಕೈ ಬಿಡದೇ ಹೋದರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಶಾಸಕ ಬಿ.ಪಿ ಹರೀಶ್ ಎಚ್ಚರಿಸಿದರು.





ನಗರದ ಪತ್ರಿಕಾಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 1974 ರಲ್ಲಿ, ಅಂದಿನ ಪ್ರಧಾನಿ ಇಂದಿರಾಗಾಂಧಿ ತಮ್ಮ ಆಡಳಿತ ಅವಧಿಯಲ್ಲಿ ಸಾಕಷ್ಟು ಭ್ರಷ್ಟಾಚಾರ ಮತ್ತು ಹಗರಣಗಳಲ್ಲಿ ಸಿಲುಕಿರುವ ಕಾರಣದಿಂದ ಮಾನಸಿಕವಾಗಿ ನೊಂದು ಮತ್ತು ಓಟ್ ಬ್ಯಾಂಕ್ ಹಿತದೃಷ್ಟಿಯಿಂದ ವಕ್ಫ್ ವಿಚಾರ ಜಾರಿಗೆ ತಂದರು. ಅದರ ಹಿನ್ನೆಲೆಯಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದರಿಂದ, ದೇಶದ ಜನರ ನೆಮ್ಮದಿ ಹಾಳು ಮಾಡುವುದಕ್ಕೆ ಮುಂದಾಗಿದ್ದರು ಎಂದು ಆರೋಪಿಸಿದರು.

ರಾಜ್ಯದಲ್ಲಿ ಮುಸ್ಲಿಂ ಸಮುದಾಯದ ಅನೇಕ ಮುಖಂಡರು ಹಾಗೂ ಅಧಿಕಾರಿ ವರ್ಗದವರು ಸಾವಿರಾರು ಎಕರೆ ವಕ್ಫ್ ಆಸ್ತಿಯನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡು, ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿದ್ದಾರೆ. ಇದರಿಂದಾಗಿ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅದನ್ನು ಹದ್ದಬಸ್ತು ಮಾಡಿಸಿ ತಮ್ಮ ವಶಕ್ಕೆ ಪಡೆಯುವಂತೆ ಹೇಳಿದ್ದನ್ನು ತಿರುಚಿ, ನಾಡಿನಾದ್ಯಂತ ಇರುವ ದೇವಸ್ಥಾನ, ಮಠ - ಮಂದಿರಗಳು ಹಾಗೂ ಸಾರ್ವಜನಿಕರ ಆಸ್ತಿಯನ್ನು ವಕ್ಫ್ ಇಲಾಖೆ ಕಬಳಿಸಲಿಕ್ಕೆ ಮುಂದಾಗಿದ್ದು, ರಾಜ್ಯದ ಮಠ, ಮಂದಿರದ ಒಂದು ಇಂಚು ಆಸ್ತಿಯನ್ನು ಯಾವುದೇ ಕಾರಣಕ್ಕೂ ನಾವು ಬಿಟ್ಟು ಕೊಡುವುದಿಲ್ಲ ಎಂದು ಹೇಳಿದರು.

ದೇಶದಲ್ಲಿ ನೆಹರು ಮನೆತನದವರು ಹಿಂದೂಗಳಿಗೆ ಮಾಡಿರುವ ದ್ರೋಹದಿಂದ ಅನೇಕ ಜನರು ಭಯದಿಂದ, ಗೊಂದಲಕ್ಕೆ ಸಿಲುಕಿ ಪ್ರಾಣ ಕಳೆದುಕೊಳ್ಳುವಂತಹ ಸ್ಥಿತಿ ಬಂದಿತ್ತು. ಆದರೆ, ದೇಶದ ಜನರು ಅದಕ್ಕೆ ಹೆಚ್ಚು ಮಾನ್ಯತೆ ಕೊಡದೇ ಇದ್ದ, ಪರಿಣಾಮವಾಗಿ ಇಂದು ಭಾರತ ಸದೃಢವಾಗುವಲ್ಲಿ ಹೆಜ್ಜೆಗಳನ್ನು ಹಾಕುತ್ತಾ ಮುನ್ನಡೆಗೆ ಬಂದಿದೆ. ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ದೇಶದ ಜನತೆಯ ಹಿತದೃಷ್ಟಿಯಿಂದ ಹಾಗೂ ವಕ್ಫ್ ಮಂಡಳಿಯಲ್ಲಿ ಆಗುತ್ತಿದ್ದ ಅಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವ ವಿಧೇಯಕವನ್ನು ಮಂಡಿಸಿದೆ. ಇದು ಜಂಟಿ ಪಾರ್ಲಿಮೆಂಟರಿ ಬೋರ್ಡ್ ಪರಿಶೀಲನೆಯಲ್ಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಗ್ರಾಮಾಂತರ ಘಟಕದ ಅಧ್ಯಕ್ಷ ಹಿಂಡಸಗಟ್ಟೆ ಲಿಂಗರಾಜ್, ನಗರಸಭೆ ಸದಸ್ಯ ಹನುಮಂತಪ್ಪ, ಮುಖಂಡರಾದ ಬಾತಿ ಚಂದ್ರಶೇಖರ್, ಪರಶುರಾಮ್ ಕಾಟ್ವೆ, ಮಹಾಂತೇಶ್ ಆದಾಪುರ, ತುಳಜಪ್ಪ ಭೂತೆ, ಹೆಚ್. ಮಂಜಾನಾಯ್ಕ್, ಸ್ವಾತಿ ಹನುಮಂತಪ್ಪ, ರವಿಕುಮಾರ್, ಸಂತೋಷ್ ಗುಡಿಮನಿ, ಮಂಜುನಾಥ್, ಗಿರೀಶ್ ಗೌಡ, ರೂಪಾ ಕಾಟ್ವೆ , ರೂಪಾ, ಸಾಕ್ಷಿ, ಸುಧಾ ಸೋಳಂಕಿ ಹಾಗೂ ಇತರರು ಹಾಜರಿದ್ದರು.

> ನೆಹರು ಮನೆತನದವರು ಭಾರತದ ಬಹುಸಂಖ್ಯಾತ ಹಿಂದೂಗಳಿಗೆ ದ್ರೋಹ ಮಾಡುತ್ತಾ ಬಂದಿದ್ದರ ಪರಿಣಾಮ, ಅನೇಕ ಹಿಂದೂಗಳು ಪ್ರಾಣ ಕಳೆದುಕೊಂಡಿದ್ದರೂ ಕೂಡ ಹೋರಾಟದಲ್ಲಿ ಭಾಗವಹಿಸಿದವರನ್ನು ಬಿಟ್ಟು ವಿದೇಶದವರಿಗೆ ಮನ್ನಣೆ ನೀಡಿದ್ದರು. ಅವರು ಮಾಡಿದ್ದನ್ನು ಇಂದು ಸಿ.ಎಂ. ಸಿದ್ದರಾಮಯ್ಯ ಅದೇ ಹಾದಿಯಲ್ಲಿ ಸಾಗುತ್ತಾ ರಾಜ್ಯದ ಜನರ ದಿಕ್ಕು ತಪ್ಪಿಸಲು ಮುಂದಾಗಿದ್ದಾರೆ.
>
> - ಬಿ.ಪಿ. ಹರೀಶ್, ಶಾಸಕರು, ಹರಿಹರ.

# ನಂದಿ ಸೌಹಾರ್ದ ಸಹಕಾರಿ ಸಂಘದ ಪ್ರಗತಿಗೆ ಮಾಧುಸ್ವಾಮಿ ಮೆಚ್ಚುಗೆ

## ಮಲೇಬೆನ್ನೂರು : ಸಂಘದ ವಸತಿ ಗೃಹಗಳ ನಿರ್ಮಾಣಕ್ಕೆ ಭೂಮಿ ಪೂಜೆ

ಮಲೇಬೆನ್ನೂರು, ನ.4- ಇಲ್ಲಿನ ನಂದಿಗುಡಿ ರಸ್ತೆಯಲ್ಲಿರುವ ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘದ ಕಟ್ಟಡದ ಹಿಂಭಾಗದಲ್ಲಿ ಸಂಘದ ನೂತನ ವಸತಿ ಗೃಹಗಳ ನಿರ್ಮಾಣಕ್ಕೆ ಸೋಮವಾರ ಭೂಮಿ ಪೂಜೆ ನೆರವೇರಿಸಿ, ಕಾಮಗಾರಿಗೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ಸಂಘವು ಸ್ಥಾಪನೆಯಾಗಿ ಯಶಸ್ವೀ 30 ವರ್ಷ ಪೂರೈಸಿರುವುದು ಸಂತೋಷದ ವಿಚಾರವಾಗಿದೆ. ಸಂಘವು ಎರಡು ಶಾಖೆಗಳನ್ನು ಹಾಗೂ ಸ್ವಂತ ಕಟ್ಟಡಗಳನ್ನು ಹೊಂದುವ ಜೊತೆಗೆ ಈ ಭಾಗದ ಎಲ್ಲಾ ಜನರ ನೆಚ್ಚಿನ ಸಂಘವಾಗಿ ಬೆಳೆದಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಗ್ರಾಹಕರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಹೊಸ ಯೋಜನೆಗಳ ಬಗ್ಗೆಯೂ ಗಮನಹರಿಸಿ ಎಂದು ಆಡಳಿತ ಮಂಡಳಿಗೆ ಕಿವಿಮಾತು ಹೇಳಿದರು.



ಇನ್ನೋರ್ವ ಮಾಜಿ ಸಚಿವ ಸೊಗಡು ಶಿವಣ್ಣ, ಶಾಸಕ ಬಿ.ಪಿ. ಹರೀಶ್, ಸಂಘದ ಅಧ್ಯಕ್ಷ ಜಿಗಳಿಯ ಗೌಡ್ರ ಬಸವರಾಜಪ್ಪ, ಉಪಾಧ್ಯಕ್ಷ ಕೊಕ್ಕನೂರಿನ ಕೆ.ಹೆಚ್. ಆಂಜನೇಯ ಪಾಟೀಲ್, ನಿರ್ದೇಶಕರಾದ ಜಿಗಳಿ ಇಂದೂಧರ್, ಎಂ.ವಿ. ನಾಗರಾಜ್, ಹಳ್ಳಿಹಾಳ್‌ನ ಹೆಚ್. ಟಿ. ಶಾಂತನಗೌಡ್ರು, ಹೆಚ್. ವೀರನಗೌಡ್ರು, ಹೆಚ್.ಟಿ. ಪರಮೇಶ್ವರಪ್ಪ, ಕೊಕ್ಕನೂರಿನ ಬಿ.ಹೆಚ್. ರವಿ, ಟಿ. ರಾಮಚಂದ್ರಪ್ಪ, ಜಿ. ಬೇವಿನಹಳ್ಳಿಯ ಸಂತೋಷ್ ಪಾಳ್ಯದ್, ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ, ಮಲೇಬೆನ್ನೂರಿನ ಎ. ಆರೀಫ್ ಅಲಿ, ಸಂಘದ ಮಾಜಿ ಅಧ್ಯಕ್ಷ ಬಿ. ವೀರಯ್ಯ, ಕೊಕ್ಕನೂರಿನ ಕೆ. ರಾಜು, ಜಿಗಳಿಯ ಜಿ.ಎಂ. ವಿಜಯಕುಮಾರ್, ಮಾಜಿ ಉಪಾಧ್ಯಕ್ಷ ಕೆ.ಎನ್. ಹಳ್ಳಿಯ ಎಂ. ಪರಮೇಶ್ವರಪ್ಪ, ಮಾಜಿ ನಿರ್ದೇಶಕರಾದ ಕೊಕ್ಕನೂರಿನ ದಾಸರ ಸೋಮಶೇಖರ್, ಹೊಸೂರು ರಂಗಪ್ಪ, ಹಿಂಡಸಘಟ್ಟೆಯ ಎಸ್. ಮೃತ್ಯುಂಜಯ, ಶಿವ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್, ತಾ.ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಮುಖಂಡರಾದ ಮಹಾಂತಯ್ಯ, ಸಿ.ಎಂ. ಗದಿಗೆಯ್ಯ, ವಕೀಲ ನಂದಿತಾವರೆ ತಿಮ್ಮನಗೌಡ, ಸಂಘದ ಕಾರ್ಯದರ್ಶಿ ಹೆಚ್.ಎಂ. ಬಸವರಾಜ್ ಸೇರಿದಂತೆ ಸಂಘದ ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಸಂಗ್ರಹಕಾರರು ಭಾಗವಹಿಸಿದ್ದರು.

# ಯು ಟರ್ನ್ ಸರ್ಕಾರ : ತಪ್ಪು ಅರಿವಾಗಿ ವಕ್ಫ್ ನೋಟಿಸ್ ವಾಪಸ್

## ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಬೆಂಗಳೂರು, ನ. 4 - ಕಾಂಗ್ರೆಸ್ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಜನರು ತಿರುಗಿ ಬಿದ್ದಿದ್ದಾರೆ. ಈ ಅಲೆಗೆ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಕೊಚ್ಚಿ ಹೋಗುವುದು ಗ್ಯಾರಂಟಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ವಕ್ಫ್ ಆಸ್ತಿ ಹೆಸರಿನಲ್ಲಿ ರೈತರಿಗೆ ನೊಟೀಸ್ ಕೊಟ್ಟಿರುವುದಕ್ಕೆ ರಾಜ್ಯಾದ್ಯಂತ ಜನರು ಸರ್ಕಾರದ ವಿರುದ್ಧ ಆಕ್ರೋಶಗೊಂಡಿದ್ದಾರೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ತಮ್ಮ ತಪ್ಪಿನ ಅರಿವಾಗಿ ನೊಟೀಸ್ ವಾಪಸ್ ತೆಗೆದುಕೊಳ್ಳಲು ಹೇಳಿದ್ದಾರೆ. ಸರ್ಕಾರ ತಪ್ಪು ಮಾಡದಿದ್ದರೆ ರೈತರಿಗೆ ನೀಡಿದ್ದ ನೋಟಿಸ್ ಏಕೆ ವಾಪಸ್ ಪಡೆಯುತ್ತಿದ್ದರು ಎಂದರು.

ವಕ್ಫ್ ಖಾತೆ ಸಚಿವ ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿಗಳ ಆದೇಶದ ಮೇರೆಗೆ ನೋಟಿಸ್ ನೀಡಲಾಗಿದೆ ಎಂದಿದ್ದಾರೆ. ಜಿಲ್ಲಾಧಿಕಾರಿಗಳು ಸಚಿವರ ಆದೇಶದ ಮೇರೆಗೆ ನೋಟಿಸ್ ನೀಡಿರುವುದಾಗಿ ತಿಳಿಸಿದ್ದಾರೆ. ಈಗ ಜನ ತಿರುಗಿ ಬೀಳುತ್ತಾರೆ ಎನ್ನುವುದು ಗೊತ್ತಾದ ತಕ್ಷಣ ಎಲ್ಲರೂ 'ಯು-ಟರ್ನ್' ಹೊಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ಇದೊಂದು ರೀತಿ 'ಯು-ಟರ್ನ್ ಸರ್ಕಾರ', ಮುಡಾದಲ್ಲಿ ಸೈಟ್ ಪಡೆದು ವಾಪಸ್ ಕೊಡುತ್ತಾರೆ. ವಾಲ್ಮೀಕಿ ನಿಗಮದ ಹಣ ಲೂಟಿ ಮಾಡಿ ಅದನ್ನು ವಾಪಸ್ ಹಾಕುವುದಾಗಿ ಹೇಳುತ್ತಾರೆ. ಈಗ ವಕ್ಫ್ ವಿಚಾರದಲ್ಲಿ ರೈತರಿಗೆ ನೋಟಿಸ್ ನೀಡಿ, ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ನೋಟಿಸ್ ವಾಪಸ್ ಪಡೆಯುತ್ತಾರೆ. ರಾಜ್ಯ ಸರ್ಕಾರ ನಿರಂತರ ಇದೇ ರೀತಿ ಮಾಡುತ್ತಾ ಬರುತ್ತಿದೆ ಎಂದರು.

# ಶಿಗ್ಗಾಂವಿ ಉಪಚುನಾವಣೆ ಪ್ರಚಾರದಲ್ಲಿ ವೀರಭದ್ರಪ್ಪ



ದಾವಣಗೆರೆ, ನ.4- ಶಿಗ್ಗಾಂವ್ ಉಪಚುನಾವಣೆ ಪ್ರಚಾರಕ್ಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಂದರ್ಭದಲ್ಲಿ ಅವರನ್ನು ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾಧ್ಯಕ್ಷ ಬಿ. ಹೆಚ್. ವೀರಭದ್ರಪ್ಪ ಅವರ ನೇತೃತ್ವದಲ್ಲಿ ಸ್ವಾಗತಿಸಲಾಯಿತು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮಾಜಿ ಸದಸ್ಯ ಮೋಹನ್ ಹಿರೇಮನಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಚಳ್ಳಮರದ ಶೇಕ್, ಜಿಲ್ಲಾ ಕಾಂಗ್ರೆಸ್ ಎಸ್.ಸಿ. ಘಟಕದ ಜಿಲ್ಲಾ ಕಾರ್ಯದರ್ಶಿ ಜಿ. ರಾಕೇಶ್ ಅವರುಗಳು ಪ್ರಚಾರದಲ್ಲಿ ಭಾಗವಹಿಸಿದ್ದರು.

# ಜಗಳೂರು ಪಟ್ಟಣ ಪಂಚಾಯಿತಿ ಸದಸ್ಯ ಸ್ಥಾನಕ್ಕೆ ಉಪ ಚುನಾವಣೆ

ಜಗಳೂರು,ನ.4- ಜಗಳೂರು ಪಟ್ಟಣ ಪಂಚಾಯ್ತಿಯ 9ನೇ ವಾರ್ಡ್‌ಗೆ ಉಪ ಚುನಾವಣೆ ನಡೆಸಲು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ವೇಳಾ ಪಟ್ಟಿ ಪ್ರಕಟಿಸಿ ಅಧಿಸೂಚನೆ ಹೊರಡಿಸಿದ್ದಾರೆ.

ಹಿಂದುಳಿದ ವರ್ಗ 'ಬ'ಗೆ ಮೀಸಲಿದ್ದು, ನಾಮಪತ್ರ ಸಲ್ಲಿಸಲು ಇದೇ ದಿನಾಂಕ 11 ಕೊನೆಯ ದಿನವಾಗಿದೆ. 12ಕ್ಕೆ ನಾಮಪತ್ರ ಪರಿಶೀಲನೆ, 14ಕ್ಕೆ ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಕೊನೆಯ ದಿನವಾಗಿರುತ್ತದೆ. ದಿನಾಂಕ 23ರಂದು ಚುನಾವಣೆ ನಡೆಯಲಿದೆ.

ಸದಸ್ಯ ಬಿ.ಟಿ. ರವಿಕುಮಾರ್ ಅವರ ಸದಸ್ಯತ್ವವು ಹೈಕೋರ್ಟ್ ಆದೇಶದಂತೆ ರದ್ದಾಗಿದ್ದು, ತೆರವಾದ ಈ ಸ್ಥಾನಕ್ಕೆ ಉಪಚುನಾವಣೆ ನಡೆಯಲಿದೆ.

# ಕನ್ನಡ ಹೃದಯದ ಭಾಷೆ: ಬಿಇಓ ಜಯಣ್ಣ





## ಚನ್ನಗಿರಿ

ಚನ್ನಗಿರಿ, ಅ.4- ಕನ್ನಡ ಭಾಷೆಯು ಕೇವಲ ಆಡಳಿತ ಭಾಷೆಯಾಗಿದ್ದರೆ ಸಾಲದು, ತಾಯ್ನುಡಿಯ ಪಾವಿತ್ರ್ಯತೆ ಯೊಂದಿಗೆ ಪ್ರತಿಯೊಬ್ಬ ಕನ್ನಡಿಗನ ಹೃದಯದ ಭಾಷೆ ಆಗಬೇಕು ಎಂದು ಚನ್ನಗಿರಿ ಕ್ಷೇತ್ರ ಶಿಕ್ಷಣಾಧಿಕಾರಿ ಎಲ್.ಜಯಣ್ಣ ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಸಂಯುಕ್ತ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಚನ್ನಗಿರಿ ಕನ್ನಡ ಭಾಷಾ ಬಳಗದ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ 'ಶಾಲಾ ಅಂಗಳದಲ್ಲಿ ನುಡಿ ತೋರಣ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನವೆಂಬರ್ ಮಾಸದ ರಾಜ್ಯೋತ್ಸವ ಆಚರಣೆಯು ಕೇವಲ ಸಾಂಕೇತಿಕ. ವರ್ಷವಿಡೀ ನಮ್ಮ ಹೃದಯ ಸಿಂಹಾಸನದಲ್ಲಿ ಕನ್ನಡ ರಾಜರಾಜೇಶ್ವರಿಯನ್ನು ಆರಾಧಿಸಲ್ಪಡಬೇಕು ಎಂದರು.

ಉಪನ್ಯಾಸಕ ಹೆಚ್.ಎಂ.ಬಸವರಾಜಪ್ಪ 'ಭಾರಿಸು ಕನ್ನಡ ಡಿಂಡಿಮವ' ವಿಷಯದ ಕುರಿತು ಮಾತನಾಡಿ, ಕನ್ನಡ ನೆಲದ ಕಲೆ, ಸಾಹಿತ್ಯ, ಸಂಗೀತ, ನಾಟಕಗಳ ಪ್ರಭಾವ ಬಹಳ ಮಹತ್ವದ್ದು. ಯಾವುದೇ ನಾಡಿನ ವಿಕಾಸವು ಆ ಭಾಷೆಯ ಸಾಹಿತ್ಯ, ಸಂಸ್ಕೃತಿ, ಕಲಾ ಶ್ರೀಮಂತಿಕೆಯ ಮೇಲೆ ನಿಂತಿದೆ.

ಕನ್ನಡ ಭಾಷೆಯ ಸಿರಿವಂತಿಕೆಗೆ ಸಾಹಿತ್ಯ, ಕಲೆ, ಸಂಗೀತ, ನಾಟಕಗಳ ಕೊಡುಗೆ ಅಪಾರವಾದದ್ದು. ಏಳು ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿರುವ ಸಮೃದ್ಧ ಶ್ರೀಮಂತವಾದ ಭಾಷೆ ನಮ್ಮ ಕನ್ನಡ ಎಂದು ಅಭಿಮತ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್‌ನ ತಾಲ್ಲೂಕಾಧ್ಯಕ್ಷ ಎಲ್. ಜಿ.ಮಧುಕುಮಾರ್ ಮಾತನಾಡಿ, ಶಾಲಾ ಅಂಗಳದಲ್ಲಿ ನುಡಿ ತೋರಣ ಕಾರ್ಯಕ್ರಮದ ಔಚಿತ್ಯ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿಯನ್ನು ತಿಳಿಸಿದರು.

ಉಪ ಪ್ರಾಚಾರ್ಯ ಲೋಹಿತಾಶ್ವ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಪದಾಧಿಕಾರಿಗಳಾದ ಜಿ.ಚಿನ್ನಸ್ವಾಮಿ, ಪಿ.ಓಂಕಾರಮೂರ್ತಿ, ಕನ್ನಡ ಶಿಕ್ಷಕ ನಾಗೇಶನಾಯ್ಕ್, ಸಿದ್ದೇಶ್, ತಿಪ್ಪೇಶಪ್ಪ ಮತ್ತಿತರರು ಇದ್ದರು.

# ಬದುಕಿನ ಸಾರ್ಥಕತೆ, ಆತ್ಮೋನ್ನತಿಗೆ ಹರನಂತೆ ಗುರುವನ್ನೂ ಸ್ಮರಿಸಬೇಕು

**(1ನೇ ಪುಟದಿಂದ)** ಆದಿ ಜಗದ್ಗುರು ರೇಣುಕಾಚಾರ್ಯರು ಸ್ಥಾಪಿಸಿದ ವೀರಶೈವ ಧರ್ಮವನ್ನು ಹನ್ನೆರಡನೇ ಶತಮಾನದಲ್ಲಿ ಸುಧಾರಣೆಗೆ ತಂದು ಉಚ್ಛ್ರಾಯ ಸ್ಥಿತಿಗೆ ತೆಗೆದುಕೊಂಡು ಹೋದವರು ಬಸವಣ್ಣ ಎಂದು ಹೇಳಿದರು.

ವೀರಶೈವ ಧರ್ಮ ಅತ್ಯಂತ ಪ್ರಾಚೀನವಾದುದು. ಈ ಬಗ್ಗೆ ಸಿಂಧೂ ನದಿ ನಾಗರಿಕತೆಯಲ್ಲಿ ಸಾಕ್ಷ್ಯಗಳು ಲಭ್ಯವಾಗಿವೆ. ಹನ್ನೆರಡನೇ ಶತಮಾನದಲ್ಲಿಯೇ ವೀರಶೈವ ಧರ್ಮದಲ್ಲಿನ ಲೋಪಗಳನ್ನು ಸರಿಪಡಿಸಲು ಬಸವಣ್ಣನವರು ಮುಂದಾಗಿದ್ದರಿಂದಲೇ ವೀರಶೈವ ಧರ್ಮ ಉಚ್ಛ್ರಾಯಸ್ಥಿತಿಗೆ ಹೋಗಲು ಕಾರಣವಾಯಿತು. ಆಫಘಾನಿಸ್ಥಾನ, ಕಾಶ್ಮೀರ ಸೇರಿದಂತೆ ಹಲವು ಕಡೆಗಳಿಂದ ಅನುಭವ ಮಂಟಪದ ಕಾರ್ಯಕಲಾಪಗಳನ್ನು ನೋಡಲು ಕಲ್ಯಾಣಕ್ಕೆ ವೀರಶೈವ ಸಮುದಾಯ ಹರಿದುಬಂದಿತ್ತು. ಅನ್ಯಧರ್ಮೀಯರಾಗಿದ್ದರೆ ಏಕೆ ಕಲ್ಯಾಣಕ್ಕೆ ಬರುತ್ತಿದ್ದರು ಎಂದು ಪ್ರಶ್ನಿಸಿದರು.

ಶರಣರ ವಚನಗಳಲ್ಲಿ 'ವೀರಶೈವ' ಪದ ಬಳಕೆ ಅನೇಕ ಬಾರಿ ಉಲ್ಲೇಖವಾಗಿದೆ. ಇಪ್ಪತ್ತು ಸಾವಿರ ವಚನಗಳಲ್ಲಿ 'ಲಿಂಗಾಯತ' ಎನ್ನುವ ಪದ ಕೇವಲ 14 ಬಾರಿ ಮಾತ್ರ ಬಳಕೆಯಾಗಿರುವುದು ಸಿಗುತ್ತದೆ. ಅದು ಬೇರೆ ಅರ್ಥದಲ್ಲಿಯೇ ಹೊರತು, ಪ್ರತ್ಯೇಕ ಧರ್ಮ ಎಂಬರ್ಥದಲ್ಲಿ ಅಲ್ಲ. ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಎಂಬ ಭಾವದಿಂದ ಮುನ್ನಡೆಯೋಣವೆಂದರು.

ದಕ್ಷಿಣ ಭಾರದಲ್ಲಿ ವೀರಶೈವ ಧರ್ಮ ಹೆಚ್ಚು ವ್ಯಾಪಿಸಿದೆ. ಕರ್ನಾಟಕದಲ್ಲಿ ವೀರಶೈವರ ಸಾಂದ್ರತೆ ಅಧಿಕ ಪ್ರಮಾಣದಲ್ಲಿದೆ. ಪ್ರಮಾಣಾತ್ಮಕ ಮತ್ತು ಗುಣಾತ್ಮಕ ಕಾರ್ಯದಿಂದ ಈ ಧರ್ಮ ಇಡೀ ದೇಶದ ಗಮನ ಸೆಳೆದಿದೆ ಎಂದರು.

ದೊಡ್ಡ ದೊಡ್ಡ ರಾಜಮನೆತನಗಳು ವೀರಶೈವ ಧರ್ಮಕ್ಕೆ ರಾಜಾಶ್ರಯ ನೀಡಲಿಲ್ಲವೆಂಬ ಅಸಮಾಧಾನ ಕೂಡ ಇದೆ. ಅಂದು ಶೈವ ಮತ್ತು ವೀರಶೈವ ಪರಂಪರೆ ಮಧ್ಯೆ ಭಿನ್ನತೆ ಕಂಡಬರಲಿಲ್ಲ. ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಂಗಗಳನ್ನು ಅಳವಡಿಸಿಕೊಂಡ ಸುಸಂಸ್ಕೃತ ಧರ್ಮವಾಗಿದೆ ಎಂದು ವಿವರಿಸಿದರು.

ಕಲ್ಯಾಣಿ ಚಾಲುಕ್ಯರು, ಬಾದಾಮಿ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ವಾರಂಗಲ್ಲಿನ ಕಾಕತೀಯರು, ವಿಜಯನಗರದ ಅರಸರು ಸೇರಿದಂತೆ ಕರ್ನಾಟಕದ ಅನೇಕ ರಾಜ ಮನೆತನಗಳು ವೀರಶೈವ ಧರ್ಮದ ಪೋಷಣೆ ಮಾಡಿವೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾತನಾಡಿದರು. ರಾಮಘಟ್ಟದ ರಾಜಗುರು ಪುರವರ್ಗ ಮಠದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಮುಷ್ಟೂರು ಓಂಕಾರ ಉಚ್ಚಲಿಂಗ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಎಡೆಯೂರಿನ ಬಾಳೆಹೊನ್ನೂರು ಶಾಖಾಮಠದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮೀಜಿ ನಾಂದಿ ನುಡಿಯನ್ನಾಡಿದರು.

ತಂದೆ-ತಾಯಿಗಳಿಗಿಂತ ಗುರುಗಳ ಮಾತಿಗೆ ಮನ್ನಣೆ ಜಾಸ್ತಿ. ಸಮಾಜಕ್ಕೆ ಧರ್ಮ ಗುರುಗಳ ಅವಶ್ಯಕತೆ ಇದೆ. ಪಂಚಪೀಠಗಳು ಧರ್ಮ, ಸಂಸ್ಕೃತಿಯನ್ನು ಶತ ಶತಮಾನಗಳಿಂದಲೂ ಉಳಿಸಿಕೊಂಡು ಬರುತ್ತಿವೆ ಎಂದರು.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮೊದಲ್ಗೊಂಡು ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್, ಉದ್ಯಮಿ ಅಥಣಿ ಪ್ರಶಾಂತ್, ವರ್ತಕ ಉಳುವಯ್ಯ, ಬೆಳ್ಳೂಡಿ ಶಿವಕುಮಾರ್, ಯಲವಟ್ಟಿ ಹಾಲೇಶ್, ಸೌಭಾಗ್ಯ ಬೀಳಗಿಮಠ, ಆವರಗೊಳ್ಳ ವಾಗೀಶ್ವರಯ್ಯ, ಶಿವಕುಮಾರ್ ಡಿ.ಶೆಟ್ಟರ್, ರಾಜಶೇಖರ ಗುಂಡಗಟ್ಟಿ, ಬನ್ನಯ್ಯಸ್ವಾಮಿ, ನಂದಿಗಾವಿ ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

### ಬಾಳೆಹೊಲದ ಗೌರಮ್ಮ ನಿಧನ



ದಾವಣಗೆರೆ ತಾಲ್ಲೂಕು ರಾಂಪುರ ಗ್ರಾಮದ ವಾಸಿ ದಿ. ಬಾಳೆಹೊಲದ ಸಿದ್ದಪ್ಪ ಇವರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಇವರು ದಿನಾಂಕ 4.11.2024ರ ಸೋಮವಾರ ಮಧ್ಯಾಹ್ನ 12.10ಕ್ಕೆ ನಿಧನರಾದರು. ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.11.2024ರ ಮಂಗಳವಾರ ಬೆಳಿಗ್ಗೆ 11 ಕ್ಕೆ ದಾವಣಗೆರೆ ತಾಲ್ಲೂಕು ರಾಂಪುರ ಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ.

### ಶ್ರೀಮತಿ ಭಾರತಮ್ಮ ನಿಧನ




ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದ ವಾಸಿ ಶ್ರೀ ಮಡಿವಾಳಪ್ಪನವರ ಧರ್ಮಪತ್ನಿ ಶ್ರೀಮತಿ ಭಾರತಮ್ಮ (64) ಇವರು ದಿನಾಂಕ : 31.10.2024ರ ಗುರುವಾರ ಸಂಜೆ 4 ಗಂಟೆಗೆ ನಿಧನರಾದರು. ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 01.11.2024ರ ಶುಕ್ರವಾರ ಆವರಗೊಳ್ಳ ಗ್ರಾಮದ ರುದ್ರಭೂಮಿಯಲ್ಲಿ ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಯಿತು.

### ಶಿವರುದ್ರಮ್ಮ ನಿಧನ



ದಾವಣಗೆರೆ ಚಲವಾದಿಕೇರಿ ನಿವಾಸಿ ದಿ. ಭಾರೀಮರ ರಾಮಪ್ಪ ಇವರ ಧರ್ಮಪತ್ನಿ ಶಿವರುದ್ರಮ್ಮ (73) ಇವರು ದಿನಾಂಕ 4.11.2024ರ ಸೋಮವಾರ ಮಧ್ಯಾಹ್ನ 12.10ಕ್ಕೆ ನಿಧನರಾದರು. ಓರ್ವ ಪುತ್ರ, ಐವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.11.2024ರ ಮಂಗಳವಾರ ಬೆಳಿಗ್ಗೆ 12 ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

### ಪಂಚಪ್ಪ ಬಸಪ್ಪ ಬನಾಪುರ ನಿಧನ



ಪಂಚಪ್ಪ ಬಸಪ್ಪ ಬನಾಪುರ ಸಾ|| ಹಲಗೇರಿ, ಕಿರಾಣಿ ವ್ಯಾಪಾರಸ್ಥರು ಇವರು ದಿನಾಂಕ 4.11.2024ರ ಸೋಮವಾರ ನಿಧನರಾದರು. ನಾಲ್ವರು ಪುತ್ರಿಯರು, ಇಬ್ಬರು ಪುತ್ರರು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 5.11.2024ರ ಮಂಗಳವಾರ ಹಲಗೇರಿ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.



# ಟ್ರ್ಯಾಕ್ಟರ್ ತೊಳೆಯುವ ವೇಳೆ ಸಂಭವಿಸಿದ ಅವಘಡದಲ್ಲಿ ಸಾವು : ಸ್ಥಳ ಪರಿಶೀಲನೆ

ಹರಿಹರ, ನ. 4- ಗುತ್ತೂರು ಗ್ರಾಮದ ನದಿಯಲ್ಲಿ ಟ್ರ್ಯಾಕ್ಟರ್ ತೊಳೆಯುವ ವೇಳೆ ಅವಘಡ ಸಂಭವಿಸಿ ಇಬ್ಬರು ಮರಣ ಹೊಂದಿದ್ದ ಸ್ಥಳಕ್ಕೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿ ಕವಿತಾ ಹಾಗೂ ಸಿಪಿಐ ಸುರೇಶ್ ಸರಗಿ ಅವರು ಇಂದು ಭೇಟಿ ಕೊಟ್ಟು ಸ್ಥಳ ಪರಿಶೀಲನೆ ನಡೆಸಿದರು. ನದಿಯಲ್ಲಿ ಇರುವಂತಹ ಗುಂಡಿಗಳನ್ನು ತಾತ್ಕಾಲಿಕವಾಗಿ ಮುಚ್ಚಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ ಅವರು, ಸ್ಥಳೀಯ ಜನರು ನೀರಿನಲ್ಲಿ ಇಳಿಯುವಾಗ ಜಾಗೃತಿ ವಹಿಸಬೇಕು. ಈಜು ಬರದೇ ಇರುವವರು ನದಿಯಲ್ಲಿ ಈಜುವುದನ್ನು ಕೈ ಬಿಡಬೇಕು. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುವುದು ಅಗತ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಕಂದಾಯ ಇಲಾಖೆಯ ಎಂ. ಎಸ್. ಪ್ರಭು ಮತ್ತು ಇತರರು ಹಾಜರಿದ್ದರು.

# ನಗರದಲ್ಲಿ ಮಹಿಳೆಯ ಶವ ಪತ್ತೆ

ದಾವಣಗೆರೆ, ನ.4- ಇಲ್ಲಿನ ವಿನೋಬ ನಗರದ 4ನೇ ಮುಖ್ಯರಸ್ತೆ, 3ನೇ ತಿರುವಿನಲ್ಲಿ ಮಹಿಳೆಯ ಶವ ಮೊನ್ನೆ ಪತ್ತೆಯಾಗಿದೆ. ಸುಮಾರು 33 ವರ್ಷ ವಯಸ್ಸಿನ ಈಕೆಯ ಹೆಸರನ್ನು ಅನುಶ್ರೀ ಎಂದು ಗುರುತಿಸಲಾಗಿದೆ.

ದುಂಡು ಮುಖ, ಕೆಂಪು ಗೋದಿ ಬಣ್ಣ, ಕಪ್ಪು ಕೂದಲು, ಸಾಧಾರಣ ಮೈಕಟ್ಟು ಹೊಂದಿರುವ ಮಹಿಳೆ ನಶೆ ಬಣ್ಣದ ಬಿಳಿ ಹೂವಿನ ಚಿತ್ರವಿರುವ ನೈಟಿ ಧರಿಸಿರುತ್ತಾಳೆ.

ಮೃತಳ ವಾರಸುದಾರರು ಬಡಾವಣೆ ಪೊಲೀಸ್ ಠಾಣೆ (08192-272012, 08192-259213) ಯನ್ನು ಸಂಪರ್ಕಿಸಬಹುದು.



ಹಳೆ ಊರಲ್ಲಿನ ಹಳೆಯ ಕಾಲದ ದೀಪಾವಳಿ ಸ್ವಾರಸ್ಯಗಳು...

## ಬಾಲ್ಯದಲ್ಲಿನ ದೀಪಾವಳಿಯ ಕೆಲವು ಸ್ವಾರಸ್ಯಗಳು, ನೆನಪುಗಳು

# 'ನಿಂಬೆ ಹಣ್ಣು ಎಸೆತ, ಸೋಡಾದಲ್ಲಿ ಮಿಳಿತ?'

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ನಮ್ಮಲ್ಲಿ ದೊಡ್ಡ ಹಬ್ಬಗಳ ಹಿಂದೆ ಮುಂದೆ ಗ್ರಾಮೀಣ ಕ್ರೀಡೆಗಳಿಗೂ ಜೀವ ಬರುವುದು ಪ್ರಾಚೀನ ಕಾಲದಿಂದಲೂ ರೂಢಿ. ದುಂಡಿ ಎತ್ತುವುದು, ಪಲ್ಲದ ಮೂಟೆ ಹೊರುವುದು, ಎತ್ತಿನಗಾಡಿ ಓಡಿಸುವುದು, ಹೋರಿ ಹಿಡಿಯುವುದು ಮುಂತಾದವುಗಳ ಸಾಲಿನಲ್ಲಿ ನಿಂಬೆಹಣ್ಣು ಎಸೆಯುವ ಸ್ಪರ್ಧೆಯೂ ಸೇರಿದ್ದು, ಹಳೆಯ ದಾವಣಗೆರೆಯಲ್ಲಿ ದೀಪಾವಳಿಯ ನಂತರದ ದಿನಗಳಲ್ಲಿ ಕೆಲವರು ಇದನ್ನೂ ನಡೆಸುತ್ತಿದ್ದರು.

ನಿಗದಿತ ದೂರವನ್ನು ಎಷ್ಟು ಎಸೆತಗಳಲ್ಲಿ ನಿಂಬೆ ಹಣ್ಣು ಮುಟ್ಟುತ್ತದೆ ಎನ್ನುವುದರ ಮೇಲೆ ಕೆಲವರು ದುಡ್ಡಿನ ಬಾಜಿಯನ್ನೂ ಸಹಾ ಕಟ್ಟುತ್ತಿದ್ದರು. ಅತಿ ದೂರದ ಎಸೆತಗಳೆಂದರೆ ಹಳೆ ಊರಿನ ದುರ್ಗಾಂಬಿಕಾ ದೇವಸ್ಥಾನದ ಮುಂಭಾಗದಿಂದ ಆರಂಭವಾಗಿ ರೈಲ್ವೆ ಹಳಿ ಆಚೆಗಿನ ಲಿಂಗೇಶ್ವರ ದೇವಸ್ಥಾನದವರೆಗೂ ಎಸೆತಗಳು ನಡೆದದ್ದು ಉಂಟು. ಕಡಿಮೆ ದೂರದ್ದಾದರೆ ಒಬ್ಬನೇ ಎರಡು ಅಥವಾ ಮೂರು ಎಸೆತಗಳಲ್ಲಿ ನಿಂಬೆಹಣ್ಣು ಮುಟ್ಟಿಸುವುದು, ಹೆಚ್ಚು ದೂರವಾದರೆ ಇಬ್ಬರು ಅಥವಾ ಮೂವರು ಒಬ್ಬರ ನಂತರ ಒಬ್ಬರಂತೆ ನಿಗದಿತ ಸ್ಥಳವನ್ನು ಮುಟ್ಟಿಸುವುದು, ಬಾಜಿ ಕಟ್ಟಿದವರು ಅದನ್ನು ನೋಡುತ್ತಾ ಸಾಗುತ್ತಿದ್ದರೆ ಉಳಿದವರು ಜೊತೆಯಲ್ಲೇ ಹೋಗುತ್ತಾ ಇದಕ್ಕೆ ಸಾಕ್ಷಿಯಾಗುತ್ತಿದ್ದರು.

ಒಮ್ಮೆ ದೀಪಾವಳಿಯ ಮರುದಿನ ಹಳೆ ಊರಿನ ದೊಡ್ಡಪೇಟೆ ಶ್ರೀ ಬಸವೇಶ್ವರ ದೇವಸ್ಥಾನದಿಂದ ಚೌಕಿಪೇಟೆಯನ್ನು ದಾಟಿ ಹಾಸಬಾವಿ ವೃತ್ತದವರೆಗೆ ನಾಲ್ಕು ಎಸೆತಗಳಲ್ಲಿ ನಿಂಬೆಹಣ್ಣು ಮುಟ್ಟಿಸುವುದೆಂದು ಬಾಜಿ ಕಟ್ಟಲಾಯಿತು. ಮೊದಲನೆಯ ಎಸೆತದಲ್ಲಿ ನಿಂಬೆಹಣ್ಣು ದೊಡ್ಡಪೇಟೆಯ ಮುನಿಸಿಪಲ್ ಆಸ್ಪತ್ರೆಯನ್ನು ದಾಟಿ ಗಿರಿ ಮಲ್ಲೇಶ್ವರ ದೇವಸ್ಥಾನದವರೆಗೂ ಹೋಯಿತು. ಅಲ್ಲಿಂದ ಎರಡನೇ ಎಸೆತದಲ್ಲಿ ನ್ಯಾಷನಲ್ ಪ್ರಿಂಟಿಂಗ್ ಪ್ರೆಸ್, ಅಮರಾವತಿ ಹಾಲಪ್ಪರ ಅಂಗಡಿ ದಾಟಿ ಚೌಕಿಪೇಟೆ ಕಾಳಿಕಾದೇವಿ ರಸ್ತೆ ಮೂಲೆಯ ಶಂಕರ್ ಲಾಲ್ ಅಂಗಡಿಯ ವರೆಗೂ ಬಂದಿತು. ಅಲ್ಲಿಂದ ಮೂರನೇ ಎಸೆತದಲ್ಲಿ ನಿಂಬೆಹಣ್ಣು ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನ, ಬೇವಿನ ಮರ, ಮಾಗನೂರು ಬಸಪ್ಪರ ಮನೆ ದಾಟಿ ಮಾಗಾನಹಳ್ಳಿ ಬಸಪ್ಪನವರ ಮನೆಯವರೆಗೂ ತಲುಪಿತು. ಅಲ್ಲಿಂದ ಕೊನೆಯ ಅಂದರೆ ನಾಲ್ಕನೇ ಎಸೆತ, ನಿಂಬೆಹಣ್ಣು ಗಜಾನನ ಸ್ಟೋರ್ ಅನ್ನು ದಾಟಿ ನಿಗದಿತ ಗುರಿಯಾಗಿದ್ದ ಹಾಸಬಾವಿ ವೃತ್ತವನ್ನು ಮುಟ್ಟಿದೆ ಎಂದು ಎಸೆದವ, ಬಾಜಿ ಕಟ್ಟಿದವರು ಹಾಗೂ ಉಳಿದವರು ಆಕಡೆ ಓಡಿದರು.



ಮಹಾರಾಜ ಪೇಟೆ ಕಡೆಯ ತುಕಾರಾಮ ಉರ್ಫ್ ತುಕ್ಕಪ್ಪ ತುಸು ಹಾಸ್ಯ ಪ್ರವೃತ್ತಿಯ ಕೀಟಲೆ ಸ್ವಭಾವದ ವ್ಯಕ್ತಿ ಎಂಬುದು ಎಲ್ಲರಿಗೂ ಗೊತ್ತಿತ್ತು. ಅನೇಕ ಬಾರಿ ತನ್ನ ಕೀಟಲೆ ಕಿತಾಪತಿಯಿಂದ ಹಿಗ್ಗಾಮುಗ್ಗ ಬೈಸಿಕೊಂಡರೂ ತುಕ್ಕಪ್ಪ ಬೇಸರಗೊಳ್ಳದೇ ನಕ್ಕು ತನ್ನ ಪ್ರವೃತ್ತಿಯನ್ನು ಮುಂದುವರಿಸುತ್ತಿದ್ದ. ಅಂದು ಹಾಸಬಾವಿ ವೃತ್ತದ ಆಚೆಗಿರುವ ಲಾಯರ್ ಚನ್ನಪ್ಪನವರ ಮನೆಯ ಬಳಿ ರಸ್ತೆಯಲ್ಲಿ ಚಿಗಟೇರಿ ಸಂಗಪ್ಪರ ಮಗ ಜಯಣ್ಣರ ಸೋಡಾ ಗಾಡಿ ಬಳಿ ತುಕಾ ರಾಮಪ್ಪ ಹತ್ತು ಪೈಸೆಯ ನಿಂಬು ಸೋಡಾಕ್ಕಾಗಿ ನಿಂತಿದ್ದ. ಈ ಕಡೆಯಿಂದ ಎಸೆದ ನಿಂಬೆಹಣ್ಣು ನಿಗದಿತ ಗುರಿ ಹಾಸಬಾವಿ ವೃತ್ತವನ್ನು ದಾಟಿ ತುಸು ಮುಂದಿದ್ದ ಸೋಡಾ ಗಾಡಿಯ ಬಳಿ ಹೋಯಿತು. ಕಾಲ ಬಳಿ ಬಂದ ನಿಂಬೆಹಣ್ಣನ್ನು ನೋಡಿ ಕೈಗೆತ್ತಿಕೊಂಡ ತುಕ್ಕಪ್ಪ 'ಹತ್ತು ಪೈಸದ ನಿಂಬು ಸೋಡಕ್ಕೆ ನಿಂಬಿ ಹಣ್ಣು ನಾ ಕೊಡ್ತೇನಿ, ಮೂರು ಪೈಸೆ ಬಿಟ್ಟು ಏಳು ಪೈಸೆ ಅಷ್ಟೇ ತಗೋ' ಎಂದು ಜಯಣ್ಣಗೆ ನಿಂಬೆಹಣ್ಣು ಕೊಟ್ಟ. ಜಯಣ್ಣ ಅದನ್ನು ಕತ್ತರಿಸಿ, ಸೋಡಕ್ಕೆ ಹಾಕಿ ಕೊಟ್ಟ, ತುಕ್ಕಪ್ಪ ಕುಡಿದೇ ಬಿಟ್ಟ.

ಈ ಕಡೆಯಿಂದ ಓಡುತ್ತಾ ಹೋದವರು ಹಾಸಬಾವಿ ವೃತ್ತದ ಸುತ್ತೆಲ್ಲಾ ನಿಂಬೆ ಹಣ್ಣಿಗಾಗಿ ಹುಡುಕಾಡಿದರು. ಅಲ್ಲಿದ್ದವರನ್ನು ಕೇಳಿದರು. 'ಅಲ್ಲೇ ಮುಂದೆ ಸೋಡಾ ಗಾಡಿ ಮಟ ಬಂದಂಗಾತು, ಎಲ್ಲೋತೋ ಕಾಣಿಸಲಿಲ್ಲ' ಎಂದರು. ತುಕಾರಾಮ ನಗುತ್ತಾ ನಿಂತಿದ್ದ!. ಅವನನ್ನು ಕೇಳಿದರು. 'ಹೌದು ಬಂತು, ಸೋಡಾ ಸೇರ್ಕಂಡು ನನ್ ಹೊಟ್ಟಿಗೂ ಹೋತು' ಎಂದ. ಸಿಟ್ಟಾದ ಇವರು ಲೇ ಪುಣ್ಯಾತ್ಮ ನಿನಗೆ ಅದೇ ಬೇಕಾಗಿತ್ತೇನಲೇ' ಎಂದು ರೇಗಿದರು. 'ಕಾಲು ಹತ್ರ ಬಂತು, ಪರಮಾತ್ಮ ಕೊಟ್ಟಿದ್ದು ಅಂತ ಸೋಡಾಕ್ಕೆ ಹಾಕ್ಸಿ ಕುಡದೆ' ಎಂದ ನಗುತ್ತಲೇ ತುಕಾರಾಮ. 'ಆತಲ್ಲ ಸಿಪ್ಪಿಯಾರಾ ಎಲ್ಲೈತಿ ತೋರ್ಸು' ಎಂದರು. ತುಕ್ಕಪ್ಪ ಜಯಣ್ಣನ ಕಡೆ ನೋಡಿದ. ಜಯಣ್ಣ ನಿಂಬೆಹಣ್ಣು ಹಿಂಡುವ ಮರದ ಇಕ್ಕಳದಿಂದ ಕೆಳಗೆ ಬಿದ್ದಿದ್ದ ಸಿಪ್ಪೆ ಎತ್ತಿ ತೋರಿಸಿದ. ಆಮೂಲಾಗ್ರವಾಗಿ ಪರೀಕ್ಷಿಸಿದ ಬಾಜಿದಾರರು ಇದು ಅದೇ ನಿಂಬೆಹಣ್ಣು ಎಂದು ತೀರ್ಮಾನಿಸಿ, ಗೆಲುವನ್ನು ಘೋಷಿಸಿಕೊಂಡರು. ಇದನ್ನೆಲ್ಲಾ ನಾನು ನೋಡಿರಲಿಲ್ಲ. ಆದರೆ, ಅಲ್ಲಿ ಪ್ರತ್ಯಕ್ಷ ಕಂಡವರೇ ನನಗೆ ಹೇಳಿದ್ದು.

ಆತ್ಮೀಯ ಓದುಗರೇ ದೀಪಾವಳಿ ಸ್ವಾರಸ್ಯದ ಹಳೆ ಘಟನೆಗಳು ಬರೆದಷ್ಟೂ ಇವೆ. ಬಿಡುವಾದಾಗ ಬೇರೆ ಸ್ವಾರಸ್ಯಗಳನ್ನು ಬರೆಯುವೆ.

# ವಕ್ಫ್ ಬೋರ್ಡ್ ಹೇಳಿಕೆ ವಿರೋಧಿಸಿ ಹರಿಹರದಲ್ಲಿ ಬಿಜೆಪಿ ವತಿಯಿಂದ ಪ್ರತಿಭಟನೆ



ಹರಿಹರ, ನ.4- ರಾಜ್ಯದಲ್ಲಿ ಆಡಳಿತ ಮಾಡುತ್ತಿರುವ ಕಾಂಗ್ರೆಸ್ ಪಕ್ಷ ವಕ್ಫ್ ಮಂಡಳಿಯ ಮೂಲಕ ಜನರನ್ನು ಆತಂಕದ ಸ್ಥಿತಿಗೆ ತಳ್ಳುವುದಕ್ಕೆ ಮುಂದಾಗಿದ್ದು, ಜೊತೆಗೆ ಸರ್ಕಾರಿ ಅಧೀನದಲ್ಲಿ ಇರುವ ಆಸ್ತಿಯನ್ನು ತನ್ನದೆಂದು ವಕ್ಫ್ ಬೋರ್ಡ್ ಹೇಳುತ್ತಿರುವುದನ್ನು ವಿರೋಧಿಸಿ ನಗರದಲ್ಲಿ ಬಿಜೆಪಿ ವತಿಯಿಂದ ಶಾಸಕ ಬಿ.ಪಿ. ಹರೀಶ್ ನೇತೃತ್ವದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮೆರವಣಿಗೆಯು ಹಳೆ ಕೋರ್ಟ್ ಆವರಣದಿಂದ ಪ್ರಾರಂಭಗೊಂಡು ಮುಖ್ಯ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಗಾಂಧಿ ವೃತ್ತದ ಮೂಲಕ ಹಾದು ತಹಶೀಲ್ದಾರ್ ಕಚೇರಿಗೆ ಅಂತ್ಯಗೊಂಡಿತು.

ಈ ವೇಳೆ ಶಾಸಕ ಹರೀಶ್ ಮಾತನಾಡಿ, ರಾಜ್ಯದ ವಿಜಯಪುರ ಜಿಲ್ಲೆ ಸೇರಿದಂತೆ, ರಾಜ್ಯದ ಹಲವು ನಗರಗಳಲ್ಲಿ 1500 ಎಕರೆ ಜಮೀನನ್ನು ವಕ್ಫ್ ಆಸ್ತಿಯೆಂದು ಘೋಷಿಸಿ ತಹಶೀಲ್ದಾರ್ ರವರಿಂದ ಪುಷ್ಟೀಕರಿಸಿ ನೋಟಿಸ್ ನೀಡಲಾಗಿದೆ. ಬೆಂಗಳೂರು ವಿಧಾನಸೌಧವೂ ಸೇರಿದಂತೆ ಹಲವಾರು ಪ್ರಮುಖ ಆಸ್ತಿಗಳು ವಕ್ಫ್‌ಗೆ ಸೇರಿದ್ದು ಎಂದು ಮುಸ್ಲಿಂ ನಾಯಕರು ಹೇಳಿಕೆ ನೀಡುವುದಕ್ಕೆ ಮುಂದಾಗಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿ 1649 ಆಸ್ತಿಗಳ ಹಕ್ಕಿಗಾಗಿ ವಕ್ಫ್ ಗೆ ಪ್ರತಿಪಾದಿಸುತ್ತಿದೆ. ಅದೇ ರೀತಿ ರಾಜ್ಯದ ಸವಣೂರು, ಕೊಪ್ಪಳದ ಕುಕನೂರು, ಶ್ರೀರಂಗಪಟ್ಟಣದ ಮಹದೇವಪುರ ಸೇರಿದಂತೆ ಇತರೆ ನಗರಗಳಲ್ಲಿ ರೈತರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಮುಂದಾಗಿದ್ದು, ರಾಜ್ಯದಲ್ಲಿ ಇಂತಹ ಕೃತ್ಯಗಳು ನಡೆಯುವುದಕ್ಕೆ ಕಾಂಗ್ರೆಸ್ ಸರ್ಕಾರ ಮತ್ತು ಸಚಿವ ಜಮೀರ್ ಅಹ್ಮದ್ ನೇರವಾಗಿ ಕುಮ್ಮಕ್ಕು ಕೊಡುತ್ತಿರುವುದು ರಾಜ್ಯದ ಜನರ ಆತಂಕಕ್ಕೆ ಕಾರಣವಾಗಿದೆ. ಇದನ್ನು ಇಲ್ಲಿಗೆ ನಿಲ್ಲಿಸದೇ ಹೋದರೆ ಮುಂದಿನ ದಿನಗಳಲ್ಲಿ ಇನ್ನೂ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಹನುಮಂತಪ್ಪ, ಬಿಜೆಪಿ ಮುಖಂಡರಾದ ಅಜಿತ್ ಸಾವಂತ್, ಐರಣಿ ಅಣ್ಣಪ್ಪ, ಹಿಂಡಸಗಟ್ಟೆ ಲಿಂಗರಾಜ್, ಬಾತಿ ಚಂದ್ರಶೇಖರ್, ಪರಶುರಾಮ್ ಕಾಟ್ವೆ, ತುಳಜಪ್ಪ ಭೂತೆ, ಹೆಚ್. ಮಂಜಾನಾಯ್ಕ್, ಸಂತೋಷ ಗುಡಿಮನಿ, ರಾಜು ರೋಖಡೆ, ಮಹಾಂತೇಶ್ ಆದಾಪುರ, ಗಿರೀಶ್ ಗೌಡ, ಅದ್ವೈತ ಶಾಸ್ತ್ರಿ, ನವೀನ್, ವಿರುಪಾಕ್ಷಪ್ಪ, ಸುನಿಲ್, ಆದರ್ಶ, ದಿನೇಶ್, ರವಿ ರಾಯ್ಕರ್, ರವಿಕುಮಾರ್, ಮಂಜುನಾಥ್, ಸಾಕ್ಷಿ, ರೂಪಾ ಕಾಟ್ವೆ, ರೂಪಾ, ಸುಧಾ, ಸೋಳಂಕಿ ಹಾಗೂ ಇತರರು ಹಾಜರಿದ್ದರು.

## ಸೌರ ವಲಯದ ಹೂಡಿಕೆ 500 ಶತಕೋಟಿ ಡಾಲರ್

**(1ನೇ ಪುಟದಿಂದ)** ಉತ್ಪಾದನೆ ಹೆಚ್ಚಿಸುವ ಮೂಲಕ, 1000 ದಶಲಕ್ಷ ಜನರಿಗೆ ತಲುಪಬೇಕು. 1,000 ಮೆಟ್ರಿಕ್ ಟನ್ ಕಾರ್ಬನ್ ಡೈಆಕ್ಸೈಡ್ ತ್ಯಾಜ್ಯ ಕಡಿಮೆ ಮಾಡಬೇಕು ಎಂಬ ಗುರಿ ಇದೆ ಎಂದವರು ತಿಳಿಸಿದ್ದಾರೆ.

ಕಳೆದ ತಿಂಗಳು ಭಾರತದಲ್ಲಿ ಸೌರ ವಿದ್ಯುತ್ ಸಾಮರ್ಥ್ಯ 90ಗಿಗಾವ್ಯಾಟ್‌ಗಳಿಗೆ ತಲುಪಿತ್ತು.

2030ರ ವೇಳೆಗೆ ಭಾರತ 500 ಗಿಗಾವ್ಯಾಟ್ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಪಡೆಯುವ ಗುರಿ ಹೊಂದಿದೆ. 2030ರ ವೇಳೆಗೆ 5 ದಶಲಕ್ಷ ಮೆಟ್ರಿಕ್ ಟನ್ ಹಸಿರು ಹೈಡ್ರೋಜನ್ ಉತ್ಪಾದಿಸುವ ಗುರಿಯೂ ಭಾರತದ್ದಾಗಿದೆ. 37.5 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ 50 ಸೌರಪಾರ್ಕ್‌ಗಳಿಗೆ ನಾವು ಒಪ್ಪಿಗೆ ನೀಡಿದ್ದೇವೆ ಎಂದು 7ನೇ ಅಂತರರಾಷ್ಟ್ರೀಯ ಸೌರ ಒಕ್ಕೂಟ (ಐ.ಎಸ್.ಎ.)ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಜೋಶಿ ಹೇಳಿದ್ದಾರೆ.

ಐ.ಎಸ್.ಎ. 120 ದೇಶಗಳನ್ನು ಸದಸ್ಯತ್ವ ಹೊಂದಿದೆ. ಸೌರ ಶಕ್ತಿಯನ್ನು ವಿಶ್ವದಾದ್ಯಂತ ವಿಸ್ತರಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿದೆ.

## ಲಾಹೋರ್ ವಾಯುಮಾಲಿನ್ಯಕ್ಕೆ ಭಾರತ ಕಾರಣ : ಪಾಕ್

ಲಾಹೋರ್, ನ. 4 - ತನ್ನಲ್ಲಿನ ವಾಯು ಗುಣಮಟ್ಟ ಕುಸಿಯುತ್ತಿರುವುದಕ್ಕೆ ಭಾರತವೇ ಕಾರಣ ಎಂದು ಪಾಕಿಸ್ತಾನ ಆರೋಪಿಸಿದೆ. ಲಾಹೋರ್‌ನಲ್ಲಿ ಕಳೆದ ಕೆಲ ದಿನಗಳಿಂದ ವಾಯುಮಾಲಿನ್ಯ ತೀವ್ರವಾಗಿ ಹೆಚ್ಚಾಗಿದೆ. ದಟ್ಟವಾಗಿ ಹರಡಿರುವ ಹೊಗೆಯ ಕಾರಣದಿಂದಾಗಿ ಸಾವಿರಾರು ಜನರು ಅಸ್ವಸ್ಥರಾಗಿದ್ದಾರೆ. ಲಾಹೋರ್ ಭಾರತದ ಗಡಿಗೆ ಹೊಂದಿಕೊಂಡಿದೆ.

ಅತ್ಯಂತ ತೀವ್ರ ಆರೋಗ್ಯ ಸಮಸ್ಯೆ ತರುವ ಪಿಎಂ 2.5 ಕಣಗಳ ಮಟ್ಟ 450ಕ್ಕೆ ತಲುಪಿದೆ ಎಂದು ಪಂಜಾಬ್ ಪರಿಸರ ರಕ್ಷಣಾ ಇಲಾಖೆ ಹೇಳಿದೆ. ಭಾರತದಿಂದ ಬೀಸುತ್ತಿರುವ ಗಾಳಿಯಿಂದಾಗಿ ಮಾಲಿನ್ಯ ಹರಡುತ್ತಿದೆ. ಆದರೆ, ಭಾರತ ಈ ವಿಷಯದ ಬಗ್ಗೆ ಗಂಭೀರವಾಗಿಲ್ಲ ಎಂದು ಪಂಜಾಬ್ ಮಾಹಿತಿ ಸಚಿವೆ ಅಜ್ಮಾ ಬೊಖಾರಿ ಹೇಳಿದ್ದಾರೆ.

ಈ ನಡುವೆ ಪಾಕಿಸ್ತಾನದ ಪಂಜಾಬ್ ಸರ್ಕಾರ, ಲಾಹೋರ್ ಪ್ರಾಥಮಿಕ ಶಾಲೆಗಳನ್ನು ಒಂದು ವಾರದವರೆಗೆ ಮುಚ್ಚಿದೆ.

# ಆದಿತ್ಯನಾಥ್‌ಗೆ ಬೆದರಿಕೆ ಹಾಕಿದ್ದ ಮಹಿಳೆ ಬಿಡುಗಡೆ

ಮುಂಬೈ, ನ. 4 - ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಬೆದರಿಕೆ ಮೆಸೇಜ್ ಕಳಿಸಿದ್ದ ಆರೋಪ ಎದುರಿಸುತ್ತಿದ್ದ 24 ವರ್ಷದ ಮಹಿಳೆಯನ್ನು ವಶಕ್ಕೆ ತೆಗೆದುಕೊಂಡಿದ್ದ ಮುಂಬೈ ಪೊಲೀಸರು, ವಿಚಾರಣೆ ನಂತರ ಬಿಡುಗಡೆ ಮಾಡಿದ್ದಾರೆ.

ಐ.ಟಿ. ಪದವೀಧರೆಯಾದ ಫಾತಿಮಾ ಖಾನ್ ಅವರನ್ನು ಮಹಾರಾಷ್ಟ್ರದ ಉಗ್ರವಾದ ವಿರೋಧಿ ದಳದ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದರು. ಫಾತಿಮಾ ಖಾನ್ ಅವರು ಸುಶಿಕ್ಷಿತೆಯಾಗಿದ್ದಾರೆ. ಆದರೆ, ಮಾನಸಿಕವಾಗಿ ಅಸ್ವಸ್ಥೆಯಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

# ನಗರದಲ್ಲಿ ಬಿಜೆಪಿ ಮುಖಂಡರ ಬಂಧನ - ಬಿಡುಗಡೆ







**(1ನೇ ಪುಟದಿಂದ)** ಅವಧಿಯಲ್ಲಿ ಪ್ರಧಾನಿ ಸ್ಥಾನಕ್ಕೆ ಮೋದಿ ಆಯ್ಕೆಯಾಗದಿದ್ದರೆ ಸಂಸತ್ ಭವನದ ಕಟ್ಟಡವನ್ನೂ ಕಬಳಿಸುತ್ತಿದ್ದರು ಎಂದು ಆರೋಪಿಸಿದರು.

ಜಮೀರ್ ಅಹಮದ್ ಖಾನ್ ಒಬ್ಬ ಮತಾಂಧ ಎಂದ ಅವರು, 'ಮಿಸ್ಟರ್ ಜಮೀರ್ ಅಹಮದ್ ಖಾನ್ ಇದು ಪಾಕಿಸ್ತಾನ, ಬಾಂಗ್ಲಾ ದೇಶವಲ್ಲ' ನಿನ್ನ ಉದ್ಧಟತನದ ಹೇಳಿಕೆಗಳು ಮರುಕಳಿಸಿದರೆ ಗಡಿ ಪಾರು ಮಾಡಿ ಪಾಕಿಸ್ತಾನಕ್ಕೆ ಕಳಿಸಲಿದ್ದೇವೆ ಎಂದು ಎಚ್ಚರಿಕೆ ನೀಡಿದರು.

ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಶಿವಯೋಗಿ ಸ್ವಾಮಿ ಮಾತನಾಡಿ, ಬ್ರಿಟಿಷರು ಭಾರತದಲ್ಲಿ ತಮ್ಮ ಆಡಳಿತವನ್ನು ಮುಂದುವರೆಸಲು ಅನುಸರಿಸುತ್ತಿದ್ದ ಒಡೆದು ಆಳುವ ನೀತಿಯನ್ನೇ ಕಾಂಗ್ರೆಸ್ ಸರ್ಕಾರ ಪಾಲಿಸುತ್ತಿದ್ದು, ಈ ನಿಟ್ಟಿನಲ್ಲಿ ಹಿಂದೂ ಮತ್ತು ಮುಸ್ಲಿಮರ ಮಧ್ಯೆ ಕೋಮು ದ್ವೇಷ ಬಿತ್ತುತ್ತಿದೆ ಎಂದರು.

ಉಪ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮೌಖಿಕವಾಗಿ ನೋಟಿಸ್ ಹಿಂಪಡೆದಿರುವುದು ಜನರಿಗೂ ತಿಳಿದಿದೆ. ಹಾಗಾಗಿ ಮೊದಲು 11ನೇ ಕಾಲಂನಲ್ಲಿ ವಕ್ಫ್ ಆಸ್ತಿ ಎಂದು ಬರೆಯುವುದನ್ನು ಕೂಡಲೇ ರದ್ದುಗೊಳಿಸಿ ಎಂದು ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದರು.

ಹಿಂದೂ ಸಮಾಜದ ಮೇಲೆ ಮುಖ್ಯಮಂತ್ರಿಗಳಿಗೆ ನಿಜವಾದ ಕಾಳಜಿ ಇದ್ದರೆ ಜಮೀರ್ ಅಹಮದ್ ಖಾನ್ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಲಿ ಎಂದರು.

ದೂಡಾ ಮಾಜಿ ಅಧ್ಯಕ್ಷ ಬಿ.ಜಿ. ಅಜಯ್ ಕುಮಾರ್ ಮಾತನಾಡಿ, 1974ರಲ್ಲಿ ಮಾಡಿರುವ ಗೆಜೆಟ್ ನೋಟಿಫಿಕೇಷನ್ನನ್ನು ಅಲ್ಪ ಸಂಖ್ಯಾತರ ತುಷ್ಟೀಕರಣಕ್ಕಾಗಿ ರಾಜ್ಯ ಸರ್ಕಾರ 50 ವರ್ಷಗಳ ನಂತರ ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ರೈತರಿಗೆ ಅನ್ಯಾಯ ಮಾಡುತ್ತಿದೆ ಎಂದು ದೂರಿದರು.

ಈಗಾಗಲೇ ಅವರು ಮಾಡಿರುವ ಅಕ್ರಮ ತಿದ್ದುಪಡಿಗಳನ್ನು ಇ.ಡಿಗೆ ಒಪ್ಪಿಸಬೇಕು. ರೈತರ, ದೀನ-ದಲಿತರ ಹಾಗೂ ಮಠ-ಮಾನ್ಯಗಳ ಆಸ್ತಿಗಳನ್ನು ಬಿಡುಗಡೆಗೊಳಿಸಿ, ಜಮೀರ್ ಅಹಮದ್ ಖಾನ್ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸ ಬೇಕೆಂದು ಆಗ್ರಹಿಸಿದರು.

ಈ ವೇಳೆ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಮಾಜಿ ಶಾಸಕರಾದ ಬಸವರಾಜ್ ನಾಯ್ಕ, ರಾಜೇಶ್, ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾದವ್, ಕೆ.ಎಂ. ವೀರೇಶ್, ಅಣಬೇರು ಜೀವನ್ ಮೂರ್ತಿ, ಲೋಕಿಕೆರೆ ನಾಗರಾಜ್, ಪಕ್ಷದ ಮುಖಂಡರು, ಕಾರ್ಯಕರ್ತರು, ಮಹಿಳಾ ಮುಖಂಡರು ಇದ್ದರು.

# ಉದ್ಯಮಿಗಳ ನಕಲಿ ವಿಡಿಯೋ ರೂಪಿಸಿ ಸೈಬರ್ ವಂಚನೆ



ಬೆಂಗಳೂರು, ನ. 4 - ಪ್ರಮುಖ ಉದ್ಯಮಿಗಳ ನಕಲಿ ವಿಡಿಯೋ ಪ್ರದರ್ಶಿಸಿದ ಸೈಬರ್ ವಂಚಕರು, ಇಬ್ಬರಿಂದ 95 ಲಕ್ಷ ರೂ.ಗಳ ಹೂಡಿಕೆ ಪಡೆದು ವಂಚಿಸಿದ ಘಟನೆ ನಡೆದಿದೆ.

ಪ್ರಮುಖ ಉದ್ಯಮಿಗಳ ನಕಲಿ ವಿಡಿಯೋಗಳನ್ನು ವೆಬ್‌ಸೈಟ್‌ಗಳಲ್ಲಿ ಪ್ರದರ್ಶಿಸಿದ್ದ ವಂಚಕರು, ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ನೀಡುವುದಾಗಿ ಹೇಳಿದ್ದರು. ವೆಬ್‌ಸೈಟ್‌ನಲ್ಲಿ ತೋರಿಸಲಾದ ಲಿಂಕ್‌ಗಳನ್ನು ಕ್ಲಿಕ್ ಮಾಡಿದಾಗ, ನಕಲಿ ವೆಬ್‌ಸೈಟ್‌ಗಳು ತೆರೆದುಕೊಂಡಿವೆ. ಅಲ್ಲಿ ಹೂಡಿಕೆ ಮಾಡಿದವರಿಗೆ ವಂಚನೆಯಾಗಿದೆ.

ಇನ್ಫೋಸಿಸ್ ಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಹಾಗೂ ರಿಲೈಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರ ನಕಲಿ ವಿಡಿಯೋಗಳನ್ನು ಬಳಸಿ ವಂಚನೆ ಮಾಡಲಾಗಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಲಾಗಿದೆ.

ಬೆಂಗಳೂರಿನ ಬನಶಂಕರಿಯ ಮಹಿಳೆಯೊಬ್ಬರಿಗೆ ಈ ವಿಡಿಯೋಗಳನ್ನು ತೋರಿಸಿ, ಹೂಡಿಕೆ ಮಾಡಿದಲ್ಲಿ ಹೆಚ್ಚಿನ ಆದಾಯ ನೀಡಲಾಗುವುದು ಎಂದು ತಿಳಿಸಲಾಗಿತ್ತು.

ಅದರಂತೆ 1.4 ಲಕ್ಷ ರೂ. ಹೂಡಿಕೆ ಮಾಡಿದಾಗ 8 ಸಾವಿರ ರೂ.ಗಳನ್ನು ಆದಾಯ ಎಂದು ನೀಡಲಾಗಿತ್ತು. ಇದನ್ನು ನಂಬಿದ ಮಹಿಳೆ ನಂತರ 6.7 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಆದರೆ, ನಂತರ ಯಾವುದೇ ಹಣ ವಾಪಸ್ ದೊರೆತಿಲ್ಲ.

ಇದೇ ರೀತಿಯ ಮತ್ತೊಂದು ಪ್ರಕರಣದಲ್ಲಿ ಇದೇ ಮಹಿಳೆಗೆ 67 ಲಕ್ಷ ರೂ. ವಂಚನೆಯಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಎರಡನೇ ಪ್ರಕರಣದಲ್ಲಿ ನಿವೃತ್ತ ಉದ್ಯೋಗಿಯೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಬಂದ ನಕಲಿ ಜಾಹೀರಾತು ನಂಬಿ 19 ಲಕ್ಷ ರೂ.ಗಳನ್ನು ವಂಚಕರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದಾರೆ. ನಂತರ ಯಾವುದೇ ಪ್ರತಿಕ್ರಿಯೆ ಬರದೇ ಇದ್ದಾಗ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ಉದ್ಯಮಿಗಳು ಸಾಮಾನ್ಯ ಸಭೆಗಳಿಗೆ ಬಳಸಿದ ವಿಡಿಯೋಗಳನ್ನು ಇಲ್ಲವೇ ಹೂಡಿಕೆದಾರರ ಜೊತೆ ನಡೆಸಿದ ಸಭೆಯ ವಿಡಿಯೋಗಳನ್ನು ವಂಚಕರು ಬಳಸಿ ಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

# ಹರಪನಹಳ್ಳಿಯಲ್ಲಿ ಕೇಂದ್ರೀಯ ವಿ.ವಿ ಸ್ಥಾಪನೆಗೆ ಪ್ರಯತ್ನ

## ಎಂ.ಪಿ.ರವೀಂದ್ರರ 6ನೇ ಪುಣ್ಯಸ್ಮರಣೆಯಲ್ಲಿ ಶಾಸಕರಾದ ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ,ನ.4- ಶೈಕ್ಷಣಿಕವಾಗಿ ಮುಂದು ವರೆದಿರುವ ತಾಲ್ಲೂಕಿನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆಗೆ ಪ್ರಯತ್ನಿಸಲಾಗುವುದು ಎಂದು ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಕಾಶಿ ಸಂಗಮೇಶ್ವರ ಬಡಾವಣೆ ಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಎಂ.ಪಿ.ರವೀಂದ್ರ ಪ್ರತಿಷ್ಠಾನದಿಂದ ಆಯೋಜಿಸಲಾಗಿದ್ದ ಮಾಜಿ ಶಾಸಕ ದಿ.ಎಂ.ಪಿ.ರವೀಂದ್ರ ಅವರ 6ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾಕಾಶಿ ಎಂದೇ ಹೆಸರು ಪಡೆದಿರುವ ಹರಪನಹಳ್ಳಿಗೆ ಕೇಂದ್ರೀಯ ವಿಶ್ವವಿದ್ಯಾಲಯದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಲಾಗುವುದು. ಜೊತೆಗೆ, ತಾಲ್ಲೂಕಿನ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಕೋಚಿಂಗ್ ಸೆಂಟರ್ ತೆರೆಯುವ ಪ್ರಯತ್ನವನ್ನೂ ಮಾಡುತ್ತೇನೆ ಎಂದು ಅವರು ತಿಳಿಸಿದರು.

ತಾಲ್ಲೂಕಿನ ಜನರ ಬಹು ನಿರೀಕ್ಷಿತ ಹಾಗೂ ಸಹೋದರ ಎಂ.ಪಿ.ರವೀಂದ್ರ ಅವರ ಕನಸಿನ ಯೋಜನೆಯಾದ ಗರ್ಭಗುಡಿ ಬ್ರಿಡ್ಜ್-ಕಂ ಬ್ಯಾರೇಜ್ ಕಾಮಗಾರಿ ಬಗ್ಗೆ ಈಗಾಗಲೇ ಸಂಬಂಧಪಟ್ಟ ಸಚಿವರು, ಅಧಿಕಾರಿಗಳ ಜೊತೆ ಚರ್ಚಿಸಿದ್ದು, ಬರುವ ಜನವರಿಯಲ್ಲಿ ಕಾಮಗಾರಿ ಮುಂದುವರೆಯಲ್ಲಿದ್ದು ಪೂರ್ಣಗೊಳ್ಳುವ ವಿಶ್ವಾಸ ಇದೆ ಎಂದರು.



ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಮಾತನಾಡಿ, ರವೀಂದ್ರ ಅವರು ಕೇವಲ ವ್ಯಕ್ತಿಯಾಗಿರಲಿಲ್ಲ. ಅವರು ಒಂದು ಶಕ್ತಿಯಾಗಿದ್ದರು, ಹಿಂದುಳಿದ ಹರಪನಹಳ್ಳಿ ತಾಲ್ಲೂಕನ್ನು 371ಜೆ ಗೆ ಸೇರಿಸುವಲ್ಲಿ ತುಂಬಾ ಕಷ್ಟಪಟ್ಟರು, 60 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೆ ತಂದು ತಾಲ್ಲೂಕಿನ ರೈತರ ಬದುಕನ್ನು ಹಸನಗೊಳಿಸಿದರು ಎಂದರು. ತಮ್ಮ ಅಧಿಕಾರವಧಿ ಯಲ್ಲಿ ತಳ ಸಮುದಾಯ ಗಳಿಗೆ ಸಾಮಾಜಿಕ ನ್ಯಾಯದಡಿ ಅವಕಾಶ ನೀಡುತ್ತಿದ್ದರು, ಅವರಲ್ಲಿ ಎಷ್ಟೇ ನೋವುಗಳಿದ್ದರೂ ಜನರಿಗೆ ಸ್ಪಂದಿ ಸುವ ಗುಣ, ಹೃದಯ ಶ್ರೀಮಂತಿಕೆ ಹೊಂದಿದ್ದರು ಎಂದು ಹೇಳಿದರು.

ಪ್ರಗತಿಪರ ಚಿಂತಕ, ಸಾಹಿತಿ ಇಸ್ಮಾಯಿಲ್ ಎಲಿಗಾರ ಮಾತನಾಡಿ, ದಿ.ಎಂ.ಪಿ.ರವೀಂದ್ರ ಅವರು ಸಾಮೂಹಿಕ ನಾಯಕತ್ವ ಗುಣ, ಅಭಿವೃದ್ಧಿಪರ ಚಿಂತನೆ ಹೊಂದಿದ್ದರು, ಮನುಷ್ಯ ಇದ್ದಾಗಲೇ ತನ್ನ ಹೆಜ್ಜೆ ಗುರುತು ಕಳೆದುಕೊಳ್ಳುತ್ತಾನೆ. ಆದರೆ ಎಂ.ಪಿ.ರವೀಂದ್ರ, ಸತ್ತ ಮೇಲೆಯೂ ತಮ್ಮ ಹೆಜ್ಜೆ ಗುರುತನ್ನು ಬಿಟ್ಟು ಹೋಗಿದ್ದಾರೆ ಎಂದು ಸ್ಮರಿಸಿದರು.

ಚಿಗಟೇರಿ ಬ್ಲಾಕ್ ಅಧ್ಯಕ್ಷ ಕೆ.ಕುಬೇರಪ್ಪ, ಅಲಗಿಲವಾಡ ವಿಶ್ವನಾಥ, ಶಿಕ್ಷಕ ಮೇಘರಾಜ ಮಾತನಾಡಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಟಿ.ವೆಂಕಟೇಶ, ಗೊಂಗಡಿ ನಾಗರಾಜ, ಉದ್ದಾರ ಗಣೇಶ, ಮುಖಂಡರಾದ ಎಚ್.ಎಂ.ಕೊಟ್ರಯ್ಯ, ವಸಂತಪ್ಪ, ಚಿಕ್ಕೇರಿ ಬಸಪ್ಪ, ಓ. ರಾಮಪ್ಪ, ಹುಲಿಕಟ್ಟಿ ಚಂದ್ರಪ್ಪ, ಸಣ್ಣಹಾಲಪ್ಪ, ಸೈಯದ್ ಇರ್ಫಾನ್, ಮತ್ತೂರು ಬಸವರಾಜ, ಶಿವಪುತ್ರ, ನಾಗರಾಜ, ಶಿವರಾಜ, ಮುತ್ತು, ನೇತ್ರಾವತಿ ಸೇರಿದಂತೆ ಇತರರು ಇದ್ದರು.

## ಮಾಜಿ ಸೈನಿಕರಿಗೆ ವಿವಿಧ ಉದ್ಯೋಗ ತರಬೇತಿಗೆ ಅರ್ಜಿ

ದಾವಣಗೆರೆ, ನ.4- ಆರ್ಮಿ ವೆಲ್‌ಫೇರ್ ಪ್ಲೇಸ್ ಮೆಂಟ್ ಆರ್ಗನೈಜೇಷನ್ ಮತ್ತು ಮಾವಿನ್ ಕೊಹರ್ಟ್ ಎಂಬ ಸಂಸ್ಥೆಯ ಸಹಯೋಗದೊಂದಿಗೆ ಭಾರತೀಯ ಸೇನೆಯ ನಿವೃತ್ತಿನಂಚಿನಲ್ಲಿರುವ ಸೈನಿಕರು ಹಾಗೂ ಮಾಜಿ ಸೈನಿಕರುಗಳಿಗೆ ಕೇಂದ್ರ, ರಾಜ್ಯ ಉದ್ಯೋಗ ಮತ್ತು ಬ್ಯಾಂಕ್ ಉದ್ಯೋಗ ನೇಮಕಾತಿಗಾಗಿ ಆನ್‌ಲೈನ್ ತರಬೇತಿಗಳನ್ನು ಆಯೋಜಿಸಲಾಗಿದೆ. ನಾಡಿದ್ದು ದಿನಾಂಕ 6 ರಿಂದ ತರಬೇತಿಗಳು ಪ್ರಾರಂಭವಾಗಲಿದ್ದು, ಆಸಕ್ತರು ಜಾಲ ತಾಣ http://me-qr.com/ZloLV2HS ನಲ್ಲಿ ನೋಂದಾಯಿಸ ಬಹುದು. ಹೆಚ್ಚಿನ ಮಾಹಿತಿಗೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಯನ್ನು ಸಂಪರ್ಕಿಸಲು ಉಪನಿರ್ದೇಶಕ ಡಾ.ಸಿ.ಎ ಹಿರೇಮಠ ತಿಳಿಸಿದ್ದಾರೆ.

## ಬಿಜೆಪಿ ಸರ್ಕಾರದಲ್ಲಿ 216 ನೋಟಿಸ್

**(1ನೇ ಪುಟದಿಂದ)** ಕ್ರಿಶ್ಚಿಯನ್ ಯಾರೇ ಇರಲಿ, ಒಕ್ಕಲೆಬ್ಬಿಸಬಾರದು, ವಕ್ಫ್ ಆಸ್ತಿ ವಿಚಾರ ಗೊತ್ತಾದ ತಕ್ಷಣ ನೋಟಿಸ್ ಹಿಂಪಡೆಯಲಾಗಿದೆ. ಬಿಜೆಪಿ ಅವಧಿಯಲ್ಲಿ 216 ಪ್ರಕರಣಗಳಲ್ಲಿ ನೋಟಿಸ್ ಕೊಟ್ಟಿದ್ದರು. ಯಡಿಯೂರಪ್ಪ, ಸದಾನಂದಗೌಡ, ಜಗದೀಶ್ ಶೆಟ್ಟರ್, ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ನೋಟಿಸ್ ಕೊಟ್ಟಿದ್ದಾರೆ ಎಂದು ಹೇಳಿದರು.

**ಸದರಿ ಮೂಲ ಕ್ರಯ ಪತ್ರ ಕಳೆದಿದೆ**

ಈ ಕೆಳಗೆ ಸಹಿ ಮಾಡಿದ ಶ್ರೀ ಪಾಲಾಕ್ಷ ಎನ್. ಬಿನ್ ನಂದ್ಯಾನಾಯ್ಕ್, ಡೆಪ್ಯುಟಿ ಜನರಲ್ ಮ್ಯಾನೇಜರ್, ವೈ.ಟಿ.ಪಿ.ಎಸ್., ಕೆ.ಪಿ.ಸಿ. ಶಕ್ತಿ ನಗರ, ಥರ್ಮಲ್ ಪವರ್ ಸ್ಟೇಷನ್, ರಾಯಚೂರು ಮತ್ತು ಡೋರ್ ನಂ. 849/10, ಪಂಚಮುಖಿ ಆಂಜನೇಯ ದೇವಸ್ಥಾನದ ಹತ್ತಿರ, ಸರಸ್ವತಿ ಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ ವಾಸಿಯಾದ ನನ್ನ ಸ್ವಾಧೀನಾನುಭವ ಮತ್ತು ಮಾಲೀಕತ್ವದಲ್ಲಿರುವ ದಾವಣಗೆರೆ ಸಿಟಿ, ಪಂಚಮುಖಿ ಆಂಜನೇಯ ದೇವಸ್ಥಾನದ ಹತ್ತಿರ, ಸರಸ್ವತಿ ಬಡಾವಣೆ, ನಿಟ್ಟುವಳ್ಳಿಯಲ್ಲಿ ಬರುವ ಸೈಟ್ ನಂ. 96 ಡೋ.ನಂ. 849/10, ಅಳತೆ : 40x60 ಅಡಿಗಳು ಅಳತೆಯುಳ್ಳ ನಿವೇಶನ ಸೊತ್ತನ್ನು ನಾನು ಈ ಹಿಂದೆ ತಾ. 16.09.2004 ರಂದು ಒಂದು ಕ್ರಯ ಪತ್ರ ಎಸ್.ಆರ್.ನಂ. 04810/04-05 ರನ್ನು ತಾ. 4.11.2024 ರಂದು ಬೆಳಿಗ್ಗೆ ಸುಮಾರು 9ರ ಸಮಯದಲ್ಲಿ ಮನೆಯಿಂದ ಬರುವಾಗ ನಿಟ್ಟುವಳ್ಳಿ ಸರ್ಕಲ್ ಬಳಿ ಬಸ್ಸಿಗೆ ಕಾಯುತ್ತಿರುವಾಗ ರಸ್ತೆಯಲ್ಲಿ ಎಲ್ಲಿಯೋ ಬಿದ್ದು, ಕಳೆದು ಹೋಗಿರುತ್ತದೆ. ಸದರಿ ಮೂಲ ಕ್ರಯ ಪತ್ರ ಯಾರಿಗಾದರೂ ಸಿಕ್ಕಲ್ಲಿ, ಅಂತಹವರು ಈ ಕೆಳಗಿನ ವಿಳಾಸಕ್ಕೆ ತಂದುಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.

**ಶ್ರೀ ಪಾಲಾಕ್ಷ ಎನ್. ಬಿನ್ ನಂದ್ಯಾನಾಯ್ಕ**

# ಅನ್ಯ ಭಾಷೆಯ ಬಳಕೆಯಿಂದ ತಾಯ್ನುಡಿ ಕನ್ನಡಕ್ಕೆ ಗೌರವ ಎಷ್ಟು ?

ಕನ್ನಡವೇ ಸತ್ಯ, ಕನ್ನಡವೇ ನಿತ್ಯ, ಸಿರಿಗನ್ನಡಂ ಗೆಲ್ಗೆ, ನಮ್ಮಮಾತೃ ಭಾಷೆ ಕನ್ನಡ, ಕನ್ನಡವೇ ಎಲ್ಲ ಎಂಬ ಮಾತುಗಳು, ಭಾಷಣಗಳನ್ನು ನಾವು ಪ್ರತಿದಿನ ಬಳಸುವ ಕನ್ನಡ ನುಡಿಯಲ್ಲಿ ಪರೀಕ್ಷಿಸಿ ಕೊಳ್ಳಬೇಕು. ನಮಗೆ ನಮ್ಮ ಭಾಷೆಯ ಕುರಿತು ಅಭಿಮಾನ, ಬಳಕೆ, ಬೆಳವಣಿಗೆಗೆ ಆದ್ಯತೆ ಇವೆಲ್ಲವನ್ನು ಕುರಿತು ಚಿಂತಿಸಿದಾಗ ನಮ್ಮ ಭಾಷೆ ಶುದ್ಧ, ಅಚ್ಚಕನ್ನಡವಾಗಿ ಉಳಿದಿರುವ ಶೇಕಡ ಪ್ರಮಾಣ ಎಷ್ಟು? ಎಂಬ ಮೌಲ್ಯಮಾಪನದ ಅರಿವು, ಭಾಷಾಭಿಮಾನ ಅತಿಮುಖ್ಯವಾದ ಸಂಗತಿಯಾಗುವುದು. ನಿರಂತರ ಪರಕೀಯರ ಆಳ್ವಿಕೆಗೆ ಒಳಗಾದ ಕನ್ನಡಿಗರು ಅವಮಾನವನ್ನು, ದಬ್ಬಾಳಿಕೆಯನ್ನು ಸಹಿಸುತ್ತಲೇ ಬಂದಿದ್ದಾರೆ. ಈಗ ನಮ್ಮ ಮಾತೃ ಭಾಷೆ ಕನ್ನಡವನ್ನು ಉಳಿಸಿ, ಬೆಳೆಸುವ ಹೊಣೆ ನಮ್ಮೆಲ್ಲರದ್ದಾಗಿದೆ. ಪರಕೀಯರ ಆಳ್ವಿಕೆಯ ಪರಿಣಾಮ ಅಚ್ಚಕನ್ನಡ ಸೊರಗಿರುವುದಕ್ಕೆ ಕಾರಣ. ಈಗ ನಮ್ಮವರೇ ನಮ್ಮನ್ನು ಆಳುತ್ತಿದ್ದರೂ ಕನ್ನಡಭಾಷೆ, ಸಂಸ್ಕೃತಿ ಬೆಳೆಯಬೇಕಾದ ಅಗತ್ಯವಿದೆ. ಈ ದಿಶೆಯಲ್ಲಿ ಸರ್ಕಾರದ ಕಾನೂನುಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಎಚ್ಚರಿಕೆಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿಲುವುಗಳು ನಮ್ಮ ಭಾಷೆಗೆ ಆದ್ಯತೆ ಕೊಡಬೇಕಾಗಿದೆ. ಕನ್ನಡ ನೆಲದಲ್ಲಿ ಕನ್ನಡ ಉಳಿಸಿ, ಬೆಳೆಸಬೇಕಿದೆ.

ಕನ್ನಡದ ಮೇಲೆ ಉರ್ದುಭಾಷೆಯ ಪ್ರಭಾವ: ಒಂದು ಭಾಷೆಯ ಶಬ್ದಗಳು ಮತ್ತೊಂದು ಭಾಷೆಯಲ್ಲಿ ಆಸ್ಪದವನ್ನು ಪಡೆಯ ಬೇಕಾದರೆ ಆಯಾ ಭಾಷೆಗಳನ್ನಾಡುವ ಜನರು ಪರಸ್ಪರ ಕೂಡಿರಬೇಕಾಗಿರುವುದು ಅವಶ್ಯ. 'ಸೂಫಿ' ಧರ್ಮಾನುಯಾಯಿಗಳು ಕರ್ನಾಟಕಕ್ಕೆ ಬಂದರು. ಉತ್ತರ ಭಾರತದಿಂದ ಅಲ್ಲಾವುದ್ದೀನ್, ಮಲ್ಲಿಕಾಫರ್ ಮುಂತಾದವರು ಕನ್ನಡ ನಾಡಿಗೆ ಬಂದು ಕನ್ನಡನಾಡಿನ ಅರಸು ಮನೆತನಗಳನ್ನು ಧ್ವಂಸ ಮಾಡಿ ನಾಡನ್ನು ತಮ್ಮವಶ ಮಾಡಿಕೊಂಡರು. ಅಂದಿನಿಂದ ಕನ್ನಡನಾಡು ಮಹಮ್ಮದೀಯರ ವಶವಾದುದು ಇತಿಹಾಸ. ಕ್ರಿ.ಶ. 1346 ರಿಂದ 1700ರ ವರೆಗೆ ನಾಲ್ಕುನೂರು ವರ್ಷ 'ಕನ್ನಡನಾಡು' ಸುಲ್ತಾನರ ಕೈ ವಶವಾಗಿ ಕನ್ನಡ ಭಾಷೆ, ಸಂಸ್ಕೃತಿ ಮೇಲೆ ಇಸ್ಲಾಂ 'ದಖಿನಿ' ಭಾಷೆ ಹುಟ್ಟಿತು. ಪ್ರಭುತ್ವದ ಭಾಷೆ ಪಾರಸಿ, ಉರ್ದು ಜನರ ಅಭಿವ್ಯಕ್ತಿಗೆ ಮಾಧ್ಯಮವಾಗಿ ಬೆಳೆಯುತ್ತಲೇ ಜನಸಂಪರ್ಕ ಭಾಷೆಯಾಗಿ ಗುಲ್ಬರ್ಗಾ, ಬಿಜಾಪೂರ, ಗೋಲ್ಕೊಂಡ, ಔರಂಗಬಾದ್‌ಗಳು ಉರ್ದು ಬೆಳೆಸುವ ತೊಟ್ಟಿಲುಗಳಾದವು. ಕರ್ನಾಟಕದ ಗಡಿ ಸೀಮೆಗಳಲ್ಲಿ ಉರ್ದು-ಕನ್ನಡ, ಮರಾಠಿ-ಕನ್ನಡ, ತೆಲಗು-ಕನ್ನಡ, ಈ ನಾಲ್ಕು ಭಾಷೆಗಳು ಇರುವ ಭಾಷಿಕ ಪರಿಸರವಿದೆ. ಕನ್ನಡ ನಾಡಿನಲ್ಲಿ 'ಉರ್ದು'ವಿನ ಬಳಕೆ ಮತ್ತು ಅದರ ವಿಶೇಷ ಶೈಲಿ ದಖ್ನಿ ಅಥವಾ ದಕ್ನಿನಿ ಎಂದು ಹೆಸರು ಪಡೆಯಿತು. ಕನ್ನಡದಲ್ಲಿ 'ಉರ್ದು'ವಿನ ಬಳಕೆ ಆರಂಭವಾಯ್ತು.

ದೊರೆಗಳ ಪತ್ರ ವ್ಯವಹಾರ ಭಾಷೆ ಉರ್ದು: ವಿಜಯನಗರ ದೊರೆಗಳ ಮತ್ತು ಸುಲ್ತಾನರ ಪರಸ್ಪರ ಪತ್ರ ವ್ಯವಹಾರವು 'ಪಾರಸಿ' ಅಥವಾ 'ಉರ್ದು' ಭಾಷೆಯಲ್ಲಿಯೇ ನಡೆಯುತ್ತಿತ್ತು. ರಾಜರ ಮೆಚ್ಚುಗೆಗೆ ಪಾತ್ರವಾದ ಈ ಭಾಷೆಯನ್ನು ಅಧಿಕಾರಿಗಳು, ಸಾಮಾನ್ಯ ಜನರು ಕಲಿತುಕೊಂಡು ಉಪಯೋಗಿಸುತ್ತಾ, ಬಳಕೆ ಮಾಡುತ್ತಾ ಬಂದಿರುವುದರಿಂದ 'ಕನ್ನಡ'ದ ಮೇಲೆ ಉರ್ದು ಭಾಷೆಯ ಪರಿಣಾಮ ಉಂಟಾಗಿ 'ಕನ್ನಡ' ಸೊರಗಲು ಕಾರಣವಾಯ್ತು. 18ನೇ ಶತಮಾನದ ಉತ್ತರಾರ್ಧದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಮೈಸೂರು ಸಿಂಹಾಸನವನ್ನು ಆಕ್ರಮಿಸಿಕೊಂಡು ಅಲ್ಪಾವಧಿಯ ಕಾಲ ಆಳ್ವಿಕೆ ನಡೆಸಿದರು. ಅನೇಕ 'ಪಾರಸಿ', 'ಉರ್ದು' ಶಬ್ದಗಳು ಮೈಸೂರು ಸೀಮೆಯ ಕನ್ನಡದಲ್ಲಿ ಬೆರೆತವು. ನಂತರ ಅಧಿಕಾರಕ್ಕೆ ಬಂದ ಮೈಸೂರು ಒಡೆಯರ ಕಾಲದಲ್ಲಿ ಕನ್ನಡ-ಉರ್ದು ಬಾಂಧವ್ಯ ಚೆನ್ನಾಗಿಯೇ ಇತ್ತು. ಬೆಂಗಳೂರು, ಮೈಸೂರುಗಳಲ್ಲಿ 'ಉರ್ದು' ಸಾಹಿತ್ಯ ಕೇಂದ್ರಗಳಾಗಿದ್ದವು. ಮೈಸೂರು ದಿವಾನರಾಗಿದ್ದ ಸರ್. ಎಂ.ವಿ. 1915 ರಲ್ಲಿ ಬೆಂಗಳೂರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆರಂಭಿಸಿದರು.




ದಾಸರ ಪದಗಳಲ್ಲಿ 'ಉರ್ದು' ಬಳಕೆ: ಹದಿನಾರನೆಯ ಶತಮಾನದ ಆದಿಭಾಗವಾಗಿದ್ದ ಪುರಂದರ ದಾಸರ ಹಾಡಿನ ಸಾಲುಗಳಲ್ಲಿ 'ಉರ್ದು' ಶಬ್ದಗಳು ಬಳಕೆಯಾಗಿವೆ 'ಗುರುವಿನ ಗುಲಾಮ ನಾಗುವ ತನಕಾ। ದೊರೆಯದಣ್ಣ ಮುಕುತಿ' ಎಂಬುದು, ಇಲ್ಲಿ 'ಗುಲಾಮ' ಎಂಬುದು ಉರ್ದು, ತನಕಾ ಎಂಬ ಶಬ್ದ ಕನ್ನಡದ್ದಲ್ಲ. ದಕ್ನಿನಿಯಿಂದ ಕನ್ನಡಕ್ಕೆ ಬಂದ ಶಬ್ದವಾಗಿದೆ. 'ತಕ್' ಎಂಬ 'ಉರ್ದು' ಶಬ್ದದ ಮೂಲರೂಪವಾದ 'ತನಕ್' ಎಂಬ ಶಬ್ದದಿಂದ ಕನ್ನಡದ 'ತನಕ' ಎಂಬ ಶಬ್ದವು ಹುಟ್ಟಿಕೊಂಡಿದೆ. ಹೀಗೆ ಹರಿದಾಸರ ಹಾಡುಗಳನ್ನು ಗಮನಿಸಿದಾಗ ಕನ್ನಡದಲ್ಲಿ 'ಉರ್ದು' ಶಬ್ದಗಳು ಸಾಕಷ್ಟು ಬಳಕೆ ಆಗಿರುವುದನ್ನು ಕಾಣಬಹುದು.

ಕನ್ನಡ ಬಳಕೆಯಲ್ಲಿ 'ಉರ್ದು' ಪದಗಳು: ಕನ್ನಡದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ 'ಹಕ್ಕು', ಹಕ್ದಾರ್, 'ಹಕ್ಕುದಾರ', ಭರವಸೆ, 'ಫೌಜು', 'ಖುಷಿ', ಬಂಧಿಖಾನಾ, ಬದನಾಮಿ, ದಿವಾಣ, ಚಾವಡಿ, ಝುಗಳ, ರೋಖ, ಹುಕ್ಕುಂ, ಬಂದೋಬಸ್ತು, ಸಿಪಾಯಿ, ಹರಕತ್ತು, ದರಬಾರ್, ಫಿರ್ಯಾದು, ಬಾಕಿ, ಕಛೇರಿ, ನಮಾಜು, ಹಾಜರು, ಕಾಯಿದೆ, ದವಲತ್ತು, ಜಮೀನು, ತರಕಾರಿ, ಜವಾನ್, ಪುರಸತ್ತು, ಚಾಲಾಕು, ಸವಾರ, ಸರ್ದಾರ ಹೀಗೆ 'ಉರ್ದು' ಪದಗಳು ಇಂದಿಗೂ ಕನ್ನಡ ಭಾಷೆಯ ಬಳಕೆಯಲ್ಲಿ ಶಾಶ್ವತ ನೆಲೆಯೂರಿ ಬಳಕೆಯಾಗುತ್ತಲಿವೆ. ಹೀಗೆ ಕನ್ನಡ ಭಾಷೆಯಲ್ಲಿ ಉರ್ದು ಪದಗಳ ಪಟ್ಟಿ ಮಾಡುತ್ತಾ ಹೋದರೆ ಕನ್ನಡದ ಸವಕಳಿಗೆ ಉರ್ದುಭಾಷೆಯ ಪ್ರಭಾವ ಹೆಚ್ಚಿನದ್ದಾಗಿದೆ.

ಕನ್ನಡ ಬಳಕೆಯಲ್ಲಿ ಇಂಗ್ಲಿಷ್ ಪದಗಳು: ಕನ್ನಡ ಭಾಷೆಯ ಬಳಕೆಯಲ್ಲಿ ಕೇವಲ ಉರ್ದು, ಮರಾಠಿ, ತೆಲಗು ಭಾಷೆಗಳ ಜೊತೆಗೆ ಇಂಗ್ಲಿಷ್ ಭಾಷೆಯ ಪ್ರಭಾವದಿಂದ 'ಕನ್ನಡ' ಕಂಗ್ಲೀಷ್ ಆಗಿರುವುದು. ಕನ್ನಡ ಭಾಷೆಯ ಸೊರಗುವಿಕೆಗೆ ಮತ್ತೊಂದು ಮುಖ್ಯ ಕಾರಣ. ಆಂಗ್ಲರು ನಮ್ಮನ್ನು 250 ವರ್ಷಗಳ ಕಾಲ ಆಳ್ವಿಕೆ ಮಾಡಿದ ಪ್ರಯುಕ್ತ ಕನ್ನಡದಲ್ಲಿ-ಇಂಗ್ಲೀಷ್ ಬೆರೆತು ಇಂದು ಪ್ರತಿಷ್ಠೆಯ ಭಾಷೆಯಾಗಿ ರೂಢಿಯಲ್ಲಿದೆ.

ಕನ್ನಡ ಬಂದರೂ ಇಂಗ್ಲಿಷ್ ಬಳಸುವ ಅಧಿಕಾರಿಗಳು, ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿಯೇ ಶಿಕ್ಷಣ, ನಾಯಿಕೊಡೆಗಳಂತೆ ಹುಟ್ಟುತ್ತಿರುವ ಆಂಗ್ಲ ಮಾಧ್ಯಮ ಶಾಲೆಗಳು ಹೆಚ್ಚು ಜನರನ್ನು ಆಕರ್ಷಿಸಿದರೆ, ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳ ದುಸ್ಥಿತಿಯನ್ನು ಸುಸ್ಥಿತಿಗೆ ತರುವ ಜವಾಬ್ದಾರಿ ಯಾರದು ? ಹೀಗಾಗಿ ನಾವು ಬಳಸುವ ಭಾಷೆಯಲ್ಲಿ ಇಂಗ್ಲಿಷ್ ಪದಗಳು ತಾಂಡವವಾಡುತ್ತಾ ತಾಯಿ ಭಾಷೆ ನಮ್ಮಿಂದ ಮರೆಯಾಗುತ್ತಿರುವುದು ನೋವಿನ ಸಂಗತಿ, ನಾವು ದಿನನಿತ್ಯ ಬಳಸುವ ಮೊಬೈಲ್, ಪೋಸ್ಟ್ ಆಫೀಸ್, ರೈಲ್ವೆ ಸ್ಟೇಷನ್, ಪೊಲೀಸ್ ಸ್ಟೇಷನ್, ಇಂಜಿನೀಯರ್, ಡಾಕ್ಟರ್, ಬ್ಯಾಂಕ್, ಮೆಡಿಷನ್, ಇಂಜಕ್ಷನ್, ಟೆಲಿವಿಷನ್, ಮೆಡಿಕಲ್ ಸ್ಟೋರ್, ಬಸ್‌ಸ್ಟ್ಯಾಂಡ್, ರಿಜರ್ವೇಷನ್ ಹೀಗೆ ಇಂಗ್ಲೀಷ್ ಶಬ್ದಗಳು ಹೇಳುತ್ತಾ ಹೋದರೆ 'ಕನ್ನಡ ಶಬ್ದವನ್ನು' ಹುಡುಕಬೇಕಾದ ಪರಿಸ್ಥಿತಿ ಕನ್ನಡ ನೆಲದಲ್ಲಿ ನಿರ್ಮಾಣವಾಗಿದೆ. ನಮಗೆ ಕನ್ನಡ ಪದ ಗೊತ್ತಿದ್ದರೂ ಭಾಷಾಭಿಮಾನದ ಕೊರತೆಯೇ ಈ ಅವಸ್ಥೆಗೆ ಕಾರಣವಾಗಿದೆ.

ಕನ್ನಡ ವ್ಯಾಕರಣ, ಗಾದೆಗಳಲ್ಲಿ ಉರ್ದು ಬಳಕೆ: ಕನ್ನಡ ವ್ಯಾಕರಣ, ಗಾದೆ ಹಾಗೂ ಗ್ರಂಥಗಳಲ್ಲಿ ಕನ್ನಡ ಸಂಸ್ಕೃತಕ್ಕೆ ಹೇಗೆ ಋಣಿಯಾಗಿದೆಯೋ ಹಾಗೆಯೇ 'ಉರ್ದು'ವಿಗೂ ಋಣಿಯಾಗಿದೆ. ಸರಕಾರಿ ದಫ್ತರಗಳಿಗೆ, ಜಮೀನಿಗೆ ಸಂಬಂಧಿಸಿದ ವಿಷಯಗಳಲ್ಲಿ 'ಉರ್ದು' ಶಬ್ದಗಳನ್ನೇ ಬಳಸಲಾಗುತ್ತಿದೆ, ಗ್ರಂಥಕರ್ತರು 'ಉರ್ದು' ಪದಗಳನ್ನು ಬಳಸಿದ್ದಾರೆ. ನಾಟಕಗಳು, ಸಣ್ಣ ಕಥೆಗಳು, ಕಾದಂಬರಿಗಳು, ವಿಮರ್ಶೆಗಳು, ಹಾಗೂ ಕವಿತೆಗಳಲ್ಲಿಯೂ 'ಉರ್ದು' ಶಬ್ದಗಳ ಬಳಕೆಯಾಗಿದೆ. ಗಾದೆಯಲ್ಲಿ ಪ್ರಾಸಕ್ಕಾಗಿ 'ಉರ್ದು' ಶಬ್ದ ಉಪಯೋಗಿಸಿದೆ. 'ಫಾಯಿದೆ ನೋಡಿ ವಾಯಿದೆ ಕಳಕೊಂಡ', 'ಸಾವಿರ ಕುದುರೆ ಸರದಾರ ಮನೆ ಹೆಂಡತಿಗೆ ಪಿಂಜಾರ', 'ಬಡಾಯಿ ಬಲ್ಲವನು ಲುಡಾಯಿಬಲ್ಲನೆ', 'ಅಂಬಾರಿಯಲ್ಲಿ ಕುಳಿತಿದ್ದರೂ ಮುಂಗಾರು ಬಿಡಲಿಲ್ಲ', 'ತುಂಟ ಕುದುರೆ ಗಂಟುಲ ಗಾಮು', 'ಬಜಾರಕ್ಕೆ ಹೋಗಿ ಸಾಮಾನನ್ನು ಚೌಕಾಶಿ ಮಾಡಿ ತರುತ್ತಾಳೆ', 'ಈ ಹುಡುಗ ಬಿಲ್ಕುಲ್ ಲಾಯಕ್ಕಿಲ್ಲ', 'ಈ ಹಣಕ್ಕೆ ಹಕ್ಕುದಾರರು ಯಾರು ಇಲ್ಲ', 'ಇವನು ತಿಂದು ಕೊಬ್ಬಿ ಜೋರಾಗಿದ್ದಾನೆ', ಎಲ್ಲಾ ಏರ್ಪಾಡು ಒಳ್ಳೆ ಜಬರ್‌ದಸ್ತಿನಿಂದ ನಡೆಯಿತು' ಎಂಬ ವಾಕ್ಯಗಳಲ್ಲಿ ವಿಪುಲವಾಗಿ ಉರ್ದು ಪದಗಳಿವೆ.

ಕನ್ನಡ ಭಾಷೆಗೆ ಗೌರವ ಎಷ್ಟು? ತಾಯ್ನುಡಿ ಕುರಿತು ನಮಗೆ ಅರಿವಿದ್ದರೂ ನಮ್ಮ ನಡೆ, ನುಡಿಗಳು, ಜೀವನವಿಧಾನ, ಕನ್ನಡ ಗಾದೆಗಳಲ್ಲಿ, ಆಡುವ ಮಾತಿನಲ್ಲಿ, ವ್ಯವಹಾರ ಭಾಷೆಯಲ್ಲಿ, ಸರ್ಕಾರಿ ದಾಖಲೆಗಳಲ್ಲಿ, ಪೊಲೀಸ್ ಇಲಾಖೆಯಲ್ಲಿ, ಭೂ-ವ್ಯವಹಾರಗಳಲ್ಲಿ ಕನ್ನಡ ಭಾಷೆಯಲ್ಲಿ 'ಉರ್ದು' ಮತ್ತು ಇಂಗ್ಲಿಷ್ ಶಬ್ದಗಳು ಹೆಚ್ಚು ಬಳಕೆಯಾಗಿ ಅಚ್ಚ ಕನ್ನಡ ನಮ್ಮಿಂದ ಕಣ್ಮರೆಯಾಗುತ್ತಿದೆ. ಈ ದಿಶೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡಿಗರನ್ನು ಎಚ್ಚರಿಸಬೇಕಾದ ಅಗತ್ಯವಿದೆ. ಈ ಕುರಿತು ಚಿಂತನ, ಮಂಥನ ಮಾಡಿ ಕನ್ನಡದ ಶುದ್ಧ ಭಾಷೆಯ ಬೆಳವಣಿಗೆಗೆ ಕನ್ನಡಿಗರಾದ ನಾವು ಕಾರ್ಯೋನ್ಮುಖರಾಗೋಣ, ಕನ್ನಡದ ಉಳಿವಿಗಾಗಿ ನಮ್ಮ ಬದ್ಧತೆ, ಆದ್ಯತೆ, ಗೌರವ ನೀಡೋಣ ಎಂಬುದು ನನ್ನ ಆಶಯವಾಗಿದೆ.

**- ಡಾ. ಗಂಗಾಧರಯ್ಯ ಹಿರೇಮಠ**
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.

## ಬೆಟ್ಟಿಂಗ್ ಕಟ್ಟಿ ಪಟಾಕಿ ಮೇಲೆ ಕುಳಿತವನ ಪ್ರಾಣಕ್ಕೆ ಕುತ್ತು

ಬೆಂಗಳೂರು, ನ. 4 - ದೀಪಾವಳಿ ಸಂದರ್ಭದಲ್ಲಿ ಸ್ನೇಹಿತರ ಜೊತೆ ಬೆಟ್ಟಿಂಗ್ ಕಟ್ಟಿ ಪಟಾಕಿ ಪೆಟ್ಟಿಗೆಯೊಂದರ ಮೇಲೆ ಕುಳಿತು, ಪಟಾಕಿ ಸಿಡಿಸಿಕೊಂಡ 32 ವರ್ಷದ ವ್ಯಕ್ತಿಯೊಬ್ಬ ಸಾವನ್ನಪ್ಪಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಕೋಣನಕುಂಟೆಯಲ್ಲಿ ಅಕ್ಟೋಬರ್ 31ರಂದು ಈ ಘಟನೆ ನಡೆದಿದೆ.

ಪಾನಮತ್ತ ಸ್ಥಿತಿಯಲ್ಲಿದ್ದ ಶಬರೀಶ್ ಎಂಬುವವರಿಗೆ ಅವರ ಆರು ಸ್ನೇಹಿತರು ಪಟಾಕಿ ಮೇಲೆ ಕುಳಿತುಕೊಳ್ಳುವಂತೆ ಸವಾಲು ಹಾಕಿದ್ದರು.

ಸಿಡಿಯುವ ಪಟಾಕಿ ಮೇಲೆ ಕುಳಿತಲ್ಲಿ ಆಟೋರಿಕ್ಷಾ ಕೊಡಿಸುವುದಾಗಿ ಸ್ನೇಹಿತರು ಹೇಳಿದ್ದರು. ಅದರಂತೆ ಶಬರೀಶ ಪಟಾಕಿಯ ಮೇಲೆ ಕುಳಿತಿದ್ದನು.

ಪಟಾಕಿ ಸಿಡಿದ ನಂತರ ತೀವ್ರ ಗಾಯಗಳಾಗಿವೆ. ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಸಾವು ಸಂಭವಿಸಿದೆ. ಇಡೀ ಘಟನೆಯ ದೃಶ್ಯ ವಿಡಿಯೋ ಮೂಲಕ ವೈರಲ್ ಆಗಿದೆ.

ಈ ಘಟನೆಯಲ್ಲಿ ಭಾಗಿಯಾದ 6 ಸ್ನೇಹಿತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅವರನ್ನು ಬಂಧಿಸಿ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿದೆ ಎಂದು ಡಿಸಿಪಿ (ದಕ್ಷಿಣ ಬೆಂಗಳೂರು) ಲೋಕೇಶ್ ಜಗಲಸರ್ ಹೇಳಿದ್ದಾರೆ.

## ವರ್ಷವಿಡೀ ಹಬ್ಬದಂತೆ ರಾಜ್ಯೋತ್ಸವ ಆಚರಿಸಬೇಕು



### ಸುವರ್ಣ ಕರ್ನಾಟಕ ವೇದಿಕೆ ಅಧ್ಯಕ್ಷ ಸಂತೋಷ್

ದಾವಣಗೆರೆ, ನ.4- ಕನ್ನಡ ರಾಜ್ಯೋತ್ಸವವನ್ನು ಬರೀ ನವೆಂಬರ್ ತಿಂಗಳಲ್ಲಿ ಅಲ್ಲದೇ, ವರ್ಷದ 365 ದಿನವೂ ಕನ್ನಡದ ಹಬ್ಬದಂತೆ ಆಚರಿಸಬೇಕು ಎಂದು ಸುವರ್ಣ ಕರ್ನಾಟಕ ವೇದಿಕೆ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್ ಹೇಳಿದರು.

ನಗರದ ನಿಟುವಳ್ಳಿ ರಸ್ತೆಯಲ್ಲಿರುವ ಸುವರ್ಣ ಕರ್ನಾಟಕ ವೇದಿಕೆ ಕಚೇರಿ ಯಲ್ಲಿ ಹಮ್ಮಿಕೊಳ್ಳಲಾಗಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಕನ್ನಡ ಭಾಷೆಯಲ್ಲಿ ವ್ಯವಹರಿಸಬೇಕು ಮತ್ತು ಎಲ್ಲರ ಮನೆಯಲ್ಲೂ, ಮನದಲ್ಲೂ ಕನ್ನಡದ ಕಂಪು ನೋಡಬೇಕು. ಈಗಿನ ಶಾಲಾ ಮಕ್ಕಳಲ್ಲಿ ಆಂಗ್ಲ ವ್ಯಾಮೋಹ ಬಹಳವಾಗಿದ್ದು, ಪೋಷಕರು ಕನ್ನಡದ ಬಗ್ಗೆ, ಕನ್ನಡದಲ್ಲಿ ಸಾಧನೆ ಮಾಡಿದ ಕವಿಗಳ ಬಗ್ಗೆ ಮಕ್ಕಳಿಗೆ ತಿಳಿಸಬೇಕು. ಹಾಗಾದಾಗ ಮಾತ್ರ ಕನ್ನಡವನ್ನು ಉಳಿಸಲು ಬೆಳೆಸಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವೇದಿಕೆಯ ರಾಜ್ಯ ಉಪಾಧ್ಯಕ್ಷ ಶಿವಕುಮಾರ್ ಸುಂಕಾಪುರ್, ವೇದಿಕೆ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಕುಮಾರ್ ಭೈರಪ್ಪ, ಜಿಲ್ಲಾ ಉಪಾಧ್ಯಕ್ಷ ರವಿಕುಮಾರ್ ಬಿ.ಆರ್, ಕಣಿವೇಶ್ ಹಾಗೂ ಕಲ್ಪತರು ಶಾಲೆಯ ಶಿಕ್ಷಕಿಯರಾದ ಲಕ್ಷ್ಮಿ, ಮಂಜುಳ, ಸುನೀತ, ಮಮತ, ಸೌಂದರ್ಯ, ಮಾನಸ, ಬಿಂದುಶ್ರೀ, ಲಕ್ಷ್ಮಮ್ಮ ಯುವ ಘಟಕದ ಉಪಾಧ್ಯಕ್ಷ ಸಂತೋಷ್, ಶರತ್ ಹಾಗೂ ಶಾಲೆಯ ಮಕ್ಕಳು, ವೇದಿಕೆಯ ಸದಸ್ಯರುಗಳು ಭಾಗವಹಿಸಿದ್ದರು.

## ಕೊಮಾರನಹಳ್ಳಿ : ಕೆರೆಯ ನಡುಗಡ್ಡೆಯಲ್ಲಿ ಧರ್ಮಧ್ವಜ ಸ್ಥಾಪನೆ



ಮಲೇಬೆನ್ನೂರು, ನ.4- ಭರ್ತಿಯಾಗಿ ಕೋಡಿ ಬಿದ್ದಿರುವ ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಐತಿಹಾಸಿಕ ಕೆರೆಯಲ್ಲಿ 15 ವರ್ಷಗಳ ಬಳಿಕ ಇದೇ ದಿನಾಂಕ 29 ರಂದು ಹಮ್ಮಿಕೊಂಡಿರುವ ತೆಪ್ಪೋತ್ಸವ ಹಾಗೂ ದೀಪೋತ್ಸವದ ಹಿನ್ನೆಲೆಯಲ್ಲಿ ಸೋಮವಾರ ಕಂಕಣಧಾರಣೆ, ಧರ್ಮಧ್ವಜ ಸ್ಥಾಪನೆ ಕಾರ್ಯಕ್ರಮ ಸಂಭ್ರಮದಿಂದ ಜರುಗಿತು.

ಬೆಳಗ್ಗೆ ದೇವಸ್ಥಾನದಲ್ಲಿ ರಂಗನಾಥ ಸ್ವಾಮಿಗೆ ರುದ್ರಾಭಿಷೇಕ ಪೂಜೆ ಮಾಡಲಾಯಿತು.

ಸುರೇಶ್ ಶಾಸ್ತ್ರಿ, ಗುರುರಾಜಚಾರ್, ಮಂಜುನಾಥಸ್ವಾಮಿ ಅವರುಗಳ ನೇತೃತ್ವದಲ್ಲಿ ಕಂಕಣಧಾರಣೆಯ ಪೂಜಾ ವಿಧಿ, ವಿಧಾನಗಳು ಶಾಸ್ತ್ರೋಕ್ತವಾಗಿ ನೆರವೇರಿ ದವು. ನಂತರ ತೆಪ್ಪಗಳಲ್ಲಿ ತೆರಳಿ ಕೆರೆಯ ನಡುಗಡ್ಡೆ ಯಲ್ಲಿ ಧರ್ಮಧ್ವಜ ಸ್ಥಾಪನೆ ಮಾಡಲಾಯಿತು.

ಶಾಸಕ ಬಿ.ಪಿ. ಹರೀಶ್, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಹನಗವಾಡಿ ವೀರೇಶ್, ಚಂದ್ರಶೇಖರ್ ಪೂಜಾರ್, ಎಸ್.ಜಿ. ಪರಮೇಶ್ವರಪ್ಪ, ಜಿ. ಮಂಜುನಾಥ್ ಪಟೇಲ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಕುಷ್ಠರೋಗ ಪತ್ತೆ ಅಭಿಯಾನ

**ಎರೆಬೂದಿಹಾಳ್**

ಮಲೇಬೆನ್ನೂರು, ನ. 4 - ದೇವರಬೆಳಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ಎರೆಬೂದಿಹಾಳ್ ಗ್ರಾಮದಲ್ಲಿ ಕುಷ್ಠರೋಗ ಪತ್ತೆ ಅಭಿಯಾನ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು. ಆಂದೋಲನದ ಈ ವರ್ಷದ ಘೋಷವಾಕ್ಯ'ಕಳಂಕವನ್ನು ಕೊನೆಗೊಳಿಸಿ, ಘನತೆಯನ್ನು ಎತ್ತಿ ಹಿಡಿಯಿರಿ' ಎಂಬ ಸಂದೇಶದೊಂದಿಗೆ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರಾ ಪಂ ಸದಸ್ಯರಾದ ಶಿವರಾಜ್, ದಿವಾಕರ್, ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ, ಆರೋಗ್ಯ ನಿರೀಕ್ಷಣಾಧಿಕಾರಿ ಬಿ.ಆದರ್ಶ, ಆಶಾ ಕಾರ್ಯಕರ್ತೆ ಶ್ರೀಮತಿ ಪುಷ್ಪ ಹಾಗೂ ಪುರುಷ ಸ್ವಯಂ ಸೇವಕರು ಹಾಜರಿದ್ದರು.



## ರಾಣೇಬೆನ್ನೂರಿನಲ್ಲಿ ನೀರು ಪೂರೈಕೆ ಇಲ್ಲ

ರಾಣೇಬೆನ್ನೂರು, ನ.4- ನೀರು ಸರಬರಾಜು ಮುಖ್ಯ ಕೊಳವೆ ಮಾರ್ಗದ ದುರಸ್ತಿ ಕಾಮಗಾರಿ ಪ್ರಯುಕ್ತ ನಾಡಿದ್ದು ದಿನಾಂಕ 6 ಮತ್ತು 7ರಂದು ಎರಡು ದಿನ ನಗರಕ್ಕೆ 24/7 ನಿರಂತರ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

## ಉತ್ತರ ಪ್ರದೇಶದಲ್ಲಿ ಮಿಗ್ – 29 ವಿಮಾನ ಪತನ

ನವದೆಹಲಿ, ನ. 4 - ಭಾರತೀಯ ವಾಯು ಪಡೆಯ ಮಿಗ್ -29 ಸಮರ ವಿಮಾನ ಉತ್ತರ ಪ್ರದೇಶದ ಆಗ್ರಾ ಬಳಿ ಪತನಗೊಂಡಿದೆ. ಸಾಮಾನ್ಯ ತರಬೇತಿ ಹಾರಾಟ ನಡೆಸುತ್ತಿರುವಾಗ ವಿಮಾನದಲ್ಲಿ ಲೋಪ ಉಂಟಾಗಿ ಅವಘಡ ಸಂಭವಿಸಿದೆ. ವಿಮಾನ ಪತನದಿಂದ ಯಾವುದೇ ಜೀವ ಇಲ್ಲವೇ ಆಸ್ತಿ ಹಾನಿ ಆಗದ ರೀತಿಯಲ್ಲಿ ಚಾಲಕ ಮುನ್ನೆಚ್ಚರಿಕೆ ವಹಿಸಿದ್ದಾನೆ ಹಾಗೂ ನಂತರ ವಿಮಾನದಿಂದ ಹೊರಗೆ ಜಿಗಿದಿದ್ದಾನೆ. ವಿಮಾನ ಪತನದ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ.

## ಐಎಎಸ್ ಅಧಿಕಾರಿಗಳ ಹಿಂದೂ ವಾಟ್ಸ್‌ಆಪ್ ಗ್ರೂಪ್ ವಿವಾದ

ತಿರುವನಂತಪುರಂ, ನ. 4 - ಕೇರಳದ ಹಿಂದೂ ಐ.ಎ.ಎಸ್. ಅಧಿಕಾರಿಗಳು ವಿವಾದಿತ ವಾಟ್ಸ್‌ಅಪ್ ಗ್ರೂಪ್ ಮಾಡಿಕೊಂಡಿದ್ದಾರೆ ಎಂಬ ವಿವಾದದ ಬಗ್ಗೆ ಪರಿಶೀಲಿಸುತ್ತಿರುವುದಾಗಿ ಕೇರಳ ಕೈಗಾರಿಕಾ ಸಚಿವ ಪಿ. ರಾಜೀವೆ ತಿಳಿಸಿದ್ದಾರೆ.

ತಮ್ಮ ವೈಯಕ್ತಿಕ ವಾಟ್ಸ್‌ಆಪ್ ಸಂಖ್ಯೆಯನ್ನು ಹ್ಯಾಕ್ ಮಾಡಿ, ಧಾರ್ಮಿಕ ಗುಂಪೊಂದನ್ನು ರಚಿಸಲಾಗಿದೆ ಎಂದು ಐಎಎಸ್ ಅಧಿಕಾರಿಯೊಬ್ಬರು ಪೊಲೀಸರಿಗೆ ದೂರು ನೀಡಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಚಿವ ರಾಜೀವೆ, ಹಿಂದೂ ಐಎಎಸ್ ಅಧಿಕಾರಿಗಳು ವಾಟ್ಸ್‌ಆಪ್ ಗ್ರೂಪ್ ರಚಿಸಿಕೊಂಡಿದ್ದಾರೆ ಎಂಬ ಬಗ್ಗೆ ಪರಿಶೀಲಿಸಲಾಗುವುದು ಎಂದಿದ್ದಾರೆ.

ಈ ವಿಷಯ ಗಂಭೀರವಾಗಿದೆ. ಸಮುದಾಯ ಆಧರಿತ ವಿಭಜನೆ ಕಳವಳಕಾರಿ ಎಂದವರು ಹೇಳಿದ್ದಾರೆ. ಸರ್ಕಾರ ಈ ಬಗ್ಗೆ ಪರಿಶೀಲಿಸಲಿದೆ. ಐಎಎಸ್ ಅಧಿಕಾರಿಗಳಿಗೆ ನೀತಿ ಸಂಹಿತೆ ಇದೆ. ಇದು ಸಾರ್ವಜನಿಕ ಆಡಳಿತ ವಿಭಾಗಕ್ಕೆ ಬರುತ್ತದೆ. ನಾವು ಈ ಬಗ್ಗೆ ಪರಿಶೀಲಿಸುತ್ತಿದ್ದೇವೆ ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು ಹೇಳಿದ್ದಾರೆ.

ವಿವಾದಿತ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ವಿವಿಧ ಸಮುದಾಯಗಳ ಅಧಿಕಾರಿಗಳನ್ನು ಸೇರ್ಪಡೆ ಮಾಡಲಾಗಿದೆ. ಈ ಗ್ರೂಪ್‌ಗೆ ಹಿಂದೂ ಸಮುದಾಯದ ಹೆಸರಿಡಲಾಗಿದೆ ಎಂದು ಪೊಲೀಸರಲ್ಲಿ ದೂರು ನೀಡಿರುವ ಅಧಿಕಾರಿಯ ನಿಕಟವರ್ತಿ ಮೂಲಗಳು ಹೇಳಿವೆ.

ಈ ಬಗ್ಗೆ ಗಮನಿಸಿದ ಅಧಿಕಾರಿ ದೂರು ನೀಡಿದ್ದಾರೆ ಹಾಗೂ ಗ್ರೂಪ್ ಅನ್ನು ಡಿಲೀಟ್ ಮಾಡಿದ್ದಾರೆ. ನಾನು ಯಾವುದೇ ಅಧಿಕಾರಿಯನ್ನು ಈ ಪ್ರಶ್ನಾರ್ಹ ಗ್ರೂಪ್‌ಗೆ ಸೇರಿಸಿಲ್ಲ ಎಂದು ಹೇಳಿದ್ದಾರೆ. ಮೂರು ದಿನಗಳ ಹಿಂದೆ ಈ ವಿವಾದಿತ ಗ್ರೂಪ್ ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ.

**ಮನೆ ಬಾಡಿಗೆಗೆ ಇದೆ**
ವಿವಿ ರೆಸಿಡೆನ್ಸಿ, #1876/A, SS 'A' ಬ್ಲಾಕ್, 2ನೇ ಕ್ರಾಸ್, ಪಾರ್ಕ್ ಎದುರು, 2 BHK ನೆಲಮಹಡಿ ಮನೆ, ಕಾರ್ ಪಾರ್ಕಿಂಗ್, ಬೋರ್ ವೆಲ್ ವ್ಯವಸ್ಥೆ ಇದೆ.
94481 34340
94496 15656, 94487 27266

**ಸೈಟುಗಳು ಮಾರಾಟಕ್ಕಿವೆ**
ಲೋಕಿಕೆರೆ ರಸ್ತೆ, ಲಲಿತ ಇಂಟರ್‌ನ್ಯಾಷನಲ್ ಸ್ಕೂಲ್ ಹಿಂಭಾಗ, ಹೊಸ ಬಡಾವಣೆಗಳಲ್ಲಿ ಒಂದು ಅಡಿಗೆ 2,750/- ರೂ. 30x40 ಪೂರ್ವ, 30x50 ಪಶ್ಚಿಮ ಅಕ್ಕ-ಪಕ್ಕ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟು ಮಾರಾಟಕ್ಕಿದೆ**
54x40 ದಕ್ಷಿಣ ಮುಖ ಇ-ಸ್ವತ್ತು, ಡೋರ್ ನಂ. ಇರುವ ಸೈಟ್, ಹದಡಿ ರಸ್ತೆ, ಶ್ರೀನಿವಾಸ್ ನಗರ, 4ನೇ ಕ್ರಾಸ್, ದಾವಣಗೆರೆ.
83105 03746

**Godown for Rent**
3000 Sq.Ft.
Power Available.
Karur Industrial Area,
Near DC Office.
Ph: 90351 08160

**HOUSE FOR RENT**
# 5628/D-23, "Shivaratna", 2 BHK, ground floor, 4th main, 6th cross (left) East facing, Near, Indoor Neharu Stadium, SS Badavane, 'B' blcok,
94489 29509

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ & ಮಗು ನೋಡಿಕೊಳ್ಳಲು
ಬೆಳಗ್ಗೆ 8 ರಿಂದ ಸಂಜೆ 6 ಗಂಟೆಯವರೆಗೆ ಬೇಕಾಗಿದ್ದಾರೆ. ದಾವಣಗೆರೆ. ಸಂಪರ್ಕಿಸಿ :
74066 68446

**ಲೋನ್ ದೊರೆಯುತ್ತದೆ**
ಕೇಂದ್ರ ಸರ್ಕಾರದ ಯೋಜನೆಯಡಿ ಎಲ್ಲಾ ರೀತಿಯ ಬಿಜಿನೆಸ್ ಮಾಡುವವರಿಗೆ ಸಬ್ಸಿಡಿ ಲೋನ್ ದೊರೆಯುತ್ತದೆ.
90199 76891
9901078762

**ಸ್ಟಾಕ್ ಕ್ಲಿಯರೆನ್ಸ್ ಸೇಲ್**
ಅಲ್ಮೇರಾ, ಕಬ್ಬಿಣದ ಮಂಚ, ಪ್ಲಾಸ್ಟಿಕ್ ಛೇರ್ಸ್ ಮತ್ತು ಇತರೆ ಫರ್ನೀಚರ್ಸ್‌ಗಳು ಅತೀ ಕಡಿಮೆ ದರದಲ್ಲಿ ದೊರೆಯುತ್ತವೆ.
ಸಂಪರ್ಕಿಸಿ.
ಕಬ್ಬೂರ್ ಫರ್ನೀಚರ್ಸ್
ಹಳೇ ಸಿರಿಗೆರೆ ಹಾಸ್ಟೆಲ್ ಬಿಲ್ಡಿಂಗ್, ನರಸರಾಜ ರಸ್ತೆ, ದಾವಣಗೆರೆ.
98443 10140

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಎ' ಬ್ಲಾಕ್, # 2581/2, 4ನೇ ಮೇನ್, 4ನೇ ಕ್ರಾಸ್‌ನಲ್ಲಿ 2ನೇ ಅಂತಸ್ತಿನಲ್ಲಿರುವ ಸಿಂಗಲ್ ಬೆಡ್ ರೂಂ (ಬೋರ್‌ವೆಲ್ ಮತ್ತು ಪಾಲಿಕೆ ನೀರಿನ ಸೌಕರ್ಯವಿರುವ) ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
81236 78870

**ಬೇಕಾಗಿದ್ದಾರೆ**
1) ಸೇಲ್ಸ್ ಮನ್ 2) ಟ್ಯಾಲಿ ಆಪರೇಟರ್
ಅನುಭವವುಳ್ಳವರು ಮಾತ್ರ ಸಂಪರ್ಕಿಸಿ.
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
9900438052, 9740153513

**ಜಮೀನು ಮಾರಾಟಕ್ಕಿದೆ**
ಹಳ್ಳದ ನೀರಿನ 4 ಇಂಚಿನ 2 ಪೈಪ್ ಲೈನ್ ಇದೆ. 3 ಬೋರ್‌ವೆಲ್ ಹಾಗೂ ಡ್ರಿಪ್ ವ್ಯವಸ್ಥೆ, ಸ್ವಂತ TC, 24 ಗಂಟೆ ವಿದ್ಯುತ್ ವ್ಯವಸ್ಥೆಯಿರುವ ಹೊಲಕ್ಕೆ ಬರಲು 10 ಅಡಿ ನಕಾಶೆ ದಾರಿ ಇದೆ. 5 ಎಕರೆ ಅಡಿಕೆ ಹೊಲ, 2 ವರ್ಷದ ಗಿಡ, ಹಿರೇತೊಗಲೇರಿ, ಜೀನಿಯಸ್ ಹತ್ತಿರವಿದೆ.
8217237962, 9741348103

**ಸೈಟುಗಳು ಮಾರಾಟಕ್ಕಿವೆ**
ಪಂಚಾಯಿತಿ ಡೋರ್ ನಂಬರ್ ಸೈಟುಗಳು ಫೈನಲ್ ಅಪ್ರೂವಲ್ ಸೈಟ್, ಕಡಿಮೆ ದರದಲ್ಲಿ ಸಿಗುತ್ತವೆ. 1 ಅಡಿಗೆ 980 ರೂಪಾಯಿಗೆ ಸಿಗಲಿವೆ.
86183 43463
86187 28546

**ಕೆಲಸಕ್ಕೆ ಬೇಕಾಗಿದ್ದಾರೆ**
ಸಮ್ಯಕ್ ಸೆರಾಮಿಕ್ಸ್ & ಗ್ರ್ಯಾನೈಟ್ಸ್ ನಗರದ ಪ್ರತಿಷ್ಠಿತ ಟೈಲ್ಸ್ ಶೋರೂಮ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿರುತ್ತಾರೆ. ಜಾಬ್ ವಿವರ : ಸೇಲ್ಸ್ (Sales) ರಿಸೆಪ್ಷನಿಸ್ಟ್ (Receptionist) ಮಾರ್ಕೆಟಿಂಗ್ (Marketing) ಸಂಪರ್ಕಿಸುವ ಮೊ.ನಂ.
80501 80487

**Manager / Executive**
Male / Female
99645 46667
89700 66666

**ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ಟೆಕ್ಸ್‌ಟೈಲ್ಸ್ ಅಂಗಡಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ.
ಸಿಟಿಜನ್ಸ್ ದಾ
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
93421 95459, 82964 65648
90082 24619

**ಬೆಂಗಳೂರಿನಲ್ಲಿ ಬೇಕಾಗಿದ್ದಾರೆ**
ಮನೆ ಕೆಲಸದ ಮಹಿಳೆ ಬೇಕಾಗಿದ್ದಾರೆ. ಸಂಬಳ 15000 ವಸತಿ ಉಚಿತ. ಸಂಪರ್ಕಿಸಿ :
97400 98047

**ಕೆಲಸಕ್ಕೆ ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಹುಡುಗರು ಬೇಕಾಗಿದ್ದಾರೆ.
98452 63750
80880 24135

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು PUC, B.Com ಆದಂತಹ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ:20 ರಿಂದ 25 (ಅವಿವಾಹಿತರು), ದಾವಣಗೆರೆ ನಗರದಲ್ಲಿ ವಾಸಿಸುವವರು ಮಾತ್ರ. Resum & ಆಧಾರ ಕಾರ್ಡ್ ಜೆರಾಕ್ಸ್ ನೊಂದಿಗೆ ಬೆಳಿಗ್ಗೆ 10 ರಿಂದ ರಾತ್ರಿ 8ರವರೆಗೆ ಸಂಪರ್ಕಿಸಿರಿ:
ಗುಪ್ತ ಗೋಲ್ಡ್ ಪ್ಯಾಲೇಸ್, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
80957 43423

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ.
ಶಿವಸಂಗಮ ಫೈನಾನ್ಸ್ (ರಿ)
ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಲ್ಯಾಬ್ ಟೆಕ್ನೀಷಿಯನ್ ಬೇಕಾಗಿದ್ದಾರೆ**
ಅನುಭವವುಳ್ಳವರಿಗೆ ಆದ್ಯತೆ.
ಸಂಪರ್ಕಿಸಿ : ಸನ್ನಿಧಿ ಆಸ್ಪತ್ರೆ
ಬಾಡ ರಸ್ತೆ, ಬಾಂಬೆ ಸಾ ಮಿಲ್ ಎದುರು, ಸಂತೆಬೆನ್ನೂರು.
76249 99271, 78928 44849

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿನಾಂಕ 6.11.2024ರ ಬುಧವಾರ
ದಿನಾಂಕ 7.11.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ,
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET /
CLAT - Printed Notes +
Study Materials
97398 65711, 94822 44114

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**NEED COMPUTER OPERATOR**
FOR CYBER SHOP
Near Ram & Co Circle, DVG
70221 58935

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
93431 10009
98458 61220

**WANTED**
Fresher's or Learner's
For Auditor Office
(Gents Only)
86180 47131

**ಮನೆ ಲೀಜ್‌ಗೆ ಇದೆ**
ಮೊದಲನೇ ಮಹಡಿ, ಉತ್ತರದ ಬಾಗಿಲು, ಡಬಲ್ ಬೆಡ್ ರೂಂ ಬೋರ್‌ವೆಲ್, ಮುನ್ಸಿಪಲ್ ನೀರಿನ ಸೌಲಭ್ಯವಿರುವ ಹೊಸ ಮನೆ. ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, 4ನೇ ಕ್ರಾಸ್, 4ನೇ ಅಡ್ಡ ರಸ್ತೆ, ಸೋಮೇಶ್ವರ ಆಸ್ಪತ್ರೆ ಹಿಂಭಾಗ.
78489 82895

# ವಕ್ಫ್ ನೋಟಿಸ್ : ಬಿಜೆಪಿ ಪ್ರತಿಭಟನೆ

(1ನೇ ಪುಟದಿಂದ) ನಾಕಾರರಿಂದ ಮನವಿ ಪತ್ರ ಸ್ವೀಕರಿಸಲು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸ್ಥಳಕ್ಕೆ ಧಾವಿಸದಿದ್ದಾಗ ತಾಳ್ಮೆ ಕಳೆದುಕೊಂಡ ವಿಜಯೇಂದ್ರ, 'ಮುಂದೆ ಬನ್ನಿ ಸಾರ್, ನಾವೇನೂ ಕಳ್ಳರು, ದರೋಡೆಕೋರರಲ್ಲ' ಎಂದಾಗ, ಜಿಲ್ಲಾಧಿಕಾರಿ ಮುಂದೆ ಬಂದರು. ಮಾಜಿ ಸಚಿವರಾದ ಗಾಲಿ ಜನಾರ್ದನ ರೆಡ್ಡಿ, ಬಿ. ಶ್ರೀರಾಮುಲು ಮತ್ತು ಗಾಲಿ ಸೋಮಶೇಖರ್ ರೆಡ್ಡಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿಜಯೇಂದ್ರ ಅವರು ಮನವಿ ಪತ್ರವನ್ನು ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಮೂಲಕ ಜಿಲ್ಲಾಧಿಕಾರಿ ಅವರಿಗೆ ಕೊಡಿಸಿದರು.

ವಿಧಾನಸಭೆಯಲ್ಲಿನ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ರಾಜ್ಯದಲ್ಲಿ ತುಘಲಕ್ ಸರ್ಕಾರ ಇದೆ. ಲ್ಯಾಂಡ್ ಜಿಹಾದ್ ಹೆಸರಲ್ಲಿ ರೈತರನ್ನು ಮತಾಂತರ ಮಾಡುತ್ತಿದ್ದಾರೆ. ರಾಜ್ಯ ಬಿಜೆಪಿ ರೈತರ ಪರವಾಗಿ ಮಾಡುತ್ತಿರುವ ಹೋರಾಟ, ಪ್ರತಿಭಟನೆ ರಾಜಕೀಯ ದುರುದ್ದೇಶದ್ದು ಎಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಯಲ್ಲಿ ಯಾವುದೇ ಹುರುಳಿಲ್ಲ. ಅವರ ಮಾತನ್ನು ರಾಜ್ಯದಲ್ಲಿ ಯಾರೂ ನಂಬಲ್ಲ. ಮಸೀದಿಗೆ ಹೋದಾಗ ಟೋಪಿ ಹಾಕುವ ಅವರು, ಹೊರಗಡೆ ಬಂದು ಟೋಪಿ ತೆಗೆಯುತ್ತಾರೆ. ವಕ್ಫ್ ಜಮೀನಿಗೆ ಸಂಬಂಧಿಸಿದಂತೆ ರಾಜ್ಯದ ರೈತರಿಗೆ ಟೋಪಿ ಹಾಕಲು ಹೊರಟಿದ್ದಾರೆ ಎಂದು ಟೀಕಿಸಿದರು.

ರೈತರಿಗೆ ವಕ್ಫ್ ನೋಟಿಸ್ ಖಂಡಿಸಿ ಮೈಸೂರು, ಮಂಗಳೂರಿನಲ್ಲೂ ಪ್ರತಿಭಟನೆ ನಡೆಸ ಲಾಯಿತು. ವಿಜಯಪುರದಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ರೈತರ ಪಹಣಿ ಸಿಗದಂತೆ ಸರ್ವರ್‌ಡೌನ್ ಮಾಡಲಾಗಿದೆ. ಸರ್ಕಾರವೇ ಡೌನ್ ಆಗಲಿದೆ. ಎಲ್ಲರೂ ಒಗ್ಗಟ್ಟಾದರೆ ರೈತರ, ಮಠಗಳ ಜಮೀನು ಉಳಿಯುತ್ತೆ ಎಂದರು.

ವಕ್ಫ್ ಕಾಯ್ದೆ ವಿರುದ್ಧ ಹೋರಾಟ ಮಾಡಲಾಗುತ್ತಿದೆ, ಹೋರಾಟ ಶುರುವಾಗಿದ್ದೇ ವಿಜಯಪುರದ ಪವಿತ್ರ ಭೂಮಿಯಿಂದ. ವಕ್ಫ್ ಕಾಯ್ದೆ ವಿರುದ್ಧ ದೊಡ್ಡ ಮಟ್ಟದ ಹೋರಾಟ ಅಗತ್ಯವಿದೆ. ದೆಹಲಿಯಲ್ಲಿ ಮುಸ್ಲಿಂ ಮೌಲ್ವಿಗಳು ಸಭೆ ನಡೆಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಎಚ್ಚರಿಕೆ ನೀಡಿದ್ದು, ಮೋದಿ ತರುವ ಕಾಯ್ದೆ ಬೆಂಬಲಿಸದಂತೆ ನಿತೀಶ್ ಕುಮಾರ್ ಹಾಗೂ ಚಂದ್ರಬಾಬು ನಾಯ್ಡು ಅವರುಗಳಿಗೂ ಬೆದರಿಕೆ ಹಾಕಿದ್ದಾರೆ ಎಂದರು.

ಶಿಗ್ಗಾಂವಿಯಲ್ಲಿ ರೈತಪರ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲಿನಿಂದಲೂ ಮುಸಲ್ಮಾನರ ಓಲೈಕೆ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಅವರು ಮುಸಲ್ಮಾನರ ಪರ ಇಲ್ಲದಿದ್ದರೆ ಹುಬ್ಬಳ್ಳಿಯಲ್ಲಿ ಪೊಲೀಸರ ವಾಹನ ಜಖಂಗೊಳಿಸಿದ ಮೊಕದ್ದಮೆಗಳನ್ನು ವಾಪಸ್ ಪಡೆಯುತ್ತಿರಲಿಲ್ಲ. ರೈತರ ಆಸ್ತಿ ಕಬಳಿಸುವ ವಕ್ಫ್ ನೋಟಿಸ್ ವಾಪಸ್ ಪಡೆದರೆ ಸಾಲದು, ಗೆಜೆಟ್ ನೋಟಿಫಿಕೇಷನ್ ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

# ಚುನಾವಣಾ ಸಮರಕ್ಕೆ ಧುಮುಕಿದ ಸಿಎಂ, ಸಚಿವರು

## ಇಂದಿನಿಂದ ಶಿಗ್ಗಾವಿ ಕ್ಷೇತ್ರದಲ್ಲಿ ಸಿದ್ಧರಾಮಯ್ಯ ಪ್ರಚಾರ, ಚನ್ನಪಟ್ಟಣದಲ್ಲಿ ಡಿಕೆಶಿ ಪ್ರಚಾರ

ಬೆಂಗಳೂರು, ನ. 4 - ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವರು ಪೂರ್ಣ ಪ್ರಮಾಣದಲ್ಲಿ ಉಪಚುನಾವಣಾ ಸಮರಕ್ಕೆ ಧುಮುಕಿದ್ದಾರೆ.

ಚನ್ನಪಟ್ಟಣ, ಶಿಗ್ಗಾಂವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಕಾಂಗ್ರೆಸ್ ಸರ್ಕಾರ, ಮೂರರಲ್ಲೂ ಗೆಲುವು ಸಾಧಿಸಲು ಮಂತ್ರಿಮಂಡಲವನ್ನೇ ಅಖಾಡಕ್ಕೆ ಇಳಿಸಿದೆ.

ಸ್ವತಃ ಸಿದ್ದರಾಮಯ್ಯ ಅವರು, ಇಂದಿನಿಂದ ಶಿಗ್ಗಾಂವಿ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಪರವಾಗಿ ಪ್ರಚಾರ ಆರಂಭಿಸಿದ್ದರೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಚನ್ನಪಟ್ಟಣದಲ್ಲಿ ಪ್ರಚಾರ ನಡೆಸಿದ್ದಾರೆ.

ಇದರ ಮಧ್ಯೆ, ಆಯ್ದ ಮತ್ತು ಕೆಲವು ಪ್ರಭಾವೀ ಸಚಿವರನ್ನು ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ವಿಧಾನ ಸಭಾ ಚುನಾವಣೆಗೂ ಎಐಸಿಸಿ ವರಿಷ್ಠರೇ ನಿಯೋಜಿಸಿದ್ದಾರೆ.

ಮಹಾರಾಷ್ಟ್ರದ ವಿವಿಧ ಭಾಗಗಳಿಗೆ ತೆರಳಿ, ಈ

**ಪ್ರತೀ ಕ್ಷೇತ್ರಕ್ಕೂ ತಲಾ 10 ಸಚಿವರನ್ನು ನಿಯೋಜಿಸಿದ್ದು ಅವರು, ಇಂದಿನಿಂದ ನವೆಂಬರ್ 11ರವರೆಗೂ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಕೈಗೊಳ್ಳಲಿದ್ದಾರೆ.**

ಸಚಿವರುಗಳು ಐದು ದಿನಗಳ ಕಾಲ ಚುನಾವಣಾ ಪ್ರಚಾರ ನಡೆಸಬೇಕು. ಅಲ್ಲದೆ, ಕೆಲವು ಸಚಿವರು ಕೇರಳದ ವಯನಾಡು ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎರಡು ದಿನ ಪ್ರವಾಸ ಕೈಗೊಂಡು ಪಕ್ಷದ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ಪರ ಮತ ಯಾಚಿಸಬೇಕು.

ಮುಖ್ಯಮಂತ್ರಿ ಅವರು, ರಾಜ್ಯದ ಮೂರು ಕ್ಷೇತ್ರಗಳಲ್ಲೂ ತಲಾ ಎರಡು ದಿನ ಚುನಾವಣಾ ಪ್ರಚಾರ ಕೈಗೊಂಡು, ಮಹಾರಾಷ್ಟ್ರದಲ್ಲೂ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಕೈಗೊಳ್ಳಲಿದ್ದಾರೆ.

ಇದರ ನಡುವೆಯೇ ಸಿದ್ದರಾಮಯ್ಯ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಜೊತೆಗೂಡಿ ವಯನಾಡು ಕ್ಷೇತ್ರದಲ್ಲೂ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಮುಖ್ಯಮಂತ್ರಿ ಸೇರಿದಂತೆ ಇಡೀ ಸಂಪುಟ ನವೆಂಬರ್ 18ರವರೆಗೂ ಚುನಾವಣಾ ಪ್ರಚಾರ ಕಾರ್ಯದಲ್ಲಿ ನಿರತವಾಗಿರುತ್ತದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣ, ಶಿಗ್ಗಾಂವಿ ಹಾಗೂ ಸಂಡೂರಿನಲ್ಲಿ ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ಒಂದು ಸ್ಥಾನಗಳಲ್ಲಿ ಜಯ ಗಳಿಸಿದ್ದವು.

ಉಪಚುನಾವಣೆಯಲ್ಲಿ ಮೂರೂ ಕ್ಷೇತ್ರಗಳಲ್ಲೂ ಗೆಲುವು ಸಾಧಿಸುವ ಮೂಲಕ ಪ್ರತಿಪಕ್ಷಗಳಿಗೆ ಪಾಠ ಕಲಿಸುವ ಉದ್ದೇಶದಿಂದ ಮತದಾರರ ಓಲೈಕೆಗೆ ತಮ್ಮ ಇಡೀ ಸಂಪುಟವನ್ನೇ ಸಿದ್ದರಾಮಯ್ಯ ಪಣಕ್ಕೊಡ್ಡಿದ್ದಾರೆ.

# ನಗರದಲ್ಲಿ ವಿಶ್ವವಿದ್ಯಾಲಯ ಮಟ್ಟದ ಜ್ಯೂಡೋ ಪಂದ್ಯಾವಳಿ



ದಾವಣಗೆರೆ, ನ.3- ನಗರದ ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಕ್ರೀಡಾ ವಿಭಾಗ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ 2024-25 ನೇ ಸಾಲಿನ ದಾವಣಗೆರೆ ವಿಶ್ವವಿದ್ಯಾಲಯದ ಅಂತರ ಕಾಲೇಜು ಪುರುಷ ಮತ್ತು ಮಹಿಳೆಯರ ಜ್ಯೂಡೋ ಪಂದ್ಯಾವಳಿ ಮತ್ತು ವಿವಿ ತಂಡದ ಆಯ್ಕೆ ಪ್ರಕ್ರಿಯೆ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಸಭಾಂಗಣದಲ್ಲಿ ಇಂದು ಜರುಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಉದ್ಯಮಿ ಸಮರ್ಥ್ ಶಾಮನೂರು ಅವರು ಕ್ರೀಡಾಪಟುಗಳಿಗೆ ಶುಭ ಹಾರೈಸಿ, ಜ್ಯೂಡೋ ಕ್ರೀಡೆಯ ವಿವಿಧ ಮಾದರಿ ಪಟ್ಟುಗಳನ್ನು ವೀಕ್ಷಿಸಿದರು.

ದಾವಣಗೆರೆ ವಿ.ವಿ. ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಅಧ್ಯಕ್ಷ ಡಾ. ಸಿ. ಶಂಕರಪ್ಪ ಮಾತನಾಡಿ, 'ವಿದ್ಯಾರ್ಥಿಗಳು ಕ್ರೀಡಾ ಮನೋಭಾವನೆಯನ್ನು ಬೆಳೆಸಿಕೊಂಡು ಉತ್ತಮ ಕ್ರೀಡಾಪಟುಗಳಾಗಿ ರೂಪುಗೊಳ್ಳಬೇಕು ಎಂದರು.

ದಾವಣಗೆರೆ ವಿ.ವಿ ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ಮಹಿಳಾ ಉಪಾಧ್ಯಕ್ಷರಾದ ಡಾ. ಎಂ. ಆರ್. ರೇಖಾ ಅವರು ಮಾತನಾಡಿ, ನಗರದಲ್ಲಿ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರಿಗೆ ಮೂಲಭೂತ ಸೌಕರ್ಯಗಳ ಅಗತ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಪ್ರೊ. ನೀಲಾಂಬಿಕ ಜಿ. ಸಿ. ಅವರು ಮಾತನಾಡಿ, ಕ್ರೀಡೆಯು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದೆ. ಜ್ಞಾನಾರ್ಜನೆ ಜೊತೆಗೆ ಕ್ರೀಡೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಾವು ದೈಹಿಕ, ಮಾನಸಿಕ ಮತ್ತು ಬೌದ್ಧಿಕವಾಗಿ ವಿಕಸನ ಹೊಂದಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಮಾ.ಸ.ಬ. ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಇಂದೂಧರ ನಿಶಾನಿಮಠ್, ಕಾರ್ಯದರ್ಶಿ ಇ. ಬಸವರಾಜು, ದಾವಣಗೆರೆ ವಿ.ವಿ. ಕ್ರೀಡಾ ಅಧಿಕಾರಿ ಡಾ. ಬಿ. ಎಚ್. ವೀರಪ್ಪ, ಕ್ರೀಡಾ ಸಂಚಾಲಕ ಎ.ಬಿ. ಡಾ. ವಿಜಯಕುಮಾರ್ ಮಾತನಾಡಿದರು. ಡಾ. ಒ. ಪ್ರವೀಣ್ ಕುಮಾರ್ ಸ್ವಾಗತಿಸಿದರು.

ಕ್ರೀಡಾ ಸದಸ್ಯ ಡಾ. ಎಂ. ಮಂಜಪ್ಪ ನಿರೂಪಿಸಿದರು. ಕು. ಸುನೀತಾ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಡಾ. ರಾಘವೇಂದ್ರ ಆರ್. ವಂದಿಸಿದರು. ಈ ಸಂದರ್ಭದಲ್ಲಿ ಪ್ರೊ. ಟಿ. ಆರ್. ರಂಗಸ್ವಾಮಿ, ಪ್ರೊ. ಕೆ. ವೈ. ಈಶ್ವರ್ ಮತ್ತಿತರರು ಉಪಸ್ಥಿತರಿದ್ದರು.

# ಎಲೆಬೇತೂರಿನಲ್ಲಿ ವಾಯುವಿಹಾರ ಬಳಗದಿಂದ ರಾಜ್ಯೋತ್ಸವ ಆಚರಣೆ



ದಾವಣಗೆರೆ, ನ. 4 - ತಾಲ್ಲೂಕಿನ ಎಲೆಬೇತೂರು- ಬಿ.ಕಲಪನಹಳ್ಳಿ ರಸ್ತೆಯ ವಾಯುವಿಹಾರ ಬಳಗದ ವತಿಯಿಂದ ನಂದಿ ಇಂಟೀರಿಯರ್ಸ್ ಆವರಣದಲ್ಲಿ 69ನೇ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಾಯುವಿಹಾರ ಬಳಗದ ಮಾಳಿಗೇರ ಬಸವರಾಜಪ್ಪ, ಮರಕುಂಟಿ ಕರಿಬಸಪ್ಪ, ನಂದಿ ಇಂಟೀರಿಯರ್ ಮಾಲೀಕ ಪ್ರಕಾಶ್ ಮಾಳಿಗಿ, ಮರಕುಂಟಿ ಚಂದ್ರಪ್ಪ, ಮಾಳಿಗೇರ ಷಡಕ್ಷರಪ್ಪ, ಬುಡ್ನಾರಪ್ಪ ವಿಶ್ವನಾಥ, ಮರಕುಂಟಿ ಮಂಜುನಾಥ, ನ್ಯಾಯಬೆಲೆ ಅಂಗಡಿಯ ಪ್ರಭು, ಮರಕುಂಟಿ ನರೇಂದ್ರ, ಐಗೂರು ಕರಿಬಸಪ್ಪ, ಮರಕುಂಟಿ ರಾಜಪ್ಪ, ವಡ್ಡಿನಹಳ್ಳಿ ರಾಜಶೇಖರ್ ಬಡಿಗೇರ್ ಮಂಜಣ್ಣ, ಕಲಪನಹಳ್ಳಿ ನಾಗಣ್ಣ, ಮಂಜುನಾಥ ಮತ್ತಿತರರು ಇದ್ದರು.

# ಪಾಲಿಕೆಯಿಂದ ಸರಸ್ವತಿ ನಗರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ



ದಾವಣಗೆರೆ, ನ.4- ನಗರದ 33ನೇ ವಾರ್ಡಿನಲ್ಲಿ ಮಹಾನಗರ ಪಾಲಿಕೆಯ ಸಾಮಾನ್ಯ ನಿಧಿ ಅಡಿಯಲ್ಲಿ ಸರಸ್ವತಿ ನಗರ 'ಎ' ಬ್ಲಾಕ್, 2ನೇ ಮೇನ್, 4ನೇ ಕ್ರಾಸ್ ಸಿಸಿ ರಸ್ತೆ ಮತ್ತು ಸಿಸಿ ಚರಂಡಿ 35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ಕಾಮಗಾರಿಯ ಗುದ್ದಲಿ ಪೂಜೆಯನ್ನು ಇಂದು ನೆರವೇರಿಸಲಾಯಿತು. ವಾರ್ಡಿನ ಸದಸ್ಯ ಕೆ.ಎಂ. ವೀರೇಶ್, ಮಾಜಿ ದೂಡ ಅಧ್ಯಕ್ಷ ಕೆ. ಎಂ. ಸುರೇಶ್, ಬಿಜೆಪಿ ಮುಖಂಡರಾದ ಎಲ್.ಎನ್. ಕಲ್ಲೇಶ್, ವಿಶ್ವನಾಥ್, ಇಂಜಿನಿಯರ್ ಕರಿಬಸಪ್ಪ, ಟಿ.ಎಂ. ರೇಣುಕಾರಾಧ್ಯ, ನಾಗಣ್ಣ, ಗಿರಿಜಾ, ಆರ್. ರಾಧಾ ಮತ್ತಿತರರಿದ್ದರು.

## ಓದುಗರ ಪತ್ರ

### ನೀನಾರಿಗಾದೆಯೋ ಎಲೆ ಮಾನವ ?

ಮಾನ್ಯರೇ,

ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮೃತಪಟ್ಟಿದ್ದ ಆನೆಯ ಮೃತದೇಹ ನೋಡಲು ಗಜಪಡೆಯೇ ನೆರೆದಿದ್ದ ಮನಕಲಕುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿರುವುದನ್ನು ಗಮನಿಸಿದರೆ ಪ್ರಾಣಿಗಳಲ್ಲೂ ತನ್ನ ಸಂಕುಲದ ಬಗ್ಗೆ ಅಪಾರ ಪ್ರೀತಿ, ಕರುಣೆ, ಮೈತ್ರಿ ಇರುವುದು ವ್ಯಕ್ತವಾಗುತ್ತದೆ. ಆದರೆ ಮಾನವೀಯತೆ ಇರಬೇಕಾದ ಮನುಷ್ಯರಲ್ಲೇ ಹೊಟ್ಟೆಕಿಚ್ಚು, ದ್ವೇಷ, ಅಸೂಹೆಗಳಿಂದ ತನ್ನ ತಂದೆ-ತಾಯಿ, ಒಡ ಹುಟ್ಟಿದವರು ಮರಣಿಸಿದಾಗಲೂ ಹಣ, ಆಸ್ತಿ ಜಗಳಗಳಿಂದ ನೋಡಲು ಹೋಗದ ಘಟನೆಗಳಿವೆ. ಆದರೆ ಇಲ್ಲಿ 17 ಆನೆಗಳ ಹಿಂಡು ಅವುಗಳನ್ನು ಯಾರೂ ಕರೆತರದೆ ತಾವೇ ಸ್ವಯಂ ಪ್ರೇರೇಪಣೆಯಿಂದ ಹುಡುಕಿಕೊಂಡು ಆನೆಯ ಮೃತದೇಹದ ಬಳಿ ಸಂತಾಪ ಸೂಚಿಸುವಂತೆ ನಿಂತಿರುವುದು ಎಲ್ಲಾ ಮಾನವರಿಗೆ ಪ್ರೀತಿ, ಮೈತ್ರಿಯ ಪಾಠ ಹೇಳುವಂತಿದೆ.

ಹುಟ್ಟಿದವರೆಲ್ಲಾ ಮರಣಿಸಲೇ ಬೇಕು. ಆದರೆ ಇರುವವರೆಗೆ ನನ್ನಿಂದ, ನನ್ನದು, ನಾನೇ ಎನ್ನುವ ಅಹಂ ಭಾವ, ಸಂಕುಚಿತತೆಯನ್ನು ಬಿಟ್ಟು 'ನಮ್ಮಿಂದ, ನಮ್ಮದು, ನಾವು' ಎನ್ನುವ ವಿಶಾಲ ಭಾವನೆ ಬೆಳೆಸಿಕೊಳ್ಳೋಣ. ಬಸವಣ್ಣನವರು ಹೇಳುವಂತೆ 'ಇವನಾರವ, ಇವನಾರವ ಎಂದೆನಿಸದೆ, ಇವ ನಮ್ಮವ, ಇವ ನಮ್ಮವ, ನಮ್ಮ ಮನೆಯ ಮಗನೆಂದೆನಿಸಯ್ಯ' ಎನ್ನುವ ವಚನ ಪಾಲಿಸೋಣ. ವಿವೇಕದ ಆಲೋಚನಾ ಶಕ್ತಿಯುಳ್ಳ ನಾವು ಮೃಗಗಳಿಗಿಂತ ಹೆಚ್ಚೆಚ್ಚು ಪ್ರೀತಿ, ಕರುಣೆ, ಮೈತ್ರಿ ಬೆಳೆಸಿಕೊಳ್ಳೋಣ.

**- ಶಿವನಕೆರೆ ಬಸವಲಿಂಗಪ್ಪ**, ದಾವಣಗೆರೆ

### 'ರೀಲ್ಸ್' ಹುಚ್ಚಾಟಕ್ಕೆ ಕಡಿವಾಣ ಬೇಕು..

ಮಾನ್ಯರೇ,

ತುಮಕೂರು ಜಿಲ್ಲೆಯ ಮಂದಾರಗಿರಿ ಬೆಟ್ಟದ, ಮೈದಾಳೆ ಕೆರೆ ಕೋಡಿಯಲ್ಲಿ ಸೆಲ್ಫಿ ಕ್ಲಿಕ್ಕಿಸಲು ಹೋಗಿ ಜಾರಿ ಬಿದ್ದ ಯುವತಿ 22 ಗಂಟೆಗಳ ಕಾಲ ಜೀವನ್ಮರಣ ಏಕಾಂಗಿ ಹೋರಾಟದ ನಂತರ ಅಗ್ನಿಶಾಮಕ ಮತ್ತು ಪೊಲೀಸ್ ರಕ್ಷಣಾ ಕಾರ್ಯಾಚರಣೆಯಿಂದ ಸಾವನ್ನೇ ಗೆದ್ದು ಬಂದಿದ್ದಾಳೆ.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳೆಂಬ ವ್ಯಾಮೋಹಕ್ಕೆ ಬಿದ್ದ ಹದಿ ಹರೆಯದವರು ಲಂಗು ಲಗಾಮಿಲ್ಲದೆ, ಸ್ವ-ನಿಯಂತ್ರಣವನ್ನೇ ಕಳೆದುಕೊಂಡು, ಅಪಾಯಕಾರಿ ಸ್ಥಳವೆನ್ನದೆ, ಸಾವನ್ನೂ ಲೆಕ್ಕಿಸದೆ ಫೋಟೋ ಗೀಳಿಗೆ ಬಿದ್ದಿರುವುದು ನಿಜಕ್ಕೂ ದುರಂತ. ಇದಕ್ಕೆಲ್ಲ ಕಾರಣ ಅತಿಯಾದ ಮೊಬೈಲ್ ಗೀಳು. ಸೆಲ್ಫಿ, ರೀಲ್ಸ್ ನಂತಹ ಹುಚ್ಚಾಟಕ್ಕೆ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವ ಮಕ್ಕಳ ಬಗ್ಗೆ ಪೋಷಕರು ಸ್ವಲ್ಪ ಎಚ್ಚರ ವಹಿಸಬೇಕಾಗಿದೆ. ಕೆಲವು ಪ್ರಕರಣಗಳಲ್ಲಿ ಇಂತಹ ಹುಚ್ಚಾಟಕ್ಕೆ ಜೀವಗಳೇ ಹೋಗಿವೆ. ಎಲ್ಲದಕ್ಕೂ ಮಿತಿ ಇದೆ. ಈಗಿನ ಆಧುನಿಕ ಜೀವನ ಶೈಲಿಗೆ ಯಾವುದೂ ಅತಿಯಾಗಬಾರದು. ಅತಿಯಾದರೆ ಅಮೃತವೂ ವಿಷವಲ್ಲವೇ.?


**-ಮುರುಗೇಶ ಡಿ, ದಾವಣಗೆರೆ.**

# ನಗರದಲ್ಲಿ ಇಂದು ಶ್ರೀಶೈಲ ಪೀಠದ ಉಭಯ ಜಗದ್ಗುರುಗಳ ಸ್ಮರಣೋತ್ಸವ

ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 38ನೇ ವರ್ಷದ ಸ್ಮರಣೋತ್ಸವ ಕಾರ್ಯಕ್ರಮವು ಇಂದಿನಿಂದ ಮೂರು ದಿನಗಳ ಕಾಲ ಶ್ರೀ ಡಾ. ಸದ್ಯೋಜಾತ ಸ್ವಾಮೀಜಿ ಹಿರೇಮಠದಲ್ಲಿ ನಡೆಯಲಿದೆ.

ಜೊತೆಗೆ, ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 13ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮವೂ ಜರುಗಲಿದೆ ಎಂದು ಪುಣ್ಯಾರಾಧನಾ ಸೇವಾ ಸಮಿತಿ ಕಾರ್ಯಾಧ್ಯಕ್ಷ ಎನ್.ಎ. ಮುರುಗೇಶ್ ತಿಳಿಸಿದ್ದಾರೆ.

ಈ ಎಲ್ಲಾ ಕಾರ್ಯಕ್ರಮಗಳ ದಿವ್ಯ ಸಾನ್ನಿಧ್ಯವನ್ನು ಉಜ್ಜಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು ಮತ್ತು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ





ಶಿವಾಚಾರ್ಯ ಭಗವತ್ಪಾದರು ವಹಿಸುವರು.

ಇಂದು ಸಂಜೆ 6 ಗಂಟೆಗೆ ಏರ್ಪಾಡಾಗಿರುವ ಧರ್ಮ ಸಮಾರಂಭದ ಅಧ್ಯಕ್ಷತೆಯನ್ನು ಹೊನ್ನಾಳಿ ಹಿರೇಕಲ್ಮಠದ ಶ್ರೀ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ವಹಿಸುವರು.

ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ, ವಿಧಾನ ಪರಿಷತ್ತಿನ ಮಾಜಿ ಮುಖ್ಯಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ದೂಡಾ ಮಾಜಿ ಅಧ್ಯಕ್ಷರುಗಳಾದ ಯಶವಂತರಾವ್ ಜಾಧವ್, ದೇವರಮನಿ ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶ್ರೀ ಗುರುಬಸವ ಮಹಾಂತ ಶಿವಾಚಾರ್ಯ ಸ್ವಾಮೀಜಿ (ತೊಗರ್ಸಿ ಮಳೆಮಠ) ನಾಂದಿ ನುಡಿಗಳನ್ನಾಡುವರು. ನಾಡಿನ ಹಿರಿಯ ಸಾಹಿತಿ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಅವರು ಆರೋಗ್ಯ ಮತ್ತು ಅಧ್ಯಾತ್ಮ ವಿಷಯ ಕುರಿತು ಉಪನ್ಯಾಸ ನೀಡುವರು.

**ಗುರು ರಕ್ಷೆ :** ಹಿರಿಯ ವೈದ್ಯ ಡಾ. ಎಸ್.ಎಂ. ಎಲಿ, ವರ್ತಕ ರಮಣ್‌ಲಾಲ್ ಪಿ. ಸಂಘವಿ, ಚರ್ಮರೋಗ ತಜ್ಞರಾದ ಡಾ ಕುಸುಗೂರು ಮಠ, ಶ್ವಾಸಕೋಶ ತಜ್ಞ ಡಾ. ಬಿ.ಪಿ. ರಾಜೇಶ್, ಹಿರಿಯ ನೇತ್ರ ತಜ್ಞ ಡಾ. ರವೀಂದ್ರನಾಥ್, ವರ್ತಕರಾದ ಎಸ್. ನಾಗರಾಜ್, ಕೆ. ಬಸವಲಿಂಗಪ್ಪ, ಶ್ರೀಮತಿ ಗೀತಾ ಸಂಕ್ಲೀಪುರ, ಮಧು ಹಾಲೇಶ್.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳವಯ್ಯ, ವರ್ತಕ ಬೆಳ್ಳೂಡಿ ಜ್ಯೋತಿ ಪ್ರಕಾಶ್, ಲೆಕ್ಕ ಪರಿಶೋಧಕ ರಾಧೇಶ್ ಜಂಬಿಗಿ, ಸಾಹಿತಿ ಶಿವಯೋಗಿ ಹಿರೇಮಠ ಶಿವಕುಮಾರ್ ಡಿ. ಶೆಟ್ಟರ್, ಜಗದ್ಗುರುಗಳಿಗೆ ಗೌರವಾರ್ಪಣೆ ಮಾಡಲಿದ್ದು, ಟಿ.ಹೆಚ್. ಶಿವಕುಮಾರಸ್ವಾಮಿ ಮತ್ತು ಸಂಗಡಿಗರು ಸಂಗೀತ ಸೇವೆ ಒದಗಿಸುವರು. ಕು. ಭಾರ್ಗವಿ ಮತ್ತು ಸೌಂದರ್ಯ ಭರತ ನಾಟ್ಯ ನಡೆಸಿಕೊಡುವರು.

**ರಜತ ಮೂರ್ತಿಗಳ ಮೆರವಣಿಗೆ :** ನಾಳೆ ಬುಧವಾರ ಬೆಳಿಗ್ಗೆ 8 ಗಂಟೆಗೆ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಪೂಜೆ, ಹೂವಿನ ಅಲಂಕಾರ, ದೀಕ್ಷಾ ಕಾರ್ಯಕ್ರಮ ನಡೆಯಲಿದೆ. ನಂತರ ಲಿಂ. ಉಭಯ ಜಗದ್ಗುರುಗಳ ರಜತ ಮೂರ್ತಿಗಳ ಮೆರವಣಿಗೆಯು ರಾಜಬೀದಿಗಳಲ್ಲಿ ಜರುಗಲಿದೆ.

## 16ಕ್ಕೆ ನಗರದಲ್ಲಿ ಭಗವದ್ಗೀತೆ ಸ್ಪರ್ಧೆ

ದಾವಣಗೆರೆ, ನ. 4 - ನಗರದ ಬ್ರಾಹ್ಮಣ ಸಮಾಜ ಸೇವಾ ಸಂಘದ ಮಹಿಳಾ ವಿಭಾಗದಿಂದ ಗೀತಾ ಜಯಂತಿ ಅಂಗವಾಗಿ ಭಗವದ್ಗೀತೆ ಸ್ಪರ್ಧೆಯನ್ನು ಇದೇ ದಿನಾಂಕ 16 ರ ಶನಿವಾರ ಬೆಳಿಗ್ಗೆ 12 ಗಂಟೆಗೆ ನಗರದ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಏರ್ಪಡಿಸಲಾಗಿದೆ.

**ಸ್ಪರ್ಧೆಯ ವಿವರ:** ಅಧ್ಯಾಯ ಒಂಭತ್ತು, ರಾಜ ವಿದ್ಯಾ ರಾಜಗುಹ್ಯ ಯೋಗಃ ಒಂದರಿಂದ 6 ವರ್ಷದ ಮಕ್ಕಳಿಗೆ ಮೊದಲಿಂದ 5 ಶ್ಲೋಕ, ಏಳರಿಂದ 12 ವರ್ಷದ ಮಕ್ಕಳಿಗೆ ಮೊದಲಿಂದ 10 ಶ್ಲೋಕ, 13 ರಿಂದ 20 ವರ್ಷದವರಿಗೆ ಮೊದಲಿಂದ 15 ಶ್ಲೋಕ.

ದಾವಣಗೆರೆ ತಾಲ್ಲೂಕಿನವರು ಮಾತ್ರ ಭಾಗವಹಿಸಲು ಅವಕಾಶವಿದ್ದು, 15 ನಿಮಿಷ ಮುಂಚಿತವಾಗಿ ಬಂದು ಹೆಸರು ನೋಂದಾಯಿಸಬೇಕು. ವಿವರಗಳಿಗೆ ಶ್ರೀಮತಿ ಚಂದ್ರಶೇಖರ ಅಡಿಗ (9964027146), ಶ್ರೀಮತಿ ನಳಿನಿ ಅಚ್ಯುತ್ (988605 8866)ಗೆ ಸಂಪರ್ಕಿಸಬಹುದು.

## ಶಿಂಗ್ರಿಹಳ್ಳಿ : ಕನ್ನಡ ರಾಜ್ಯೋತ್ಸವ ಆಚರಣೆ



ಹರಪನಹಳ್ಳಿ, ನ. 5 - ತಾಲ್ಲೂಕಿನ ಸಿಂಗ್ರಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಮೆರವಣಿಗೆಯ ನಂತರ ಚಿಕ್ಕ ಮಕ್ಕಳ ನೃತ್ಯದೊಂದಿಗೆ ರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ಹಾಲೇಶ್, ಮುಖಂಡರುಗಳಾದ ತಳವಾರ್ ಶೇಖರಪ್ಪ, ಈ ಫಕೀರಪ್ಪ ಟೀಇ ಪಕ್ಕಿರಾಜ್ ಮತ್ತು ಇತರರು ಉಪಸ್ಥಿತರಿದ್ದರು.

## ಇಂದು ದಿವ್ಯಾಂಗರ ವೈದ್ಯಕೀಯ ತಪಾಸಣೆ, ಸಾಧನಾ ಸಲಕರಣೆಗಳ ಮೌಲ್ಯಾಂಕನ ಶಿಬಿರ

ಶಾಲಾ ಸಾಕ್ಷರತಾ ಹಾಗೂ ಶಿಕ್ಷಣ ಇಲಾಖೆ ವತಿಯಿಂದ ಇಂದು ಬೆಳಿಗ್ಗೆ 9.30ಕ್ಕೆ ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ವಿಕಲ ಚೇತನ ಮಕ್ಕಳ ವೈದ್ಯಕೀಯ ತಪಾಸಣೆ ಮತ್ತು ಸಾಧನ ಸಲಕರಣೆಗಳ ಮೌಲ್ಯಾಂಕನ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರಕ್ಕೆ ಹರಿಹರ ತಾಲ್ಲೂಕು ವ್ಯಾಪ್ತಿಯ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1ರಿಂದ 10ನೇ ತರಗತಿಯ ವಿಕಲ ಚೇತನ ಮಕ್ಕಳನ್ನು ಶಿಬಿರಕ್ಕೆ ಕರೆ ತರುವ ಮೂಲಕ ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೊಟ್ರೇಶ್ ತಿಳಿಸಿದ್ದಾರೆ.

## ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನ, ಆರ್ಥಿಕ ಅನುದಾನಕ್ಕಾಗಿ ಅರ್ಜಿ

ದಾವಣಗೆರೆ, ನ.4- ಕೇಂದ್ರೀಯ ಸೈನಿಕ ಮಂಡಳಿಯು ಭಾರತೀಯ ಸೇನೆಯ ಜೆ.ಸಿ.ಓ ರ್‍ಯಾಂಕ್ ವರೆಗಿನ ಅಥವಾ ವಾಯು ಸೇನೆ, ನೌಕಾ ಸೇನೆಯ ತತ್ಸಮಾನ ರ್‍ಯಾಂಕ್ ವರೆಗಿನ ಮಾಜಿ ಸೈನಿಕರ ಮಕ್ಕಳು, ದ್ವಿತೀಯ ಪಿಯುಸಿಯಲ್ಲಿ ಶೇ.60ಕ್ಕಿಂತ ಅಧಿಕ ಅಂಕ ಪಡೆದು, ಇಂಜಿನಿಯರಿಂಗ್, ಮೆಡಿಕಲ್ ಮತ್ತು ಇತರೆ ವೃತ್ತಿಪರ ಶಿಕ್ಷಣದಲ್ಲಿ ಪದವಿ ವ್ಯಾಸಂಗಕ್ಕಾಗಿ 2024-25ನೇ ಸಾಲಿನಲ್ಲಿ ಪ್ರವೇಶಾತಿ ಪಡೆದು ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಪ್ರಧಾನ ಮಂತ್ರಿ ಶಿಷ್ಯವೇತನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಇದೇ ದಿನಾಂಕ 30ರ ಒಳಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಮಾಹಿತಿಗಾಗಿ 08182-220925 ಸಂಪರ್ಕಿಸಿ ಅಥವಾ ಕೇಂದ್ರೀಯ ಸೈನಿಕ ಮಂಡಳಿಯ ಜಾಲತಾಣ HTTPS://ONLINE.KSB.GOV.IN ವೀಕ್ಷಿಸಲು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕ ಡಾ.ಸಿ.ಎ. ಹಿರೇಮಠ ತಿಳಿಸಿದ್ದಾರೆ.

## ದಾವಿವಿಯಲ್ಲಿ ಇಂದು ಗಣರಾಜ್ಯೋತ್ಸವ ಪೂರ್ವ ಪರೇಡ್ ಶಿಬಿರ

ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯ ಹಾಗೂ ದಾವಣಗೆರೆ ವಿಶ್ವ ವಿದ್ಯಾ ನಿಲಯದ ಸಹಯೋಗದೊಂದಿಗೆ ಇಂದಿನಿಂದ ಇದೇ ದಿನಾಂಕ 14 ರವರೆಗೆ ಎನ್‌ಎಸ್‌ಎಸ್ ದಕ್ಷಿಣ ವಲಯ ಗಣರಾಜ್ಯೋತ್ಸವ ಪೂರ್ವ ಪರೇಡ್ ಶಿಬಿರವನ್ನು ಆಯೋಜಿಸಲಾಗಿದೆ. ಸಂಸದರಾದ ಡಾ ಪ್ರಭಾ ಮಲ್ಲಿಕಾರ್ಜುನ್ ಶಿಬಿರ ಉದ್ಘಾಟಿಸಲಿದ್ದಾರೆ.

ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಕುಲಪತಿ ಪ್ರೊ. ಬಿ.ಡಿ ಕುಂಬಾರ ಅಧ್ಯಕ್ಷತೆ ವಹಿಸುವರು, ಪ್ರಾದೇಶಿಕ ನಿರ್ದೇಶನಾಲಯದ ನಿರ್ದೇಶಕ ಡಿ.ಕಾರ್ತಿಕೇಯನ್, ಕುಲಸಚಿವ ಪ್ರೊ.ಮಹಾಬಲೇಶ್ವರ ಯು.ಎಸ್ ಭಾಗವಹಿಸಲಿದ್ದಾರೆ ಎಂದು ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ.ಅಶೋಕ್ ಕುಮಾರ್ ವಿ. ಪಾಳೇದ ತಿಳಿಸಿದ್ದಾರೆ.

**RAJASTHAN TOUR**
Dep: 29th Nov, 10 Days
Premium Group Tour
Rs, 59,600 pp Includes:
Flight Ticket 3 Star Hotels
South Indian meals Volvo bus transfer Local Tour Manager Please Contact :
**DVG WORLD TOURS**
P.J. Exten, Davangere
**99006 66122**
**99862 30333**

# ಪ್ರತಿಯೊಬ್ಬರೂ ಆತ್ಮಸಾಕ್ಷಿಯಿಂದ ಕರ್ತವ್ಯ ನಿರ್ವಹಿಸಬೇಕು



ದಾವಣಗೆರೆ, ನ.4- ಸಾರ್ವಜನಿಕ ಆಡಳಿತದ ಎಲ್ಲಾ ಕ್ಷೇತ್ರಗಳಲ್ಲಿ ಭ್ರಷ್ಟಾಚಾರವನ್ನು ತೊಲಗಿಸಲು ಆಡಳಿತದಲ್ಲಿ ಪಾರದರ್ಶಕತೆ, ನಿಸ್ವಾರ್ಥ ಸೇವೆ ಸಾರ್ವಜನಿಕ ಸೇವೆಯಲ್ಲಿ ಮೂಡಿಬರಬೇಕಿದೆ ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ ಲೋಕಾಯುಕ್ತ ವಿಭಾಗ, ಇವರುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಭ್ರಷ್ಟಾಚಾರ ನಿರ್ಮೂಲನಾ ಜಾಗೃತಿ ಅರಿವು ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭ್ರಷ್ಟಾಚಾರವು ನಿರಂತರ ಸೇವೆ ಹಾಗೂ ಪ್ರಾಮಾಣಿಕತೆಯನ್ನು ತಿಂದು ಹಾಕುತ್ತದೆ. ಸಮಾಜ ಕಲುಷಿತಗೊಂಡರೆ, ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಆದ್ದರಿಂದ ಪ್ರತಿಯೊಬ್ಬರು ಪಾರದರ್ಶಕವಾಗಿ ಮತ್ತು ಆತ್ಮಸಾಕ್ಷಿಯಿಂದ ತಮ್ಮ ಜವಾಬ್ದಾರಿಯ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ಮಾತನಾಡಿ, ಪ್ರತಿ

**ನ್ಯಾ.ರಾಜೇಶ್ವರಿ ಹೆಗಡೆ**

ಸರ್ಕಾರಿ ನೌಕರರಲ್ಲಿ ಕರ್ತವ್ಯ ಪ್ರಜ್ಞೆ, ಪ್ರಾಮಾಣಿಕತೆ ಮತ್ತು ಮಾನವೀಯತೆ ಇದ್ದಾಗ ಯಾವ ಸಮಸ್ಯೆಗಳು ಬರುವುದಿಲ್ಲ. ಮತ್ತು ಬೇರೆಯವರಿಗೆ ತೊಂದರೆಯೂ ಆಗುವುದಿಲ್ಲ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಮಾತನಾಡಿ, ನೌಕರರು ಕೆಲವೊಮ್ಮೆ ಕಾಯ್ದೆ, ಕಾನೂನಿನ ಆಚೆ ಕೆಲವು ವಿವೇಚನಾ ಅಧಿಕಾರ ಚಲಾಯಿಸುವ ಸಂದರ್ಭ ಒದಗಿಬರುತ್ತದೆ. ಅಂತಹ ಸಂದರ್ಭದಲ್ಲಿ ಪ್ರತಿ ಕೆಲಸವನ್ನು ನ್ಯಾಯಬದ್ಧವಾಗಿ, ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಕರ್ತವ್ಯನಿಷ್ಠೆಯಿಂದ ಸಮರ್ಪಕವಾಗಿ ಇರಬೇಕೆಂದು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾವೀರ ಮ.ಕರೆಣ್ಣವರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ದಾವಣಗೆರೆ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್ ಕೌಲಾಪುರೆ ಪ್ರತಿಜ್ಞಾ ವಿಧಿ ಬೋಧಿಸಿದರು.

# ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಚಿವ ಎಸ್ಸೆಸ್ಸೆಂ ನಿರ್ದೇಶನ

ದಾವಣಗೆರೆ, ನ.4- ತಾಲ್ಲೂಕಿನ ಮತ್ತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಹೂವಿನಮಡು ಗ್ರಾಮದಲ್ಲಿ ಸರ್ಕಾರಿ ಶಾಲೆ ಸೇರಿದಂತೆ ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಲ್ಲಿರುವ ಕುಂದುಕೊರತೆ ನೀಗಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಧಿಕಾರಿಗಳಿಗೆ ಸೂಚಿಸಿದರು.

ಹೂವಿನಮಡು ಸರ್ಕಾರಿ ಶಾಲೆಯು ಅಭಿವೃದ್ಧಿಯಿಂದ ವಂಚಿತವಾಗಿದ್ದು, ಸೌಲಭ್ಯಗಳನ್ನು ಒದಗಿಸುವಂತೆ ಕುರಿತು ಗ್ರಾಮಸ್ಥರು ಸಚಿವರಿಗೆ ಮನವಿ ಮಾಡಿದರು.

ಸಚಿವರು ಜಿಲ್ಲಾ ಪಂಚಾಯತ್ ಸಿಇಓ ಅವರಿಗೆ ದೂರವಾಣಿಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಯಾವ ಯಾವ ಸರ್ಕಾರಿ ಶಾಲೆಗಳಲ್ಲಿ ಕುಂದುಕೊರತೆಗಳು ಕಂಡು ಬರುತ್ತವೇಯೋ ಅವುಗಳನ್ನು ಶೀಘ್ರವಾಗಿ ನಿವಾರಿಸುವಂತಹ ಕ್ರಮಗಳನ್ನು ಜರುಗಿಸುವಂತೆ ತಿಳಿಸಿದರು.

ಈ ವೇಳೆ ಹೂವಿನಮಡು ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಾದ ಮಂಜಪ್ಪ, ರೇಖಾ, ಎಸ್.ಡಿ.ಎಂ.ಸಿ ಅಧ್ಯಕ್ಷ ರಂಗಪ್ಪ, ಶಿಕ್ಷಕಿ ಭಾಗ್ಯಲಕ್ಷ್ಮಿ, ಗ್ರಾಮದ ಮುಖಂಡರಾದ ಡಾ.ಮಲ್ಲಿಕಾರ್ಜುನಪ್ಪ, ಹೆಚ್.ಬಿ ಜಯ್ಯಪ್ಪ, ಗ್ರಾಮಸ್ಥರಾದ ಮಹಾಂತೇಶ್, ನಾಗರಾಜ್ ಹಾಗೂ ಇತರರು ಇದ್ದರು.



# ಬಸ್ ಹಳ್ಳಕ್ಕೆ ಉರುಳಿ 36 ಜನರ ಸಾವು

ಡೆಹರಾಡೂನ್, ನ. 4 - ಉತ್ತರಾಖಂಡದ ಅಲ್ಮೋರ ಜಿಲ್ಲೆಯಲ್ಲಿ ಖಾಸಗಿ ಬಸ್ ಒಂದು ಹಳ್ಳಕ್ಕೆ ಉರುಳಿ 36 ಜನ ಸಾವನ್ನಪ್ಪಿದ್ದಾರೆ.

ಬಸ್‌ನಲ್ಲಿ ಸುಮಾರು 60 ಜನರಿದ್ದರು. ಬಸ್‌ನಲ್ಲಿದ್ದ 24 ಜನರಿಗೆ ಗಾಯಗಳಾಗಿವೆ. ಇವರಲ್ಲಿ ನಾಲ್ವರ ಸ್ಥಿತಿ ಗಂಭೀರವಾಗಿದೆ. ದೀಪಾವಳಿ ರಜೆಯ ನಂತರ ಕೆಲಸಕ್ಕೆ ಮರಳುತ್ತಿದ್ದವರು ಅಪಘಾತಕ್ಕೆ ಸಿಲುಕಿದ್ದಾರೆ. ಬಸ್ ಸಾಮರ್ಥ್ಯ ಮೀರಿ ಜನರನ್ನು ಹತ್ತಿಸಿಕೊಳ್ಳಲಾಗಿತ್ತು.

ಗರ್ವಹಲ್ ಮೋಟರ್ ಓನರ್ ಅಸೋಸಿಯೇಷನ್ ನಿರ್ವಹಿಸುತ್ತಿದ್ದ ಬಸ್, ಪೌರಿ ಎಂಬಲ್ಲಿನಿಂದ ಕುಮಾಂವ್ ಎಂಬಲ್ಲಿಗೆ ತೆರಳುತ್ತಿತ್ತು. ರಾತ್ರಿ ಪ್ರಯಾಣ ಮುಗಿಸಿದ ನಂತರ ಬೆಳಿಗ್ಗೆ 8 ಗಂಟೆಗೆ ಅಪಘಾತ ಸಂಭವಿಸಿದೆ.

43 ಸೀಟುಗಳ ಸಾಮರ್ಥ್ಯದ ಬಸ್, ಅಲ್ಮೋರಾದ ಮರುಚ್ಲಾ ಪ್ರದೇಶದಲ್ಲಿ 200 ಮೀಟರ್ ಹಳ್ಳಕ್ಕೆ ಉರುಳಿದೆ. ಬಸ್ ರಾಮನಗರ ತಲುಪುವುದಕ್ಕೆಕೇವಲ 35 ಕಿ.ಮೀ. ಇದ್ದಾಗ ಅಪಘಾತ ಉಂಟಾಗಿದೆ.

ಬಂಡೆಗಳಿರುವ ಪ್ರದೇಶದಲ್ಲಿ ಬಸ್ ಉರುಳಿತ್ತು ಹಾಗೂ ಝರಿಯ ಸ್ವಲ್ಪ ದೂರದಲ್ಲೇ ನಿಂತಿತ್ತು. ಬಸ್ ಸಂಪೂರ್ಣ ನಜ್ಜುಗುಜ್ಜಾಗಿತ್ತು. ಮೃತರ ಕುಟುಂಬದವರಿಗೆ ತಲಾ 4 ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 1 ಲಕ್ಷ ರೂ. ನೆರವು ನೀಡುವುದಾಗಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಘೋಷಿಸಿದ್ದಾರೆ.

ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿದ್ದರೆ ತೀವ್ರ ಕ್ರಮ ತೆಗೆದುಕೊಳ್ಳಲಾಗುವುದು. ಇದರಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಧಾಮಿ ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೃತರ ಕುಟುಂಬಗಳಿಗೆ 2 ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 50 ಸಾವಿರ ರೂ.ಗಳ ನೆರವು ಘೋಷಿಸಿದ್ದಾರೆ.

# ಕಾರಿನಲ್ಲಿ ಉಸಿರುಗಟ್ಟಿ 4 ಮಕ್ಕಳ ಸಾವು

ಅಮ್ರೇಲಿ, ನ. 4 - ಗುಜರಾತ್‌ನ ಅಮ್ರೇಲಿ ಜಿಲ್ಲೆಯಲ್ಲಿ ಕಾರಿನಲ್ಲಿ ಆಡುತ್ತಿದ್ದ ನಾಲ್ವರು ಮಕ್ಕಳು, ಒಳಗೆ ಸಿಲುಕಿ ಉಸಿರು ಗಟ್ಟಿ ಸಾವನ್ನಪ್ಪಿದ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ.

ರಂಧಿಯಾ ಎಂಬ ಹಳ್ಳಿಯಲ್ಲಿ ಶನಿವಾರ ಈ ಘಟನೆ ನಡೆದಿದೆ. ಮಧ್ಯ ಪ್ರದೇಶದ ಧರ್ ಮೂಲದ ಕೃಷಿ ಕಾರ್ಮಿಕ ದಂಪತಿಯ ಮಕ್ಕಳು ಸಾವನ್ನಪ್ಪಿರುವುದಾಗಿ ಡಿವಎಸ್‌ಪಿ ಚಿರಾಗ್ ದೇಸಾಯಿ ತಿಳಿಸಿದ್ದಾರೆ.

ಭರತ್ ಮಂಡನಿ ಎಂಬುವವರಿಗೆ ಸೇರಿದ ಹೊಲದಲ್ಲಿ ದಂಪತಿ ಕೆಲಸ ಮಾಡುತ್ತಿದ್ದರು. ಏಳು ಮಕ್ಕಳು ಮನೆಯಲ್ಲೇ ಇದ್ದರು. ಇವರಲ್ಲಿ ನಾಲ್ಕು ಮಕ್ಕಳು ಮನೆಯ ಹತ್ತಿರದಲ್ಲೇ ಇದ್ದ, ಹೊಲದ ಮಾಲೀಕರ ಕಾರಿನೊಳಗೆ ತೆರಳಿದ್ದಾರೆ. ಮಕ್ಕಳು ಕಾರಿನ ಒಳಗಿನಿಂದ ಬಾಗಿಲನ್ನು ಲಾಕ್ ಮಾಡಿಕೊಂಡಿದ್ದಾರೆ. ಆಗ 2ರಿಂದ 7 ವರ್ಷದ ಮಕ್ಕಳು ಉಸಿರು ಕಟ್ಟಿ ಸಾವನ್ನಪ್ಪಿದ್ದಾರೆ.

ಪೋಷಕರು ಹಾಗೂ ಕಾರಿನ ಮಾಲೀಕ ಸಂಜೆ ಮರಳಿದಾಗ ಕಾರಿನಲ್ಲಿ ಮೃತದೇಹಗಳು ಪತ್ತೆಯಾಗಿವೆ.

# ಡ್ಯಾನ್ಸ್ ಸ್ಪರ್ಧೆ : ಎಂ.ವಿ. ಗುಣಶ್ರೀ ಆಯ್ಕೆ



ದಾವಣಗೆರೆ, ನ. 3 - ಮೈಸೂರಿನಲ್ಲಿ 'ಏನ್ ಟ್ಯಾಲೆಂಟ್ ಗುರು' ಸೀಜನ್-1ರ ಅಡಿಯಲ್ಲಿ ಕಳೆದ ವಾರ ನಡೆದ ರಾಷ್ಟ್ರಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಕು. ಎಂ.ವಿ. ಗುಣಶ್ರೀ ಅವರು ಸೀನಿಯರ್ ಸೋಲೋ ಡ್ಯಾನ್ಸ್‌ನಲ್ಲಿ ಬೆಸ್ಟ್ ಪರ್‌ಫಾರ್ಮರ್‌ನೊಂದಿಗೆ ಐದು ಸಾವಿರ ನಗದು ಬಹುಮಾನ ಪಡೆದಿದ್ದಾರೆ.

ಹಾಗೆಯೇ ನಗರದ ಡಿ. ವೈರಸ್ ಸ್ಟನ್ನರ್ಸ್ ಮಾಸ್ಟರ್ ಆನಂದ್ ಅವರ ನೇತೃತ್ವದ ಡ್ಯಾನ್ಸ್ ತಂಡ ಗ್ರೂಪ್ ಡ್ಯಾನ್ಸ್‌ನಲ್ಲಿ ರಾಷ್ಟ್ರಮಟ್ಟದಲ್ಲಿ 2ನೇ ಪ್ರಶಸ್ತಿಯೊಂದಿಗೆ ಐವತ್ತು ಸಾವಿರ ರೂ. ನಗದು ಬಹುಮಾನ ಪಡೆದಿದ್ದಾರೆ.

ಗುಣಶ್ರೀ ಅವರು ಡಿ. ವೈರಸ್ ಸ್ಟನ್ನರ್ಸ್ ಡ್ಯಾನ್ಸ್ ತಂಡದ ವಿದ್ಯಾರ್ಥಿನಿ. ಎ.ವಿ.ಕೆ. ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದು, ಮಾಜಿ ಮಹಾಪೌರರು ಹಾಗೂ ಮಹೇಂದ್ರಕರ್ ಟೆಕ್ಸ್‌ಟೈಲ್ಸ್ ಮಾಲೀಕ ಎಂ.ಎಸ್. ವಿಠ್ಠಲ್ ಅವರ ಪುತ್ರಿ.


ಜನ್ಮ ದಿನದ ಶುಭಾಶಯಗಳು



ಇಂದು ಜನ್ಮ ದಿನದ ಸಂಭ್ರಮದಲ್ಲಿರುವ
ಎಸ್.ಸಿ. ಕನ್‌ಸ್ಟ್ರಕ್ಷನ್ ಮಾಲೀಕರೂ
ಮತ್ತು ಗುತ್ತಿಗೆದಾರರೂ ಆದ
ಶ್ರೀ ಸುಭಾಷ್‌ಚಂದ್ರ. ಎಸ್.
ಅವರಿಗೆ ಜನ್ಮ ದಿನದ ಶುಭಾಶಯಗಳು.
ಶುಭಾಶಯ ಕೋರುವವರು :
ರಾಷ್ಟ್ರೀಯ ಹೆದ್ದಾರಿ ಗುತ್ತಿಗೆದಾರರ ಸಂಘ ಬೆಂಗಳೂರು.


## ಬಿ. ಕಲಪನಹಳ್ಳಿ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಬಿ. ನಾಗರಾಜ್



ದಾವಣಗೆರೆ, ನ.4- ತಾಲ್ಲೂಕಿನ ಬಿ.ಕಲಪನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಬಿ.ನಾಗರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಚುನಾವಣಾ ಧಿಕಾರಿ ಎಲ್. ಸುರೇಶ್ ನಾಯ್ಕ, ಸಂಘದ ಉಪಾಧ್ಯಕ್ಷ ಯಲ್ಲಪ್ಪ, ನಿರ್ದೇಶಕರಾದ ಕೆ.ಜಿ.ಕಿರಣ್ ಕುಮಾರ್, ಡಿ.ಕೆ.ಅರುಣ್, ಜಿ.ಯು. ವಿನಯ್ ಕುಮಾರ್, ಜಿ.ಚಂದ್ರಪ್ಪ, ಕೆ.ಆರ್.ರಾಮಪ್ಪ, ಅನ್ನಪೂರ್ಣಮ್ಮ ಮತ್ತು ಕರಿಬಸಮ್ಮ, ಕೆ.ಇ.ಬಸವನ ಗೌಡ, ಯು.ಹೆಚ್. ಸಣ್ಣಬಸಪ್ಪ, ಎ.ವಿ ಬಸವೇಶ ಮತ್ತಿರರು ಉಪಸ್ಥಿತರಿದ್ದರು.

## ಮಹಾರಾಷ್ಟ್ರ : ನಾಮಪತ್ರ ವಾಪಸ್ ಪಡೆದ ಕಾಂಗ್ರೆಸ್ ಅಭ್ಯರ್ಥಿ

ಮುಂಬೈ, ನ. 4 - ಮಹಾರಾಷ್ಟ್ರ ವಿಧಾನಸಭೆಗೆ ನಡೆಯುತ್ತಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಮಧುರಿಮ ರಾಜೆ ಛತ್ರಪತಿ, ತಮ್ಮ ನಾಮಪತ್ರಗಳನ್ನು ವಾಪಸ್ ಪಡೆದಿದ್ದಾರೆ. ಇದರಿಂದಾಗಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಭ್ಯರ್ಥಿ ಇಲ್ಲದಂತಾಗಿದೆ. ಈ ಕ್ಷೇತ್ರಕ್ಕೆ ಮೊದಲು ಮಾಜಿ ಕಾರ್ಪೊರೇಟರ್ ರಾಜೇಶ್ ಲಟ್ಕರ್ ಅವರಿಗೆ ಟಿಕೆಟ್ ನೀಡಲಾಗಿತ್ತು.

ಆನಂತರ ಲಟ್ಕರ್‌ಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿದ ಕೆಲವರು, ಪಕ್ಷದ ಕಚೇರಿಯನ್ನು ಧ್ವಂಸಗೊಳಿಸಿದ್ದರು. ಇದು ತೀವ್ರ ವಿವಾದಕ್ಕೆ ಕಾರಣವಾಯಿತು. ಈ ವಿವಾದದಿಂದ ಬೇಸತ್ತು ಮಧುರಿಮ ರಾಜೇ ಅವರು ನಾಮಪತ್ರ ವಾಪಸ್ ಪಡೆದಿದ್ದಾರೆ ಎನ್ನಲಾಗುತ್ತಿದೆ.

ಲಟ್ಕರ್ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಅವರಿಗೆ ಪಕ್ಷ ಬೆಂಬಲ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

## ಸಂತ ಸಕ್ಕೂ ಬಾಯಿ ಮಹಿಳಾ ಮಂಡಳಿಗೆ ರೇಣುಕಾ ಪಿಸೆ ಅಧ್ಯಕ್ಷೆ



ದಾವಣಗೆರೆ, ನ. 4 - ನಗರದ ನಾಮದೇವ ಸಿಂಪಿ ಸಮಾಜದ ಸಂತ ಸಕ್ಕೂಬಾಯಿ ಮಹಿಳಾ ಮಂಡಳಿಗೆ ಅಧ್ಯಕ್ಷರಾಗಿ ಶ್ರೀಮತಿ ರೇಣುಕಾಬಾಯಿ ಪಿಸೆ ಅವರು ಸರ್ವಾನು ಮತದಿಂದ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಶ್ರೀಮತಿ ಲಕ್ಷ್ಮೀಬಾಯಿ ಕಂಚಿಕೇರಿ, ಶ್ರೀಮತಿ ಶ್ಯಾಮಲಾ ಬೊಂಗಾಳೆ, ಶೋಭಾ ಖಟಾವ್‌ಕರ್, ಪ್ರಧಾನ ಕಾರ್ಯದರ್ಶಿಯಾಗಿ ವಿದ್ಯಾ ದಾವಸ್ಕರ್, ಎಂ.ವಿ. ನಿರ್ಮಲ, ಸಹ ಕಾರ್ಯದರ್ಶಿಗಳಾಗಿ ಲಕ್ಷ್ಮೀ ಆನಂದ ಕಾಕಡೆ, ಖಜಾಂಚಿಯಾಗಿ ರೇಖಾ ವಿಠ್ಠಲ ರಾಕುಂಡೆ, ಸಂಘಟನಾ ಕಾರ್ಯದರ್ಶಿಯಾಗಿ ಕೆ.ವಿ. ಲೀಲಾವತಿ, ಸಂಚಾಲಕರಾಗಿ ಮಧು ಎಂ. ಬೊಂಗಾಳೆ, ಸಹ ಸಂಚಾಲಕರಾಗಿ ರತ್ನಮ್ಮ ಖಟಾವಕರ್ ಹಾಗೂ ಪದ್ಮಾ ರಾಕುಂಡೆ, ಮಾಧ್ಯಮ ಪ್ರಮುಖರಾಗಿ ಸುಮಂಗಳ ಮಾಳೋದೆ ಹಾಗೂ ಎಂ. ಗೀತಾ ಪಿಸೆ, ಸಾಂಸ್ಕೃತಿಕ ಸಂಯೋಜಕರಾಗಿ ನೇತ್ರಾ ನಂದಿನಿ ಖಟಾವ್‌ಕರ್ ಹಾಗೂ ಶಕುಂತಲಾ ಪಿಸೆ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ನಾಮದೇವ ಸಿಂಪಿ ಸಮಾಜದ ಅಧ್ಯಕ್ಷರಾದ ಎಂ.ಎಸ್. ವಿಠ್ಠಲ್, ಗೌರವಾಧ್ಯಕ್ಷರಾದ ಜ್ಞಾನದೇವ ಬೊಂಗಾಳೆ, ಉಪಾಧ್ಯಕ್ಷ ಮಂಜುನಾಥ ಮಹೇಂದ್ರಕರ್ (ಅವಿನಾಶ್) ಹಾಗೂ ದೈವ ಮಂಡಳಿ ಸದಸ್ಯ ಆನಂದರಾವ್ ರಾಕುಂಡೆ, ರವೀಂದ್ರನಾಥ್ ದಾವಸ್ಕರ್, ಆರ್. ಮಣಿಕಂಠ ಪಿಸೆ, ಪರಶುರಾಮ್‌ರಾವ್ ಮಹೇಂದ್ರಕರ್ ಹಾಗೂ ಇತರರು ಹಾಜರಿದ್ದರು.



ಉಚಿತ ಕಣ್ಣಿನ ಪರೀಕ್ಷೆ
ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ
ದಿನಾಂಕ : 01.11.2024 ರಿಂದ
20.11.2024 ರವರೆಗೆ
ಸಮಯ : ಬೆಳಗ್ಗೆ 10.30 ರಿಂದ
ಮಧ್ಯಾಹ್ನ 1.30 ರವರೆಗೆ
ಮಧ್ಯಾಹ್ನ 3.00 ರಿಂದ
ಸಂಜೆ 7.00 ಗಂಟೆವರೆಗೆ



ದೃಷ್ಟಿ ದೋಷವುಳ್ಳವರಿಗೆ ಜಪಾನ್ ನಿರ್ಮಿತ ಕಂಪ್ಯೂಟರ್‌ನಿಂದ ಕಣ್ಣಿನ ಪರೀಕ್ಷೆ ಮಾಡಲಾಗುವುದು.
ಕಣ್ಣಿನ ಪೊರೆ ಬಂದಿರುವ ರೋಗಿಗಳಿಗೆ ಲೆನ್ಸ್ ಅಳವಡಿಸಿ, ಉಚಿತ ಶಸ್ತ್ರಚಿಕಿತ್ಸೆಗೆ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ನೋಂದಾಯಿಸಿಕೊಳ್ಳಲಾಗುವುದು.
ಸ್ಥಳ : ದೀಪ್ತಿ ಆಪ್ಟಿಕಲ್ಸ್
(ಕಂಪ್ಯೂಟರಿಕೃತ ಕಣ್ಣಿನ ಪರೀಕ್ಷಾ ಕೇಂದ್ರ)
ಚಿರಂಜೀವಿ ಮೆಡಿಕಲ್ಸ್‌ಪಕ್ಕ, ಸರ್ಕಾರಿ ಆಸ್ಪತ್ರೆ ಹತ್ತಿರ, ಇಂದಿರಾ ನಗರ, ಹರಿಹರ.
ಸಂಪರ್ಕಿಸಿ : 91647 58836


## ನಗರದಲ್ಲಿ ಇಂದಿನಿಂದ ಪಶುಸಂಗೋಪನಾ ಚಟುವಟಿಕೆಗಳ ತರಬೇತಿ


ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶು ಸಂಗೋಪನಾ ಚಟುವಟಿಕೆಗಳ ತರಬೇತಿ ಆಯೋಜಿಸಲಾಗಿದೆ. ಇಂದು ಮತ್ತು ನಾಳೆ ಹಾಗೂ ಇದೇ ದಿನಾಂಕ 29, 30ರಂದು ಆಧುನಿಕ ಹೈನುಗಾರಿಕೆ ತರಬೇತಿ, ಇದೇ ದಿನಾಂಕ 11 ಮತ್ತು 12ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಹಾಗೂ ಇದೇ ದಿನಾಂಕ 15 ಮತ್ತು 16ರಂದು ಕೋಳಿ ಸಾಕಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

HAPPY BIRTHDAY
ಇಂದು ತಮ್ಮ ಹುಟ್ಟು ಹಬ್ಬ ಆಚರಿಸಿಕೊಳುತ್ತಿರುವ ನಮ್ಮೆಲ್ಲರ ಆತ್ಮೀಯ ಮಿತ್ರರೂ,
ಕಲಾ ಕನ್ಸ್ಟ್ರಕ್ಷನ್ಸ್‌ನ ಇಂಜಿನಿಯರ್, ಹೆಚ್.ವಿ. ಮಂಜುನಾಥ ಸ್ವಾಮಿ
ತಮ್ಮ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಾ ಅನೇಕ ಕಟ್ಟಡ ಕಾರ್ಮಿಕರ ಬದುಕಿಗೆ ಬೆಳಕಾಗಿದ್ದಾರೆ.
ಕಲೆ, ಸಾಹಿತ್ಯ ಸಂಗೀತ, ಸಂಸ್ಕೃತಿಕ, ಸಮಾಜಿಕ, ಅಧ್ಯಾತ್ಮಿಕ ಚಿಂತಕರು,
ಅನೇಕ ಸಂಘ ಸಂಸ್ಥೆಗಳ ಮೂಲಕ ಎಲೆಮರೆ ಕಾಯಿಯಾಗಿ ಸಮಾಜಕ್ಕೆ
ಸೇವೆ ಸಲ್ಲಿಸುತ್ತ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆರೆಯುವ ಸರಳ ವ್ಯಕ್ತಿತ್ವ,
ಸ್ನೇಹಜೀವಿ, ನೇರ, ನಿಷ್ಟುರ, ಆಕರ್ಷಕ ಮಾತುಗಾರ, ಬರಹಗಾರ, ಹಾಸ್ಯಗಾರ ಹೀಗೆ
ಬಹುಮುಖ ಪ್ರತಿಭೆಯ ನಮ್ಮೆಲ್ಲರ ಆತ್ಮೀಯ ಮಿತ್ರರಾದ
ಲಯನ್ ಹೆಚ್.ವಿ.ಮಂಜುನಾಥ ಸ್ವಾಮಿಯವರಿಗೆ
ಹುಟ್ಟು ಹಬ್ಬದ ಶುಭಾಶಯಗಳು, ದೇವರು ಅವರಿಗೆ ಆರೋಗ್ಯ,
ನೆಮ್ಮದಿಯನ್ನು ದಯಪಾಲಿಸಲಿ ಎಂದು ಹಾರೈಸುವ..
ಚಿಂತನ-ಮಂತನ ಮತ್ತು ಹರಟೆಕಟ್ಟೆ ಬಳಗ,
ವಾಯು ವಿಹಾರದ ಗೆಳೆಯರ ಬಳಗ.



॥ ಶ್ರೀ ಪಿಲ್ಲಿ ಗುಂಡ್ಲ ಆಂಜನೇಯ ಸ್ವಾಮಿ ಪ್ರಸನ್ನ ॥



ಶುಭ ವಿವಾಹ - ಆಮಂತ್ರಣ
ಪೂಜ್ಯನೀಯರಾದ ಶ್ರೀಮತಿ ಬಸಮ್ಮ ಮತ್ತು ಶ್ರೀ ಸಿ.ಬಿ. ಅಜ್ಜಣ್ಣ
ಇವರ ಕೃಪಾಶೀರ್ವಾದಗಳೊಂದಿಗೆ



ಶ್ರೀಮತಿ ರೇಖಾ ನಾಗರಾಜ್ ಮತ್ತು ಶ್ರೀ ಎ. ನಾಗರಾಜ್
ನಂ. 842, 2ನೇ ಮುಖ್ಯರಸ್ತೆ, 5ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 04
ಇವರು ಮಾಡುವ ವಿಜ್ಞಾಪನೆಗಳು....
ನಮ್ಮ ಪುತ್ರ
ಚಿ.ರಾ. ಶ್ರೀ ರೂಪಿತ್ ನಾಗರಾಜ್ B.E., Civil
ಚಿ. ಸೌ. ನಿರೀಕ್ಷ (ನಿಶ್ಚಿತ) MBA
(ಶ್ರೀಮತಿ ಹೇಮಾಮಾಲಿನಿ ಮತ್ತು
ದಿ. ಶ್ರೀ ಸತೀಶ್ ಎಂ.ಬಿ. ರವರ ಏಕೈಕ ಪುತ್ರಿ, ಚಿಕ್ಕಮಗಳೂರು)
ಇವರ ವಿವಾಹ ಮಹೋತ್ಸವವನ್ನು ಎಸ್.ಎಸ್. ಕನ್ವೆನ್ಷನ್ ಹಾಲ್
ಎಸ್.ಎಸ್. ಮಾಲ್ ಹತ್ತಿರ, ಶಾಮನೂರು ರಸ್ತೆ, ದಾವಣಗೆರೆ, ಇಲ್ಲಿ ನೆರವೇರಿಸಲು
ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಸಕುಟುಂಬ ಸಮೇತರಾಗಿ ಆಗಮಿಸಿ,
ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ
ಆರತಕ್ಷತೆ : ದಿನಾಂಕ : 05.11.2024 ಸಂಜೆ : 7.30 ರಿಂದ
ಮುಹೂರ್ತ : ದಿನಾಂಕ : 06.11.2024, ಬುಧವಾರ
ಬೆಳಿಗ್ಗೆ : 10.50 ರಿಂದ 11.20
ಲಗ್ನ : ಧನಸ್ಸು
ಸಂಗೀತ ಸಂಜೆ
ದಿನಾಂಕ : 05.11.2024 ಮಂಗಳವಾರ ಖ್ಯಾತ ವೈಯೋಲಿನ್ ವಾದಕರಾದ ಶ್ರೀರಾಮ್ ಚರಣ್ ಮತ್ತು ತಂಡದವರಿಂದ



ತಮ್ಮ ಆಗಮನಾಭಿಲಾಷಿಗಳು....
ಶ್ರೀಮತಿ ರೇಖಾ ನಾಗರಾಜ್ ಮಾಜಿ ಮೇಯರ್
ಶ್ರೀ ಎ. ನಾಗರಾಜ್ ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas